ತೂಕಳೆತೆಗಳ ತಪಾಸಣೆಯ ವರ್ತಕರಿಗೆ ಜಳೇ ವರ್ತಮಾನದ ತೂಕಳೆತೆಗಳನ್ನು ವಿಸರ್ಜನೆಯ ಹೊಸ ಚಿಣ್ಣಾಕ ಅಕ್ಕತಿಗಳಳ್ಳ ತೂಕಳತೆಗಳನ್ನು ಕೊಂಡುಕೊಳ್ಳಬೇಕೆಂದು ನಿಗ್ರಹಿಸುತ್ತಿದಾರೆ ಒಂದೆರಡು ವರ್ಷಗಳ ಹಿಂದೆ ಕೊಂಡು ಕೊಂಡ ತೂಕಳತೆಗಳು ಸರಿಯಾಗಿರುವಾಗ, ಮತ್ತು ಅವುಗಳಿಂದ ಕಾರ್ಯಭಾಗವಾಗುತ್ತಿರುವಾಗ ಹೊಸ ತೂಕಳತೆಗಳನ್ನು ಕೊಂಡುಕೊಳ್ಳಲು ಒತ್ತಾಯಪಡಿಸುವದೇಕೆಂದು ವರ್ತಕರು ದೂರುತ್ತಿದ್ದಾರೆ' ಜಳೇ ಅಳತೆಗಳು ಪ್ರಾಣಿಯ ತನಕ ಅನ್ನೇ ಉಪಯೋಗಿಸುತ್ತೇವೆ, ಹೊಸ ಳಲ್ಲುಗಳನ್ನು ತೆಗೆದುಕೊಳ್ಳುವಾಗ ಚಿಣ್ಣಾಕ ಳಲ್ಲುಗಳನ್ನು ಕೊಂಡುಕೊಳ್ಳುತ್ತೇವೆ ಎಂದು ವರ್ತಕರು ಪರಿಪರಿಯಿಂದ ಜೋಡಿಗೂ ತಪಾಸಣೆ ಅಧಿಕಾರಿಗಳು ಕೇಳುವದಿಲ್ಲ, ಜಳೇ ವರ್ಷಲಾತೂಕಳತೆಗಳು ಈಗ ಉಪಯೋಗಿಯಂತೆ ರದ್ದಾಗಿವೆಯೆಂತಲೂ ಅವನ್ನಿಟ್ಟುಕೊಂಡರೆ ಗುನ್ಹೆ ಯಾಗುತ್ತದೆಂತಲೂ ಉತ್ತರ ಕೊಡುತ್ತಾರೆ. ಈ ಪರಿಸ್ಥಿತಿಯಲ್ಲಿ ಏನು ಮಾಡಬೇಕೆಂದು ತಿಳಿಯದೆ ವರ್ತಕರು ದಿಙ್ಮೂಢರಾಗಿದ್ದಾರೆ ' ಹೊಸ ಚಿಟ್ಟಾಕ ತೂಕಳತೆಗಳನ್ನು ಕೊಂಡು ಕೊಳ್ಳುವದಾದರೆ ಕುಮಟಾ ಶಹರದೊಳಗಿನ ಎಲ್ಲ ವರ್ತಕರಿಗೆ ಕನಿಷ್ಠ ೩-೪ ಸಾವಿರ ರೂಪಾಯಿಗಳು ತಗಲುವ ವಂತೆ ! ಮೊದಲೇ ವ್ಯಾಪಾರ ಕುಗ್ಗಿತೆಂದು ತಾವು ಮರ ಗುತ್ತಿರುವಾಗ, ತೂಕಳತೆ ತಾಯಿದೆಯ ಈ ಹೊಸ ಸಂ ಕ್ರಾಂತಿಯು ತಮ್ಮ ಮೇಲೆ ಬಂತಲ್ಲ ಎಂದು ವ್ಯಾಪಾರಿಗಳು ಗೋಳಿಡುತ್ತಿದ್ದಾರೆ' ತೂಕಳತೆಯ ತಯಾರಿಯು ತಪ್ಪಗಳು ಸಿದೋಷ ಮತ್ತು ಇಷ್ಟ ಇರಬಹುದು, ಆದರೆ ಅವನ್ನು ಅಮಲಿನದ್ದಿ ತರುವಾಗ ವ್ಯಾಪಾರಿಕ್ಕರ ಗೋಳು ಮುರಿಯ ದಂತೆ ನೋಡಿಕೊಳ್ಳಬೇಕಲ್ಲವೇ ? ಮುಂಬಯಿ ಸರಕಾರವು ಇತ್ತ ಲಕ್ಷಗೊಟ್ಟು ಬಡ ವರ್ತಕರನ್ನು ತಾಯಬೇಕಾಗಿ ವರ್ತಕರು ಮೊರೆಯಿಡುತ್ತಿದ್ದಾರೆ!

ಮುಂಬಯಿಯ ಸುಹಾಮಂತ್ರಿಗಳಾದ ಸನ್ಮಾನ್ಯ ಬಾಳಾ ಸಾಹೇಬ ಖೇರರವರು ಮುಂದಿನ ತಿಂಗಳಲ್ಲಿ ನಮ್ಮ ಜಿಲ್ಲೆಯಲ್ಲಿ ಸಂಚರಿಸಬರುವುದೆಂದು ಮುಂಬಯಿಯಲ್ಲಿರುವ ಗೆಳೆಯರೊಬ್ಬರು ತಿಳಿಸುತ್ತಾರೆ

ಇವೇ ಬರುವ ಗುರುವಾರ ತಾ ೬ರಿಂದ ತಾ ೧೩ ಗುರುವಾರ ತನಕ ರಾಷ್ಟ್ರೀಯ ಸಶಾಹವಿದೆ ಆ ವಾರದಲ್ಲಿ ಜಗದೆಲ್ಲಿರೂ ಆ ಭಾಗ ಚರಿಯಾ ಸಂಘದ ಶುದ್ಧ ಖಾದಿ

THE CHITRAPUR EXPRESS SERVICE, LTD.

ದಿ ಚಿತ್ರಾಪುರ ಎಕ್ಸಪ್ರೆಸ್ ಸರ್ವಿಸ್, ಲಿಮಿಟೆಡ್.

ಉತ್ತರ ಕನ್ನಡ ಜಿಲ್ಲೆಯೊಳಗೆ ವ್ಯವಸ್ಥಿತವಾಗಿ ಮೋಟರ ಸರ್ವಿಸ್ ನಡಿಸುವ

ಉತ್ತರ ಕನ್ನಡ ಜಿಲ್ಲೆಯ ಕಂಪನಿ ಇದೊಂದೇ !

ಕಾರವಾರದಿಂದ ಭಟಕಳ, ಕುಮಟೆಯಿಂದ ಶಿರ್ಸಿ ಮೊದಲಾದ ಕಡೆಗಳಲ್ಲೆಲ್ಲ

ನಿಯಮಿತವಾಗಿ ಮೋಟರ ಸರ್ವಿಸು ನಡೆಯುತ್ತದೆ.

ಪ್ರಯಾಣಿಕರಿಗೆ ಯಾವತ್ತೂ ಅನುಕೂಲತೆಗಳನ್ನು ಪೂರೈಸಲು ವಿಶೇಷ ದಕ್ಷತೆ ಕೊಡೋಣಾಗುತ್ತದೆ.

☞ ಏನಾದರೂ ಅನಾನುಕೂಲತೆಯಾದರೆ ಕೂಡಲೆ ಈ ಕೆಳಗೆ ಸಹಿ ಮಾಡಿದವರಿಗೆ ತಿಳಿಸತಕ್ಕದ್ದು ಅಂದರೆ ಶೀಘ್ರವೇ ವ್ಯವಸ್ಥೆಯಾಗುವ್ವದೆ

ಕು ಮ ಟಾ,
ತಾ 1—4—1939

S. M. MIRJANKAR,
ಮೆನೇಜಿಂಗ ಡ್ಯಾರೆಕ್ಟರ

ಯನ್ನು ಕೊಂಡು ಕೊಂಡು ಖಾದಿಯ ಉತ್ಪೋಗಕ್ಕೂ ಗ್ರಾಸೋದ್ಯೋಗಕ್ಕೂ ಪ್ರೋತ್ಸಾಹ ಕೊಟ್ಟು ಹಾಗೂ ದರಿದ್ರ ನಾರಾಯಣನ ಅಲ್ಪ ಸ್ವಲ್ಪ ಸೇವೆ ಮಾಡಿದ ಪುಣ್ಯವನ್ನು ಉಟ್ಟು ಕೊಳ್ಳಬೇಕಾಗಿ ಬಿ। ಫಿ। ಚರಟಾ ಸಂಘದ ಕರ್ನಾಟಕ ಪ್ರಾಂತೀಯ ಕಾರ್ಯದರ್ಶಿಗಳು ವಿನ್ನವಿಸುತ್ತಾರೆ.

(ಶಿ) ಮನ್ನೆ ಲೆಮಾಂಬಿನ ಮಠದ (ಶ್ರೀ ಸ್ವಾಮಿಗಳು ಮಂಗಳವಾರ ಇಲ್ಲಿ ಚಿತ್ರೀಸಿ (ಶ್ರೀ ವಿಠೋಬ ದೇವಸ್ಥಾನದ ಪಟ್ಟ ೨ ದಿನ ಮುಳ್ಳಾಮು ಮಾಡಿ, ಸತ್ಕಾರಗಳನ್ನು ಸ್ವೀಕರಿಸಿ ಗುರುವಾರ ನೆಲಮಾಂಬಿಗೆ ತೆರಳಿದರು

ಕೋಡಳಿಯಂದ ರಚಕ್ತಗುಪ್ತರೊಬ್ಬರು ತಿಳಿಸುತ್ತಾರೆ — ಕೋಡಳಿಗೆ, ಮಿರ್ಜಾನಿನ ಮುಂತಾದ ಹಳ್ಳಿಗಳಲ್ಲಿ ಖಾಸಗಿ ಕಾರ್ಯದ ಬಗ್ಗೆ ತಿರುಗಾಡುತ್ತಿರುವಾಗ ಈ ಕಡೆಯ ಲೋಕಲ್ ಬೋರ್ಡಿನ ಮತದಾರರು ಯಾರಿಗೆ ಮತ ಕೊಡುವ ಅಲೋಚನೆ ಮಾಡಿದ್ದಾರೆಂದು ತಿಳಿಕೊಳ್ಳುವ ವಿಚಾರ ಬಂತು. ಅಕ್ಕೇರಿಗೆ ಆಂತರಂಗದಲ್ಲಿ ಪ್ರಶ್ನೆ ಮಾಡಿದೆನು. ಹೊನ್ನಾವರ ತಾಲೂಕಿನಲ್ಲಿ ಕೊಂಗ್ರೆಸ ಹುರಿಯಾಳುಗಳಾಗಿ ನಿಲ್ಲಿಸಲ್ಪಟ್ಟವರೊಬ್ಬರು ತಮಗೆ ರಾ। ರಾಘವೇಂದ್ರ ನಾಯ್ಕರಿಗೆ ಮತ ಕೊಡಲು ಅಂತರಂಗದಿಂದ ತಿಳಿಸಿದ್ದಾರಾಗಿ ಹೇಳಿದರು! ಅದನ್ನು ಕೇಳಿ ನಾನು ದಿಗಿಲು ಬಿದ್ದೆ. ಕೊಂಗ್ರೆಸ ಮುದ್ರೆಯನ್ನು ಒತ್ತಿಸಿಕೊಂಡು, ಕೊಂಗ್ರೆಸ ವೇಷ ಧರಿಸಿಕೊಂಡು ಚುನಾವಣೆಗೆ ನಿಂತ ಸ್ವಹಸ್ತರೊಬ್ಬರು ಇನ್ನೊಂದು ಕ್ಷೇತ್ರದೊಳಗಿನ ತಮ್ಮ ಗೆಳೆಯರಿಗೂ ಅಮು ಯಾಯಗಳಿಗೂ ಕೊಂಗ್ರೆಸ್ಸೇತರ ಹುರಿಯಾಳುವಿಗೆ ಮತ ಕೊಡಹೇಳಿ ಕೊಂಗ್ರೆಸ-ದ್ರೋಹ ಮಾಡುತ್ತಿರುವದು ಸೋಚಗಸಲ್ಲವೇ? ಇಂತಹ ದ್ವೈಧೀಭಾಗಕ್ಕೆ ಕೊಂಗ್ರೆಸ ಮುದ್ರೆಯ ಅಶೀರ್ವಾದ ಕೊಟ್ಟ ನಿಷ್ಠಾಳ್ ಮೋರ್ಡಿಗೆ ಹೂಖವೆನಿಸಬೇಕೋ ಮಂದಮತಿಯೆನಿಸಬೇಕೋ ವಿನಂ ಸೂಚಿಸುವದಿಲ್ಲ!" ಇತ್ಯಾದಿ

ಹೊನ್ನಾವರ— (ಶ್ರೀ ರಾಮನವಮಿಯ ರಥೋತ್ಸವವು ಸಾಂಗವಾಗಿ ನೆರವೇರಿತು "ಕನಸ ಜೇವನ" ಚಿತ್ರ ಕಂಪನಿಯ ಪ್ರತಿಭಿಧಿಗಳು ಜಾತ್ರೆಯಲ್ಲಿ ನೆರೆದ ಜನರಿಗೆ ಒಂದೊಂದು ಒಟ್ಟಲು ಚಹಾ ಮತ್ತು ಒಂದೊಂದು ಉಚ್ಚು ಕೊಡುತ್ತಿದ್ದುದು ಕಂಡುಬಂತು! ತಮ್ಮ ಕಂಪನಿಯ ಚಿತ್ರದ ಪ್ರಚಾರ ಮಾಡುವ ಬಗ್ಗೆ ಈ ಸಮಾರಾಧನೆ ನಡಿಸಿದೆಂದು ಹೇಳುತ್ತಾರೆ

ಇಲ್ಲಿಯ ಸಬಜಜ್ಜ ಮಿಸ್ಟರ್ ನರಸಿಂಹರಾವರಿಗೆ ವೆಳಗಾವಿಗೆ ವರ್ಗವಾಗಿದೆ. ಬೀಳ್ಕೊಡಿಗೆ ಔತಣ ನಂತರ ಕೆಲ ಕಾಲ ಇಲ್ಲಿಯ ಕೋರ್ಟಿನಲ್ಲಿ ಸಬಜಜ್ಜರು ಇರಲಿಕ್ಕಿಲ್ಲ ದಾನೆ ಮುಂತಾದವುಗಳ ವಿಚಾರದ ಕೆಲಸ ತಡೆದಿರುವದು ಇನ್ನುಳಿದ ಕೆಲಸಗಳು ಯಾವ ಪ್ರಕಾರ ನಡೆಯುವವು

ಇಲ್ಲಿಯ ಮಾಮಲೇದಾರ ಮಿಸ್ಟರ್ ಗೊರವನಕೊಳ್ಳರವರಿಗೂ ವರ್ಗವಾಗಿದೆ ಅವರ ಸ್ಥಳದಲ್ಲಿ ರಾಜಾ ಶ್ರೀ ಎಸ್. ಸಂಡಿತರವರು ಬರುವರು

ಯಾವ ಅಡಚಣಿಯಿಂದಲೋ ವಿನೋ, ನೆಗರ ಸಭೆಯವರು ಮೂಗರಗಳ ಮೇಲೆ ನೀರು ಹಾಕುವದನ್ನು ನಿಲ್ಲಿಸಿದ್ದಾರೆ ಈ ನೆಡು ಬೇಸಿಗೆ ಕಾಲದಲ್ಲಿ ಹೀಗೇಕೆ ಮಾಡುವರೋ ತಿಳಿಯದು! ಧೂಳಿನ ಉಪದ್ರವ ಬಹಳವಾಗಿದೆ

ಹಲಗೇರಿ ಕಲಾಸೇವಕ ನಾಟಕ ಮಂಡಳಿಯವರು ಇದೀಗ ಈ ಊರಲ್ಲಿ ಮುಕ್ಕಾಮು ಮಾಡಿರುತ್ತಿದ್ದು ತಮ್ಮ ಕೋಶಲ್ಯದ ನಾಟಿಕಗಳನ್ನು ಪ್ರಯೋಗಿಸುತ್ತಿದ್ದಾರೆ ಕಳೆ ಮಟ್ಟಿಗೆ ಲೋಕಾಶ್ರಯ ಸಿಗುತ್ತಿದೆ

ಸಹಕಾರ ಸಂಘಗಳ ರಿಜಿಸ್ಟ್ರರಿಂದ ಮನ್ನಣೆಹೊಂದಿ ಬಂದ ಗುಪ್ತ-ಮತದಾನ ಪದ್ಧತಿಯ ಸಾಮಾನ್ಯ ಸಭೆಗಳನ್ನು ಮಂಜೂರು ಮಾಡುವ ಬಗ್ಗೆ ಇದೇ ಬರುವ ತಾ ೭ನೇಗೆ ಅಲನ್ ಸಹಕಾರ ಬೇಂಕಿನ ಮೇಜಾಸಭೆ ಕರೆದಿದ್ದಾರೆ ಕಾಯಾ। ನಾಹಳ ಮಂಡಳದ ಚುನಾವಣೆಯು ಕಾರ್ಯಕ್ರಮವು ಪಾತ್ರ ಇನ್ನೂ ನಿಶ್ಚಿತವಾಗಿಲ್ಲವಂತೆ! ಈಗ ಜಾಲೂ ಪರ್ಯಂತ ಸಹಕಾರಿ ಸಂಘಗಳ ಸಾಲದ ಬಡ್ಡಿ ದರ ತೀರ ಹೆಚ್ಚಾಗಿದೆ ಯೂನಿವರ್ಸಿಟಿ ಅಲೋಚನೆಯು ಸಹಕಾರಿ ಸಂಘಗಳ ಸಾಲಂಡಿಗಾಡಿದವರು ಹೆಚ್ಚಾಗಿ ಸಹಕಾರಿ ಸಂಘಗಳ ಬಲಿಯಲ್ಲಿ ಸಿಕ್ಕಿ ನರಳುವವರೇ ಬಹಳ ಹಾಗಾದರು ಅಸಲಿಗಿಂತ ಹೆಚ್ಚು ಬಡ್ಡಿ ತೆತ್ತಿರುತ್ತಾರೆ ಅದರೂ ಅಸಲು ಹಾಗೆಯೇ ಬಾಕಿಯಿದೆ ಇನ್ನೂ ಹೇರಳ ಬಡ್ಡಿ ಬಾಕಿಯಾಗಿದೆ! ಈ ಅಸಲು-ಬಡ್ಡಿಗಳನ್ನು ತೀರಿಸುವದು ಎಂದೂ ಸಾಧ್ಯವಿಲ್ಲ! ಸಾವಕಾರರೆ ಬಡ್ಡಿ ದರ ಕೃಂಕ ಈ ಸಹಕಾರಿ ಸಂಘಗಳ ಸಾಲದ ಬಡ್ಡಿ ದರ ತೀರ ಹೆಚ್ಚಾಗಿದೆ ಯೂನಿವರ್ಸಿಟಿ ಅಲೋಚನೆಯು ಸಹಕಾರಿ

THE CANARA INDUSTRIAL & BANKING SYNDICATE LTD.,

(Incorporated in British India Liability of share-holders Limited)

Estd.:] [1925.

Head Office: UDIPI. (S. INDIA)

SEASON DEPOSITS

ARE ACCEPTED AT 3½% P. A.

Further particulars on application to any of OUR THIRTY-FIVE OFFICES.

ಮಕ್ಕಳಿಗೆ ವರಪ್ರದಾನ

ಜಮ್ಮಿ ವೆಂಕಟರಮಣಯ್ಯನವರ

ಲಿವ್ಫರ್ ಕ್ಯೂರ್

ಲಿವ್ಫರ್ ಮತ್ತು ಯಕೃತ್ ವಿಕಾರಗಳ ಮೇಲೆ ಅಮೋಘವಾದ ಉಪಾಯ.

ಎಲ್ಲಾ ಔಷಧ ವ್ಯಾಪಾರಿಗಳಲ್ಲಿ ಸಿಗುತ್ತೆ.

— ಅಥವಾ —

ಜಮ್ಮಿ ವೆಂಕಟರಮಣಯ್ಯ

ಲಿವ್ಫರ ಮತ್ತು ಸ್ಪ್ಲೀನ ಸ್ಪೆಶಲಿಸ್ಟ್,

ಮೈದಾಪುರ-ಮದ್ರಾಸ ಇವರಿಂದ ತರಿಸಿಕೊಳ್ಳಿರಿ.

ಶಾಖೆ:— ಅಕ್ಕಾಟ ಶ್ರೀನಿವಾಸಾಚಾರ ಬೀದಿ, ಬೆಂಗಳೂರು ಸಿಟಿ.

ಸಂಘಗಳಿಗೆ ಆಶ್ರಯಸಬಯಸಿದರೆ ಆ ಕಾಯಿದೆ ಮಾಡಿ ಏನನ ಪ್ರಯೋಜನವಾಗದು ಆ ಕಾಯಿದೆ ಮಾಡಿ ಸಂಘಸಲಹೇಕ್ಕೆ ಸಿದ ಫಲವೇ ದೊರೆಯಲಾರದು ಇನ್ನೊಂದು ಮಾತು ಇತ್ತ ಕಡೆಯ ಸಾವಕಾರರು ಭದ್ರತೆಯುಳ್ಳ, ಸಾಲಗಳಿಗೆ ಸರಕಾರಿ ೬ ಸಲೆಯಂತೆ ಬಡ್ಡಿ ಆಕರಣೆ ಮಾಡುತ್ತಾರೆ ಸರಕಾರಿ ಮಸೂದೆಯಲ್ಲಿ ನಮೂದಿಸಿದ ಬಡ್ಡಿಯ ದರ ಇದ ಕ್ಕೂ ಹೆಚ್ಚಿದ್ದರೆ ಕ್ರಯೋಜನವೇನು ? ಅನ್ನುವಂದ ಸಾ ನಿರ್ಣಯ ಪಂಚ ಮಂಡಳದವರು ಸ್ಥಾನಿಕ ಪರಿಸ್ಥಿತಿ ವೈವ ಹಾಗೆಗಳ ಮಾನದಿಂದ ಯೋಗ್ಯ ಬಡ್ಡಿಯ ದರ ಹಿಡಿಯು ಕಾಲೆ ಮಾಡಲು ಅನುಕೂಲವಾಗುವಂತೆ ಕಾನೆನಿನಲ್ಲಿ ಅಸ್ಪದ ಮಾಡಿಟ್ಟಿರುವುದು ಸ್ಪಷ್ಟ ಹಿಂದೆಷ್ಟೊಟ್ಟು ಹೋದಬಡ್ಡಿಯು ಬಡ್ಡಿಗೂ ಆಕರಿಸಲು ಪಜಂ ಆಗುವಂತೆ ವ್ಯವಸ್ಥೆ ನೂಡಬೇಕು ಇವೂದಿದ್ದರೆ ಸಾಲದ ಹೆರೆಯು ಹಾಗೆಯೇ ಉಳಿಯು ಸಾಲಗಾರರು ಎಂದೂ ತಲೆಯೆತ್ತಲಾರರು ಈ ಪ್ರಕಾರ ಅರ್ಜಿದಾರರು ಬರೆದಿರುತ್ತಾರೆ

ಲಷ್ಕರ ಸಂಕಮಾಗಿವ ಮುಂಬೆ ಕುಮುಟಾ ಹೊನ್ನಾವ ರಿ ಪ್ರಯಾಣಿಕರಿಂದ ಮೋಟಾರ ಬಂಡಿಗಳ ಮಾಲಿಕರು ಬಡೇ ೬ ಆಣೆ ಹಾಸಲು ತಕ್ಕೊಳ್ಳುತ್ತಿರುವು ಸಂಕವಾದ ಮೇಲೂ ಅಜೆ ದಿನದಿಂದ ಅನ್ವಯಿಸಲಿವೆ ? ಕುಮಟೆ ಯಿಂದ ಕಾವಾರವ್ವ ೪೨ ಮೈಲು ಆಗುತ್ತದೆ, ಸಡುವೆ ಎರಡು ತಾರೀಕಿಗೆ ಆದೂ ಕುಮಟಾ ಕಾರವಾರ ಪ್ರಯಾ ಣಕ್ಕೆ ರೂ ೧ ಹಾಸಲು ಮತ್ತು ಕುಮಟೆಯಿಂದ ೧೧ ಮೈಲು ಅಂತರದಲ್ಲಿರುವ ಹೊನ್ನಾವರಕ್ಕೆ ಹೋಗಲು ೬ ಆಣೆ ಹಾಸಲು' ನೋಟೀಸ ಮಾಲೀಕರು ಈ ಪಾಸಲು ಇಳಿಸುವರೇ ? ಮತ್ತೊಂದು ಮಾತು, ಹುಬ್ಬಳ್ಳಿಯಿಂದ ಲಿ ಕಾರವಾರದಿಂದಾಗಲಿ ಹೊನ್ನಾವರಕ್ಕೆ ಬರುವ ಪ್ರಯಾ ಣಿಕರಿಗೆ ಸಂಚೆಯಿಲ್ಲ ಕುಮಟೆಯನ್ನಾಗಿ ಇಳಿಸುವದು ಕಷ್ಟ ವಾಗುತ್ತದೆ ಒಬ್ಬೆಳ್ಳಿ ಹುಬ್ಬಳ್ಳಿ,ಕಾರವಾರದಿಂಯಿ ಗಾಡಿಗ ಳು ಕುಮಟೆಗೆ ಬಂದು ತಲ್ಪವಷ್ಟರಲ್ಲೇ ಹೊನ್ನಾವರ ಗಾಡಿ ಗಳು ಹೊರಟುಬಿಡುತ್ತವೆ ಹೀಗಾಗಿ ಹೊನ್ನಾವರದ ಪ್ರಯಾ ಣಿಕರು ಕುಮಟೆಯಲ್ಲೇ ಕೊಳೆಯಬೇಕಾಗುತ್ತದೆ ಕಾರ ವಾರ, ಹುಬ್ಬಳ್ಳಿ ಕಡೆಯಿಂದ ಬರುವ ಮೋಟಾರ ಬಂಡಿಗಳು ಸೆಟ್ಟಗೆ ಹೊನ್ನಾವರ ತನಕ ಬರುವ ವ್ಯವಸ್ಥೆ ಯೂ ಅನುಕೂಲವಾಗಿ ಮಾಡಿದರೆ ಈ ತೊಂದರೆ ಪರಿಹಾರವಾಗು ವಂತೆ ಜಿಲ್ಲಾ ಪೋಲೀಸ ಸಾಹೇಬರು ಇತ್ತ ಗಮನಿಸ ಬೇಕೆಂಬಿ ವಿನಂತಿಯುಂಟು.

ಇಜ್ಜಯ ಸರಾಯಿ ಅಂಗಡಿಯ ಮುದ್ದತ್ತು ೪ ತಿಂಗ ಳು ಬೇಸಲಾಗಿದೆ ಸಳರೀಪುರದೊಳಗಿನ ಸೆರೆ-ಶೇಂದಿಗಳ ಅಂಗಡಿಗಳು ಶನಿವಾರದಿಂದ ಮುಚ್ಚಲ್ಪಟ್ಟಿವೆ ಇಲ್ಲಿನ ಒಂದು ಅಂಗಡಿ ನಿಲ್ಲಿಸಲ್ಪಟ್ಟಿದೆ ಗಾಂಜಾ ಅಂಗಡಿಯೂ ಶನಿವಾರದಿಂದ ಮುಚ್ಚಲಾಗಿದೆ

ಭಟ್ಕಳ— ಶನಿವಾರ ತಾ ೧೫ೇಗೆ ಈ ಪೇರೆಯ ಪ್ರಾಥಮಿಕಶಿಕ್ಷಕರು ರಾಜಿ ಜೀವೋತ್ತಮಪಟ್ಟಿರ ಅಧ್ಯಕ್ಷತೆಯ ಲ್ಲಿ ಸಭೆಸೇರಿ ಈ ಕೆಳಗಿನಂತೆ ಕೆಲವು ಠರಾವುಗಳನ್ನು ಮಾಡಿರುತ್ತಾರೆ (೧) ಸರಕಾರದವರು ಪ್ರಾಥಮಿಕ ಶಿಕ್ಷ ಕರ ಬಗ್ಗೆ ಸಮಾನಾಸಕರವಾದ ಸಂಬಳದ ಯೋಜನೆ ಮಾಡ ಬಗ್ಗೆ ಮತ್ತು ಹಾಜರಿ-ಭತ್ತೆ ನಿಲ್ಲಿಸಿದ ಬಗ್ಗೆ ವ್ಯಸನಪ್ರದ ರ್ಶನ (೨) ಸೇವೇಗೆ ಕಮಿಟಿಯು ವರದಿಯ ಶಿಪೇಕ್ಷ, (೩) ಶಿಕ್ಷಕರಿಗೆ ಸಮಾನಾಸಾಮಾಂತಕ ಸಂಬಳ ಯೋಜ ನೆಯನ್ನು ದಯಮಾಲಿಸುವ ಬಗ್ಗೆ ಶಿಕ್ಷಣ ಮಂತ್ರಿಗಳಿಗೂ ಮೂಸ ಸರಾಂಜಪೇ ಕಮಿಟಿಗೂ ಪ್ರಾರ್ಥನೆ, (೪) ಎಲ್ಲ ಶಿಕ್ಷಕರು ಶಿಕ್ಷಕ ಸಂಘದಲ್ಲಿ ಸೇರಬೇಕಾಗಿ ವಿನ್ಮಪ, ಮತ್ತು ಸಂಘದ ಬಗ್ಗೆ ಹಬ್ಬಿಕೊಂಡ ಅಸಮಾಧಾನವನ್ನು ಹೋಗ ಲಾಡಿಸಿ, ಸಂಘದ ಬಗ್ಗೆ ಶಿಕ್ಷಕ ಸಮಾಜದಲ್ಲಿ ಅಸ್ಥೆ ಉಂಟಿ ಯಾಗುವಂತೆ ವಿಶಾಸು ವಾದಲೆಗಾಗಿ ಟಾಲಕರಿಗೆ ವಿನಂತಿ, (೫) ಸೈ ಪಾ ಕಸಬೆಕರ ನಾಸುದೇವರಾಯರ ಕುಟುಂಬ ದ ಸಹಾಯಾರ್ಥವಾಗಿ ಒಂದು ನಿಧಿ ಕೂಡಿಸಲು ರಾ ಮಾರ್ಜನಕರ ನೇಮಕಾತಿ ಕಸಬಾ ಶಿಕ್ಷಕರಿಲ್ಲರೂ ಉಪನಿಸ ನೂಡಿ ಈಕ್ರಾರ್ಥನೆ ಮಾಡಿದರು

ಶಿರಿ"— ಶನಿವಾರ ತಾ ೧೫ೇಗೆ ಕರ್ನಾಟಕ ಪ್ರಾಂತಿಕ ಸಿಪ್ಲಿಕ್ ಟೋರಿನ ಸಭೆ ಇಲ್ಲಿಯ ಅಡಿಕೆ ವರ್ತಕರ ಸಂಘ ದ ಧರ್ಮಶಾಲೆಯ ಆವ್ಹಣದ ಮೇಲೆ ಕೂಡಿತ್ತು ನಮ್ಮ ಜಿಲ್ಲಾ ಸಿಪ್ಲಿಕ್ ಟೋರಿನ ವಿಭಾಗ ಸಭೆಯ ಆಯೋಜನೆ ಮಾಡಿದ ಲ ಜನರಲ್ಲಿ ೬ ಜನರು ಸಭೆಗೆ ಬಂದಿದ್ದರು ಬೋರ್ಡಿನವರು ಎಷ್ಟು ದೂರುಗಾರರ ಅಂಬೋಣ ಕೇಳಿಕೊಂಡರು ಮತ್ತು ಕಡತೋಕೆಯ ರಾಜಿ ಜಿ ಎನ್ ಹೆಗಡೆ ಮತ್ತು ಹಿಚಕಡದ ರಾಜಿ ವೀರಣ್ಣ ನಾಯ್ಕ ಇವರ ಆಯೋಜನೆಗಳನ್ನು ತಿರಸ್ಕರಿಸಿದರು; ಇದ್ದಬ್ಬದ ರಾಜಿ ಗೋಪಾಲರಾವ ದೇವ ರವರಿಗೆ ಕೊಂಗ್ರೆಸ ಹುರಿಯಾಳುಗಳಾಗಿ ಆಂಗೀಕರಿಸಿ, ಅವ ರಿಗೆ ಸ್ಥಳ ಮಾಡಿಕೊಡುವುದಗೋಸ್ಕರ ತಮ್ಮ ಹುರಿಯಾಳು ತನ ತಿರುಗಿ ತಕ್ಕೊಳ್ಳುವಂತೆ ರಾ ಕಣಗಲಕೋಡೆ ರಾಮ ಚಂದ್ರ ಹೆಗಡೆಯವರಿಗೆ ವಿನ್ಮವಿಸಲೆಂತಾಗಿ ನಿರ್ಣಯಮಾಡಿ ದರು ಇನ್ನುಳಿದ ದೂರುಗಾರರು ಚುನಾವಣೆಗೆ ನೇಮ

ಜಾಹೀರ ನೋಟೀಸು.

ಹೊನ್ನಾವರ ತಾಲೂಕ ಶರಾವತಿ (ಮಲ್ಲು ಕುವೇ ಪ್ರೋಟಿ ತಾರಿ ಸಹಿತ) 2ನೇ ಕ್ಲಾಸಿನ ತಾರಿಯ ಲಿಲಾಂವು ಪಿ ಡಬ್ಲ್ಯು ಡಿ ಆಫೀಸ, ಕುಮಟಾ ಇಲ್ಲಿ ಇದೇ ತಾ. 5—4—1939 ನೇಗೆ ಇಟ್ಟಿರುವದಾಗಿ ಈ ಹಿಂದೆ ಜಾಹೀರ ನಾಮೆ ಹೊರಡಿಸಿತ್ತು ಆ ಜಾಹೀರನಾಮೆ ಈಗ ರದ್ದುಪಡಿಸೋಣಾಗಿದೆ

ಕಾರವಾರ, ತಾ ೩—4—39

K. M BEDEKAR.
Executive Engineer,
Kanara Division

BHUVANENDRA PRODUCTS LTD.,

KATAPADI. S. K.

ಭುವನೇಂದ್ರ ಪಂಚರತ್ನಗಳು.

ಭುವನೇಂದ್ರ ಚ್ಯವನಪ್ರಾಶ :— ಕ್ಷಯದ ಪ್ರಧಮಾವಸ್ಥೆ, ಶ್ವಾಸಕಾಸ, ನರಗಳ ದುರ್ಬಲತೆ ಇವುಗಳಿಗೆ ಗುಣಕಾರಿ

ಭುವನೇಂದ್ರ ದಶಮೂಲಾರಿಷ್ಟ :— ಪ್ರಸವಾನಂತರ ಸ್ತ್ರೀಯರಿಗೆ ಅಮೃತಸಮಾನ ಇದು ಕಸ್ತೂರಿ ಮಿಶ್ರಿತ.

ಭುವನೇಂದ್ರ ಅಶೋಕಾರಿಷ್ಟ :— ಸ್ತ್ರೀಯರ ಸಮಸ್ತ ವ್ಯಾಧಿಗಳಿಗೂ ರಾಮಬಾಣ

ಭುವನೇಂದ್ರ ದ್ರಾಕ್ಷಾಸವ :— ಶಕ್ತಿವರ್ಧಕ, ತ್ರಾದಾಯಕ, ರಕ್ತವೃದ್ಧಿ ಮಾಡ್ಕಿಅಹ್ಲಾದನನ್ನುಂಟು ಮಾಡುವದು.

ಭುವನೇಂದ್ರ ಕೃಷ್ಣಾರಕ್ :— ಸಮಸ್ತ ಚರ್ಮವ್ಯಾಧಿಗಳಿಗೂ ಮಾತ್ರಿ ಗುಣಕಾರಿ ಹೊಟ್ಟೆಯನ್ನಿಯೂ ಉಪಯೋಗಿಸುವ ದಿವ್ಯೌಷಧ.

ನಮ್ಮಲ್ಲಿ ಶಾಸ್ತ್ರೀಯ ರೀತಿಯಿಂದ ತಯಾರಿಸಿದ ಬಗೆಬಗೆಯ ಆಸವಾರಿಷ್ಟಗಳು, ಲೇಹ್ಯಗಳು, ತೈಲಗಳು, ವಟಿ, ಮಾತ್ರೆ, ಗುಗ್ಗುಳ, ಭಸ್ಮಾದಿಕಗಳು ಸದಾ ಸಿದ್ಧವಿರುವವು.

ಪ್ರತಿನಿಧಿಗಳಿಲ್ಲದ ಕಡೆಯಲ್ಲಿ ವಿಚಾರಿಸು ಬೇಕಾಗಿದ್ದಾರೆ ಧಾರಾಳ ಕಮಿಶನ್, ವಿಶೇಷ ಸಾಕ್ಷರ ಹೆಚ್ಚಿನ ವಿವರಕ್ಕಾಗಿ ಇಂದೇ ಬರೆಯಿರಿ

ನಮ್ಮ ವಿಜಿಂಟರು:—

ಭಟ್ಕಳ —	ವಾಮನ ಗಣಪಯ್ಯ ಶ್ಯಾನಭಾಗ,	ಹೊನ್ನಾವರ —	ಕಾಮತ ಸ್ಟೋರ್ಸ್
ಅಂಕೋಲಾ —	ವೇದಮೂರ್ತಿ ಪಸುಮಟ್ಟಿ ಕೇಶವ ಭಟ್ಟ	ಗೋಕರ್ಣ —	ಎಮ್ ಸ್ವಿ. ಬಸ್ತಿಕರ, ಮರ್ಚಂಟ್.
ಕಾರವಾರ —	ದಾನೋದರ ನಾಗಪ್ಪ ಶ್ಯಾನಭಾಗ, ಮರ್ಚಂಟ್	ಶಿರಿ —	ಆರ್ ವಿ. ಧಾರಪ್ಪಾ, ಕೆಮಿಸ್ಟ.

ವಿಳಾಸ:—

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಬ್ರೆಂಚ್ ಆಫೀಸು ಕುಮುಟಾ. ಉ ಕ

OR

BHUVANENDRA PRODUCTS LTD.
Head Office KATAPADI, S K.

ಸಾಹಿತ್ಯ-ಪತ್ರಗಳನ್ನೇ ಪ್ರಾಜರಪಡಿಸಿರುವದಿಲ್ಲವಾದ್ದರಿಂದ ಅವರ ಬಗ್ಗೆ ಪ್ರತ್ಯೇಕ ನಿರ್ಣಯ ಮಾಡುವದು ಅಗತ್ಯವೇ ಉಳಿಯಲಿಲ್ಲ. ಎಲ್ಲ ದೂರುಗಳನ್ನು ಮಾಡಿರುವ ಮಹಾಶಯರ ವಿಧಾನಗಳ ಹಾಗೂ ಬೋರ್ಡಿನವರು ಈ ಕೆಳಗಿನಂತೆ ನಿರ್ಣಯ ಕೊಟ್ಟಿರುತ್ತಾರೆ — (೧) ಕಾರವಾರ ಜಿಲ್ಲೆಯ ಸಿದ್ದಾಪುರ ದೊಡ್ಡಿನವರು ಅರ್ಜಿ ಸ್ವೀಕಾರದ ಬಗ್ಗೆ ನೇಮಿಸಿದ ತರುವಾಯ ಮೂರನೆ ನಂಬರ ಸಸ್ಯ ಅರ್ಜಿಗಳನ್ನು ಸ್ವೀಕರಿಸಿದರಾಗಿ ದೊರು ೨೪೭ ಅವರ ಬೋರ್ಡಿಗೆ ಹಾಗೆ ಅರ್ಜಿಗಳನ್ನು ತಪ್ಪಿಸಿ ಲೈಲ ಪೂರ್ಣ ಅಧಿಕಾರವಿದೆ (೨) ಈಕೆಲ ಜನರಿಯಲ್ಲಿ ನಡೆವ ಜಿಲ್ಲಾ ಬೋರ್ಡ್ ಅಧ್ಯಕ್ಷರ ಚುನಾವಣೆಯಲ್ಲಿ, ಸಿದ್ದಾ ಬೋರ್ಡಿಗೆ ಅರ್ಜಿ ಕೊಟ್ಟವರಲ್ಲಿ ಕೆಲವರು ಕೊಂಗ್ರೆಸ ನವ್ಯ ಹುರಿಯಾಳುಗಳಿಗೆ ಮತಗಳನ್ನು ಕೊಡದೆ ಕೊಂಗ್ರೆಸ ವಿರೋಧಿಗಳಾದ ರಾ|| ಜಿ ಎಸ್ ಗಂಗಾಧ್ಯೆಯರಿಗೆ ಮತ ಕೊಟ್ಟಿದ್ದು, ಚುನಾವಣೆಗೆ ನಂತರ ಕೊಂಗ್ರೆಸ ಭಕ್ತರು ಕೊಂಗ್ರೆಸ್ಸಿಗೆ ಅಧಿಕೃತ ಹುರಿಯಾಳುಗಳಲ್ಲದ್ದಿಕ್ಷನೆಂಬ ಅವರಿಂದ, ಶಾಸ್ತ್ರಿಕ ದೃಷ್ಟಿಯಿಂದ (Technically) ಶಿಸ್ತು ಭಂಗವೆನಿಸಲಾರವೆಂಬುದಾಗಿಯೂ ನೈತಿಕ ದೃಷ್ಟಿಯಿಂದ ಅದು ಕೊಂಗ್ರೆಸ ಏಕ್ಯತೆಯ ಅತ್ಯಕ್ಕವೆಂತಲೇ ತೀರ್ಮಾನಿಸಿಲು ಇಂಥ ಶಿಸ್ತುಭಂಗ ಮಾಡಿದವರ ಅರ್ಜಿಗಳನ್ನು ಜಿಲ್ಲಾ ಸಿದ್ಧಿಕ್ ಬೋರ್ಡಿನವರು ತಿರಸ್ಕರಿಸಿದ್ದು ಯುಕ್ತವಿರುತ್ತದೆಂದು ಪ್ಯಾಂಕಿಕ ಬೋರ್ಡ್ ಅಧಿಕಾರ್ಯಯಿರುತ್ತದೆ

ರಾ|| ಕೃ ಸು ಭಟ್ಟ (ರಾಯರಪೇಟೆ, ಶಿರಿ) ಇವರು ಬರೆಯುತ್ತಾರೆ — "ಹಿಂದಿನ ರಾಜಕೀಯ ಹೋರಾಟಗಳಲ್ಲಿ ಕಾಯಾಡಿದ ನಮ್ಮ ಜಿಲ್ಲೆಯೊಳಗಿನ ರಾಜಕೀಯ ಕೈದಿಗಳು ತಮ್ಮೊಳಗೆ ಸಂಘಟನೆ ಮಾಡಿಕೊಂಡು, ತಮ್ಮವರಲ್ಲಿ ಯಾರಾದರೂ ನಿರುದ್ಯೋಗಿಗಳಿದ್ದರೆ ಅವರಿಗೆ ಯೋಗ್ಯ ಜೀವನೋಪಾಯ ದೊರಕಿಸಿಕೊಡುವದು ಕರ್ತವ್ಯವಿರುತ್ತಾಗಿ ನನ್ನ ಅಭಿಪ್ರಾಯ ಇನ್ನು ೫ & ದಿನಗಳಲ್ಲಿ ಸತ್ಯಾಗ್ರಹಿಗಳ ಹೊಲ-ಭೂಮಿಗಳು ತಿರುಗಿ ಸಿಕ್ಕ ಬಗ್ಗೆ ಸಮಾರಂಭ ಏರ್ಪಾಡಿಸಿದ್ದಾರೆ ಆ ಅವಕಾಶದಲ್ಲಿ ಸೊಂದನ್ನು ನೆರವೇರಿಸುವದಕ್ಕೆ ತರದಾರ ವಲ್ಲಭಧಾಮು ಪಟೇಲರು ನಮ್ಮ ಜಿಲ್ಲೆಗೆ ಬರುವವರಿದ್ದಾರಂತೆ ಆ ಸಮಯದಲ್ಲಿ ಜಿಲ್ಲೆಯ ರಾಜಕೀಯ ಕೈದಿಗಳು ಅನೇಕರೆ ಒಂದು ಶಿಸ್ತುಮಂಡಳ ಕರೆದು ತಮ್ಮ ಸುಖದುಃಖಗಳನ್ನು ಅವರಿಗೆ ಅರುಹುವದೊಳಿತೆಂದು ನನಗನ್ನಿಸುತ್ತದೆ. ಕಾರಣ ಅಯಾ ತಾಲೂಕಿನ ರಾಜಕೀಯ ಒಬ್ಬೊಬ್ಬ ಪ್ರತಿನಿಧಿಯನ್ನು ಅರಿಸಿ ನನಗೆ ತಿಳಿಸಬೇಕಾಗಿ ವಿನ್ನವಿಸುತ್ತೇನೆ ಪ್ರತಿನಿಧಿಗಳು ಎಂದು ಬರೆತಕ್ಕದ್ದೆಂದು ಹಿಂದಿನಂದೆ ತಿಳಿಸಿದೆನು ಪ್ರತಿನಿಧಿಗಳು ಉಳಕೊಳ್ಳುವ ವ್ಯವಸ್ಥೆ ನಾನು ಮಾಡುವೆನು ಊಟದ ವ್ಯವಸ್ಥೆ ಅವರೇ ಮಾಡಿಕೊಳ್ಳಬೇಕು ಸಂಘಟನೆ ಮಾಡುವದೇನೋಸ್ಕರ ಎಲ್ಲ ರಾಜಕೀಯ ಕೈದಿಗಳ ಮಾಹಿತಿ ಬೇಕಾಗಿದೆ ಜಿಲ್ಲೆಯೊಳಗಿನ ಸಮಸ್ತ ರಾಜಕೀಯ ಕೈದಿಗಳು ತಮ್ಮ ತಮ್ಮ ಮಾಹಿತಿ ನನಗೆ ಬರೆದು ಕಳಿಸಬೇಕಾಗಿ ಈ ಮೂಲಕ ವಿನ್ನಪ ಮಾಡುತ್ತೇನೆ

ದಾಸನಕೊಪ್ಪ— (ತಾ ೨೭-೪-೩೯) ಇಂದಿನ ದಿನ ಮುಗಿಲಲ್ಲಿ ನೇತಡಗಳಾಗುತ್ತಿವೆ ಯುಗಾದಿ ಹಬ್ಬವೆ ದಿನ ಚಲೋ ಮಳೆಯಾಯಿತು ಊರಲ್ಲಿ ಚಿಕ್ಕಜ್ವರವಿದೆ

ಈ ಊರಲ್ಲಿ ನೀರಿಗೆ ಪಾರ್ಶಕ್ಕೆ ಒಂದೇ ಒಂದು ಹೊಂಡವಿದೆ ಛಿಲ್ಕುವರೆ ತಿಂಗಳ ತನಕ ಅದರಲ್ಲಿ ನೀರು ಸಿಗುತ್ತದೆ. ಆದೂ ಚಲೋ ನೀರಲ್ಲ ಕೆಸರುಮಯ ನೀರು! ಈ ವರ್ಷ ಜನವರಿಯಲ್ಲೇ ಹೊಂಡ ಆರುತ್ತೋಗಿದೆ ಜನರು ೩ ಮೈಲು ದೂರವಿರುವ ಧರ್ಮಾ ನದಿಯಿಂದ ನೀರು ತಂದು ಜೀವಿಸಬೇಕಾಗಿದೆ ಈ ಉಪದ್ರವ ಸಹಿಸಲಾರದೆ ಎಷ್ಟೋ ಜನರು ಊರು ಬಿಟ್ಟು ಹೋಗಿದ್ದಾರೆ ಎಷ್ಟೋ ಜನರು ಬರುತ್ತಾನಿರುವವರಿದ್ದಾರೆ. ಇಲ್ಲೊಂದು ಬಾವಿ ತೋಡಿಸಬೇಕೆಂದು ಸರಕಾರದವರು ಈಗ ೨ ಲ ವರ್ಷಗಳಿಂದ ಅಲೋಚನೆ ನಡಿಸಿದ್ದಾರೆ ಆ ಅಲೋಚನೆ ಇನ್ನೂ ಫಲದ್ರೂಪವಾಗಲೊಲ್ಲದು! ಹೋದ ವರ್ಷ ಇಲ್ಲೊಂದು ಭಾವಿ ತೋಡುವ ನಿರ್ಣಯವಾಗಿರುತ್ತಾಗ ಪತ್ರಿಕೆಗಳಲ್ಲಿ ಪ್ರಕಟವಾಗಿತ್ತು ಜನರು ಆದೆನ್ನು ಕೇಳಿ ಸಂತೋಷಪಟ್ಟಿಂದಿದ್ದರು. ಆ ಬಾವಿ ಬರೇಲೀ ಇಟ್ಟ ಬ್ಲಾಕಿನ ಮಾತಾಗಿ ಅದು ಜನವಾಸಿಯ ಜನರ ಹಾಲಿಗೆ ಹೋಯಿತಂತೆ! ಜನವಾಸಿಯಲ್ಲಿ ನೂರಾರು ಬಾವಿಗಳಿವೆ ಊರಿಗೆ ಹೊಂದಿ ವರದಾ ನದಿಯಿದೆ. ಅದಾಗ್ಯೂ ಒಂದೂ ಬಾವಿಯಿಲ್ಲದ ದಾಸನಕೊಪ್ಪ ಊರಿಗೆ ಕೊಟ್ಟ ಬಾವಿ ಜನವಾಸಿಗೆ ವರ್ಗವಾಯಿತು!! ನಮ್ಮೂರ ದುರ್ದೈವದಿಂದಲೇ ಅಧಿಕಾರಿಗಳಿಗೆ ಇಂಥ ಬುದ್ಧಿ ಬಂತು! ಅವರನ್ನು ದೂರಿ ಏನು ಫಲ?

ದವಾಖಾನೆಯ ಕಥೆಯೂ ಅದೇ ಇಲ್ಲೊಂದು ದವಾಖಾನೆ ಸ್ಥಾಪಿಸಬೇಕೆಂದು ೩ ವರ್ಷಗಳಿಂದ ವಿಜಾರ ನಡೆ

(ಪುರವಣಿ ನೋಡಿರಿ.)



ಹಲ್ಲಿನ ಎಲ್ಲ ತರದ ಕೆಲಸಗಳ ಬಗ್ಗೆ
ಡಾ|| ಕೊಪ್ಪಳ, ಡೆಂಟಿಸ್ಟ
ಇವರಿಗೆ ಭೆಟ್ಟಿಯಾಗಿರಿ!
ಮುಳ್ಕಾಂ:— ಹೊನ್ನಾವರ.

ದಿ ಹನುಮಾನ ಟ್ರಾನ್ಸಪೋರ್ಟ ಕಂಪೆನಿ, ಲಿಮಿಟೆಡ್,
ಉಡುಪಿ. ದ. ಕನ್ನಡ.

ಹೊಸ ಒಸ್ಸುಗಳು! ಮಿತವಾದ ದರಗಳು. ಹೊಸ ಲ್ಯಾನು!!

ಪ್ರಯಾಣಿಕರ ಸೌಕರ್ಯವೇ ನಮ್ಮ ಮುಖ್ಯ ಧ್ಯೇಯ.
ನಿಯಮಿತ ಕಾಲಕ್ಕೆ ಸರಿಯಾಗಿ ಬಿಡುವ ಸರ್ವಿಸುಗಳು.

ನಮ್ಮ ಕಂಪನಿಯ ಬಸ್ಸು ಸರ್ವಿಸುಗಳು ಈ ವರೆಗೆ ಕಾಸರಕೋಡ ವರೆಗೆ ಮಾತ್ರ ಚಲಾವಣೆಯಲ್ಲಿದ್ದು, ತಾರೀಕು 28—4—1938ರಿಂದ
ಕಾಸರಕೋಡಿನಿಂದ ಹೊನ್ನಾವರ, ಕುಮಟಾ, ಅಂಕೋಲಾ ಮತ್ತು ಕಾರವಾರ ವರೆಗೆ ಚಲಾವಣೆಯಾಗುವಂತೆ
ಸುವ್ಯವಸ್ಥೆಯನ್ನು ಮಾಡಿರುವೆವು ದಕ್ಷಿಣ ಕನ್ನಡ ಜಿಲ್ಲೆಯಿಂದ ಬೆಳಿಗ್ಗೆ ಹೊರಟರೆ ಅದೇ ದಿನ ಸಾಯಂಕಾಲದೊಳಗೆ ನಿರಾಯಾಸವಾಗಿ ಕಾರವಾರಿಗೆ ತಲುಪುವಂತೆ ಯೋಗ್ಯ ವಿಸ್ಪಾಡು ಮಾಡಿರುತ್ತದೆ ನಮಗೆ ಆಸೌಕರ್ಯ ಉಂಟಾದಲ್ಲಿ ದಯವಿಟ್ಟು ನಮಗೆ ತಿಳಿಸಿದ್ದಲ್ಲಿ ಅವುಗಳಿಗೆ ಯೋಗ್ಯ ಗಮನ ಕೊಡುವೆವು ಮಹಾಜನರು ಪ್ರೋತ್ಸಾಹಿಸಬೇಕಾಗಿ ವಿನಂತಿ

ಮಿತ ದರ! — ನಿಶ್ಚಿತ ಸಮಯ!! — ನೌಕರರ ವಿನಯ-ನಮ್ರತೆ!!!

ಇನ್ನುಗಳಲ್ಲವೇ ಪ್ರಯಾಣಿಕರಿಗೆ ಬೇಕಾದದ್ದು?

THE HANUMAN TRANSPORT CO., LTD.
UDIPI. S. KANARA.

ಕಾನಡಾ ವೃತ್ತ

ಕನ್ನಡ ನಾಡಿನ ಪ್ರಮುಖ

ರಾಷ್ಟ್ರೀಯ ವಾರಪತ್ರಿಕೆ.

ಜಾಹೀರಾತುದಾರರಿಗೆ ಅನುಕೂಲ ಸಾಧನ

ರಾಷ್ಟ್ರಸ್ಥೈಮಿ ಕನ್ನಡಿಗರು ಚಂದಾದಾರರಾಗಿ

ಪ್ರೋತ್ಸಾಹಿಸಬೇಕು

ಮುಂಬಯಿಯಲ್ಲಿ

ಉತ್ಕೃಷ್ಟ ನಿವಾಸ ವ್ಯವಸ್ಥೆ.

ಪ್ರವಾಸಿಗಳಿಗೂ ವಿದ್ಯಾರ್ಥಿಗಳಿಗೂ

ಬಹಳ ಅನುಕೂಲ!

ವೆಲ್‌ಕಮ್

ಹಿಂದೂ ಹೊಟೆಲ್

ತಾರಾ ಹೌಸ, ಗಿರಗಾಂವ

ಮುಂಬಯಿ.

ಮಧ್ಯವರ್ತಿ ಸ್ಥಳ: ಉತ್ಕೃಷ್ಟ ಊಟ!

ಉತ್ತಮ ಪರಿಚಯ ಕೋಣೆಗಳು!

ಊಟ-ಉಳಕೊಳ್ಳುವ ಅನುಕೂಲತೆ!!

ವಿದ್ಯಾರ್ಥಿಗಳಿಗೆ

ಪ್ರತ್ಯೇಕ ರಿಯಾಯತಿ ದರಗಳಿವೆ.

"ಸ್ಟಾರ ಆಫ್ ಕೆನರಾ ಪ್ರೆಸ್",

ಕುಮಟಾ.

ನಮ್ಮಲ್ಲಿ ಕನ್ನಡ, ಮರಾಠಿ, ಇಂಗ್ಲಿಷ, ಗುಜರಾಥಿ ಭಾಷೆಯಿಂದ ಜೇಕಾದ ನಮೂನೆಯ ಕಲರ ಪ್ರಿಂಟಿಂಗ ಪಸ್ಟೈರಿ ಸಣ್ಣಮೊಡ್ಡ ಫಾರಂ ಕೆಲಸಗಳೂ, ಪುಸ್ತಕ ಮುದ್ರಣವೂ, ರೂಲಿಂಗ-ಬೈಂಡಿಂಗ ಕೆಲಸವೂ ಶಾಶ್ವತವಾಗಿ ಸುಲಭ ದರದಲ್ಲಿ ತಕ್ಕ ಕಾಲಕ್ಕೆ ತಯಾರಿಸಿ ಕೊಡಲಾಗುವದು! ನಿಮ್ಮ ಕೆಲಸಗಳನ್ನು ನಮ್ಮಲ್ಲಿಗೇ ಕಳಸಿರಿ ಎಂದು ಆಸ್ಥೆಯಿಂದ ಕೇಳಿಕೊಂಡು ನೋಡಿರಿ!

ಅಬ್ಬಾ! ಏನು ತಲೆ ನೆಡತ, ಏನು ಜಾಡ್ಯ, ಕೆಟ್ಟೆ!

ಡಾಕ್ಟರರ ಹೋಜ ಗಡ ನಿಶ್ಚಲ!!

ಬಿಸ್ಕ್ಯಾ ಲೋಕಪಾವನ್ನ ಶಬ್ದಸುಧಾಸಿರುವ ಹಿಂಗಲ ಕೊಜೀ ಪಿದರಬೇಡ' ಚಿ ಹದ ಗಾಳ.'''

ಏನು ಉಪಯೋಗ' ಜಂಪತ್ಯಕ್ಕೆ ಜಂತರ ಕೋಗ ಪ್ರತಿಬಂಧಕ, ತಾಪ್ತಿ ಪುಸ್ತ ಸ್ಥಾನಾಯ್ಯಾಯಂದೇ ಈ ಸಾಧಾರಣ ಚಿಗದ ಹುಬ್ಬುಗಳ! ಬ್ಯಾಸಕಾಸ, ಉಬ್ಬಸ, ಕೆಗನ್ನ ಇತ್ಯಾದಿಗಳ ತತ್ತ್ವರ ಶಮನ! ಬೌಳ ಅಂತು ಸಾಫ! ಬರೇ ೧೫ ದಿವಸಗಳ ಪ್ರಯೋಗ! ನಿನ್ನ ತಾಕ್ಷದಲ್ಲಿ ಆಶ್ಚರ್ಯವೃದ್ಧಿ !' ಅದೇ ರೀತಿ ಮಾಂತರವು ನಿನ್ನ ಶಿಷ್ಯ ಅನ್ವೇಷಣೆ ಇಂಥ ಪ್ರಥಮವಾಗಿ ಸಂಶೋಧಿಸಿರುವದು. ಇದು ವೇದವಾಕ್ಯ ನಂಬು ಡಾಕ್ಟರ ಸರ್ಟಿಫಿಕೇಟುಗಳ ತಪ್ಪಾಗಿ ನೋಡು ರುಜು ಇಲ್ಲ ಬರೇ ()—10—() ವಿಳ್ಳಿಕ್ಕವಲ್ಲ ಶಿಗುವ ಒಂಬೇ ಸ್ಥಳ -

ದಿ ನ್ಯೂ ಸಪ್ಲ್ಯಾ ಸಿಜನ್ಸಿ, ಕುಮಟಾ.



ದಿ ಬೋಂಬೆ ಲೈಫ್ ಎಶ್ಯೂರನ್ಸ ಕಂಪೆನಿ, ಲಿಮಿಟೆಡ್.

ಸ್ಥಾಪನೆ: 1903.

ಈ ಕಂಪನಿಯು ಪೂರ್ಣ ಹಿಂದೀ ಇದ್ದು, ಇದರ ಕಂತಿನ ದರಗಳೂ, ಕಶೂಗಳೂ ಬಹಳ ನೇಯಿಯವು ಇವೆ. ಕಂಪನಿಯ ಹಣವು ಸರಕಾರಿ ಪ್ರೊ. ನೋಟುಗಳಲ್ಲಿಯೂ, ಇಂಡಿಯನ್ ಟ್ರಸ್ಟ ಎಕ್ಟಿನ ನಿಯಮಗಳಂತೆ ಜವಾಬ್ದಾರಿಯ ಕೆಳ್ಕೂರಿಟಿಗಳಲ್ಲಿಯೂ ಇಡಲ್ಪಟ್ಟಿದೆ.

ಮಲ್ಟಿಪಲ್ ಬೆನಿಫಿಟ್ ಎಂಬ ಕಲನು ನಿಮೆದಾರರಿಗೆ ಅಪಾರ ಲಾಭಕರವಾಗಿದೆ.

ಸಮಸ್ತರ ಮಾಹಿತಿ ಸ್ಥಳಿಕ ಏಜಂಟರ ಕಡಿಗೆ ಅಥವಾ ಪತ್ರವ್ಯವಹಾರದಿಂದ ಕೆಳಗಿನ ವಿಳಾಸಕ್ಕೆ ಬಂಪರಿಸಿ ಬೆಗುವದು.

Kumta Agents-
D. K. Nayak Bros.
K. N Nayak.
Honavar Agent -
R. V. Prabhu

K. Padmanabha Rao & Sons.
BELGAUM
Chief Agents for
Karnatak Districts & S. M. States

ಸುಲಭ ಕ್ರಯ! ಡಾಕ್ಟರ ಜೀ. ಬೀ. ಯವರ ಸುಗಂಧಿ ನಕ್ಷತ್ರದ ಪುಡಿ. ಸುಲಭ ಕ್ರಯ ಲೋಕಪ್ರಸಿದ್ಧವಾದ ಈ ಸುಗಂಧ ನಕ್ಷತ್ರ ಪುಡಿಯು ಕಂಡು ಹಿಡಿದು ಲ್ಯಟ್ಟು ಸಾವಿರಾರು ಮಂಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಪ್ರೋತ್ಸಾಹಪತ್ರಗಳನ್ನು ಕಳುಹಿಸಿರುವರು. ಪ್ರಸಿದ್ಧವಾದ ಈ ನಕ್ಷತ್ರ ಪುಡಿಯಿಂದ ಸ್ವಪ್ನವಾಗುವ ವ್ಯಾಧಿಗಳು ಯಾವವೆಂದರೆ-- ವಿಸರ್ಪ, ಒಂಟೆಲೆನೋವು ಕೆಲೆಯಲ್ಲಿಯಾ ರೋಗಗಳ, ಕಣ್ಣುಗಳಲ್ಲಿ ಕಾಂಟಾಗಳಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಾಂಕ್ಕೆ ನೀಲ್ಬರ್ಟ್ಟ ವ್ಯಾಧಿಗಳನ್ನೂ ಸ್ವಪ್ನ ಪಡಿಸಿ ಜ್ಞಾಪಕ ತಕ್ಕೆಯನ್ನೂ ಹೆಚ್ಚು ಮಾಡುತ್ತಿದೆ. ಮೂರು ಬೆಟ್ಟಿನ ಸಾಧಾರಣ ನಕ್ಷತ್ರದ ಸಂಗಡ ಈ ಸುಗಂಧ ನಕ್ಷತ್ರದ ಪುಡಿಯಲ್ಲಿ ಬಂದು ಚಟುಕೆಯನ್ನು ನಿಶ್ಚಯಿಸಿದರೆ ಎಲ್ಲವೂ ಪರಿವಾಳವಾಗುವದು. ಇದನ್ನು ಅನೇಕ ವೃಧ್ಧರು ತಮ್ಮ ಗೃಹದಲ್ಲಿ ಕ.ಟ ಬಿ ಔಷಧವಾಗಿ ಉಪಯೋಗಿಸುತ್ತಿರೆ. ಮಾದರಿ ಸೀಸೆ ಪುಕ್ಕಟೆ ಕಳಿಸಲಾಗೀತು. ಬುದ್ಧಿ ಬಂದಷ್ಟಕ್ಕ ಕ್ರಯ ರೂ. ೦-೪-೦, ಪ್ಲಿ ಪಿ ಳ ಡಜನ್ ೧ ಕ್ಕೆ ರೂ. ೩-೮-೦. ಪಿ ಪಿ ೦-೪ ೦ ದಯವಿಡಿದು ನಿಮ್ಮ ಹೆಸರನ್ನೂ, ಆದ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆದಿರಿ

ವಿಳಾಸ - ಗುರುಬಸವ ಅಂಡ್ ಕಂಪನಿ ಲಿಮಿಟೆಡ್, ಪೋ ಬಾ ನಂ೧೧, ಪೂರ್ಣಾಂಗ ಮದರಾಸ.

ಇದನ್ನು ಪಾಂಡುರಂಗ ಕೃಷ್ಣ ಶ್ಯಾನಭಾಗ (ಸಂಪಾದಕ) ಇವರು ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್"ದಲ್ಲಿ ಮುದ್ರಿಸಿ ಪ್ರಕಟಿಸಿದರು

Reg. No. B 1270. Monday, 10th April, 1939.

ವರ್ಷ ೫೧

ಪತ್ರದ ವರ್ಗಣೆ.

ಕುಮಟೆಯಲ್ಲಿ ಆಗಾವಣೆ
ರೂಪಾಯಿ ೨-೪-೦.
ಮುಂಬಯಿಯಲ್ಲಿ ವಿಶೇಷ
ರೂ. ೩-೧-೦.
ಪ್ರಿ ಪೈ. ಅಂಚೆಯಲ್ಲಿ ಸೇರಿ
ರೂಪಾಯಿ ೩-೪-೦.
ಪತಿ ಸಂಚಿಕೆಗೆ ೦-೧-೦
ಹಳೇ ಸಂಚಿಕೆಗೆ ೦-೨-೦

ಕಾನಡಾವೃತ್ತ.

THE KANARA NEWS.

ನರಹಿತಕರ್ತಾ ದ್ವೇಷ್ಟಾ ವಾ ತಿ ಲೋಕೇ ಜನಪದಹಿತಕರ್ತಾ ಸ್ವಕ್ಷಯತೇ ಪಾರ್ಥಿವೇಂದ್ರಃ।
ಇತಿ ಬಹುತಿ ವಿರೋಧೆ ವರ್ತಮಾನೇ ಸಮಾನೇ ವೃಪತಿಜನಪದಾನಾಂ ದುರ್ಲಭಃ ಕಾರ್ಯಕರ್ತಾ ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಸಂಚಿಕೆ ೧೦

ಜಾಹೀರಾತಿಗಳ ದರ.
ಶಾಶ್ವತ, ಇಂಗ್ಲಿಷ ಸ್ಟೈಲ್ ಆಫೀಸ (೧೫ ಎಮ್ಮೆ ಉದ್ದ) ೨ ಸಾಲುಗಳವರೆಗೆ ರೂ ೧-೦-೦ ೪ ಸಂತ ಪ್ರತಿಸಾಲಿಗೆ ೦-೨-೦. ಹೆಚ್ಚಿಗಿದ ಸಲು ಎಷ್ಟು ಹಾಕಿದರಿಯಮೋ ೪ ಮಾಸಿ ಏಂದ ಅದ್ಧು ಸಾಲುಗಳ ಹಿಡಿಯುವುದು

ಜಾಕೀ ಜಾಹಿರಾತುಗಳ ಜಾಗೆ ಪತ್ರಸ್ವಾರ ಯಾ ಸಮಯ ತಿಳಿಸಲ್ಪಡುವದು.

(ಕುಮಟಾ— ಕಾನಡಾವೃತ್ತ, ಸೋಮವಾರ, ಕಾರೀಯು ೧೦ ನೂಹೆ ಏಪ್ರಿಲ್ ಸನ್ ೧೯೩೯ನೇ ಇಸವಿ.)

TO BE FREE -- SLAVE.

Are you able to do what you want to, or are you hampered in your freedom of action? If so, knock the "L" out of slave, — SAVE. This bank will help you. Let us open a Savings Account for you to-day.

RESOURCES OF A CRORE.

Estd: 1906.
CANARA BANK, LIMITED.

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ್, ಲಿಮಿಟೆಡ್,

(ರಿಜಿಸ್ಟರ್ಡ ಹಿಂದುಸ್ಥಾನದ ಸಂಸ್ಥೆ)

ರಿಜಿಸ್ಟರ್ಡ ಆಫೀಸು:— "ಲಕ್ಷ್ಮೀ ನಿವಾಸ" ಬಿಲ್ಡಿಂಗ್ಸ್— ಕುಂದಾಪುರ. ದ. ಕ.

ಫಿಕ್ಸೆಡ್, ಸೇವಿಂಗ್ಸ ಬೇಂಕ್, ಕರೆಂಟ್ ವಗೈರೆ ಡಿಪೋಜಿಟುಗಳು ಸ್ವೀಕರಿಸಲ್ಪಡುವವು.

ಕಾಯಂ ಠೇವಣಾತಿಗಳ ಬಡ್ಡಿ ದರಗಳು- 6 ತಿಂಗಳು ಮುದ್ದತ್ತಿಗೆ 3½% 1 ವರ್ಷದ ಮುದ್ದತ್ತಿಗೆ 4%; 2 ವರ್ಷ ಯಾ ಹೆಚ್ಚಿನ ಅವಧಿಗೆ 4½%.

ಅಲ್ಪ ಮುದ್ದತ್ತಿನ ಠೇವುಗಳು (Short term deposits) ಸಹ ಅಂಗೀಕರಿಸಲ್ಪಡುವವು.

ಎಲ್ಲಾ ವಿಧದ ಬೇಂಕಿಂಗ್ ವ್ಯವಹಾರಗಳು ಒಳ್ಳೇ ಸವಲತ್ತಿನಿಂದ ನಡಿಸಲ್ಪಡುವವು.

ಕುಂದಾಪುರ,
1—1—1939.

The Agricultural & Industrial Bank, Ltd.

ಬಂದರ ಮಂಡಳದ ವರದಿ.

ತಾ ೯-೧೨-೧೯೨೬ನೇ ಮುಂಬಯಿ ಸರ್ಕಾರವು ಇಲಾಖೆಯೊಳಗಿನ ಬಂದರಗಳ ಸ್ಥಿತಿಗತಿಯನ್ನು ಕುರಿತು ವಿಚಾರಿಸಿ ಅವನ್ನು ಸುಧಾರಿಸಲು ಮಾಡತಕ್ಕ ಉಪಾಯಗಳನ್ನು ಸೂಚಿಸುವದಕ್ಕಾಗಿ ಉಪ್ಪಿನ ಇಲಾಖೆಯ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಒಂದು ವಿಚಾರ ಮಂಡಳವನ್ನು ನೇಮಿಸಿತ್ತು ಈ ಮಂಡಳನ್ನು ದೀಪಸ್ತಂಭ ಇಲಾಖೆಯ ಡೆಪ್ಯುಟಿ ಸುಪರಿಂಟೆಂಡೆಂಟರೂ, ಕುಲಬಾ ಜಿಲ್ಲೆಯ ಪ್ರತಿನಿಧಿಗಳಾದ ರಾ॥ ಲಿಮಯೇಯವರೂ, ರತ್ನಾಗಿರಿ ಜಿಲ್ಲೆಯ ಪ್ರತಿನಿಧಿಗಳಾದ ರಾ॥ ರಾತೀಯವರೂ ಸಭಾಸದರಾಗಿ ನೇಮಿಸಲ್ಪಟ್ಟಿದ್ದರು ಈ ಮಂಡಳಕ್ಕೆ ಬಂದರಗಳಿಗೆ ಸಂಬಂಧಪಟ್ಟ ಬೇರೆ ಬೇರೆ ಜಿಲ್ಲೆಗಳಿಗೆ ಸೇರಿದ ಸಭಾಸದರನ್ನು ನೇಮಿಸಿಕೊಳ್ಳುವ ಅಧಿಕಾರ ವಿದ್ದಂತೆ, ನೆವ ಜಿಲ್ಲೆಯ ಪರವಾಗಿ ಕಲೆಕ್ಟರರೂ, ಎಗ್ಸಿಕ್ಯೂಟಿವ್ ಇಂಜನಿಯರರೂ, ರಾ॥ ಸುಬ್ರಾವ ರಾಮಚಂದ್ರ ಹಳದೀಪುರಕರರವರೂ ಸಭಾಸದರಾಗಿ ನೇಮಿಸಲ್ಪಟ್ಟಿದ್ದರು ಈ ಮಂಡಳದವರು ತಾ ೬-೧೧-೧೯೨೬ನೇಗೆ ಮುಂಬಯಿಯಿಂದ ಹೊರಟು, ತಾ ೩-೧೨-೧೯೨೬ನೇ ಕಾರವಾರ-ಸದಾಶಿವಗಡ, ತಾ ೪-೧೨-೧೯೨೬ನೇ ತದಡಿ-ಸಾಜಕೆಟ್ಟು, ತಾ. ೬-೧೨ನೇ ಮುರ್ಡೇಶ್ವರ—ಕಿರಾಂಪಿ—ವೆಂಕಟಪುರ—ಭಟಕಳ ಹೀಗೆಲ್ಲ ಬಂದರಗಳನ್ನು ಸಂದರ್ಶಿಸಿ, ಸರಕಾರ್ಕೆತಮ್ಮ ವರದಿಯನ್ನು ಪ್ರಧ್ಯಕ್ಷೆ ಸಾದರಪಡಿಸಿದ್ದಾರೆ ಈ ವರದಿ ೧೩೩ ಪುಟಗಳದ್ದಿದ್ದು, ಇಲಾಖೆಯೊಳಗಿನ ಎಲ್ಲ ಬಂದರಗಳ ಸ್ಥಿತಿ-ಗತಿ ವಿಚಾರಿಸೋಣಾಗಿದೆ ಬಂದರಗಳನ್ನು ಸುಧಾರಿಸುವ ಕುರಿತು ಇನ್ನೂ ಮಾಡಿದ ಸೂಚನೆಗಳನ್ನು ವಿಚಾರಿಸಿ, ಅವುಗಳ ಕುರಿತು ಮಂಡಳದವರು ತಮ್ಮ ಅಭಿಪ್ರಾಯವನ್ನು ವ್ಯಕ್ತ ಗೊಳಿಸಿದ್ದಾರೆ. ನಮ್ಮ ಜಿಲ್ಲೆಯೊಳಗಿನ ಬಂದರಗಳ ಕುರಿತು ಮಂಡಳದವರು ಮಾಡಿದ ಶಿಫಾರಸುಗಳ್ಯಾವ ವೆಂದರೆ-

ಹೊಳೆಗಳಲ್ಲಿ ಮಣ್ಣು-ಕೆಸರು-ಉಸುಬು ತುಂಬಿ ಬಂದು, ದೊಡ್ಡ ದೊಡ್ಡ ಮಜ್ಜೆಗಳ ಓಡಾಟಕ್ಕೆ ತೊಂದರೆಯಾಗುತ್ತಿರುವದಾಗಿಯೂ ಅವನ್ನು ಪ್ರತಿ ವರ್ಷ ತೆಗೆಯುವ ಯೋಜನೆಯಾಗಬೇಕಾಗಿಯೂ ಎಷ್ಟೋ ಬಂದರದವರು ಸೂಚಿಸಿದ್ದರು ಈ ಸೂಚನೆಯನ್ನು ಬಂದರ ಮಂಡಳದವರು ಮಾನ್ಯ ಮಾಡಿಲ್ಲಿಲ್ಲ ಇಲಾಖೆಯೊಳಗಿನ ಹೊಳೆಗಳಲ್ಲಿ ಈಗ ತುಂಬಿದ್ದ ಮಣ್ಣನ್ನು ತೆಗೆಯಲಿಕ್ಕೆ ಸರಾಸರಿ ೪೦ ಲಕ್ಷ ರೂಪಾಯಿ ಖರ್ಚು ಬರಬಹುದೆಂದು ಎಣಿಸೋಣಾಗಿದೆ. ಇದರೊಳಗೆ ಶರಾವತಿಯಂಥ ದೊಡ್ಡ ಹೊಳೆಗಳ ವಿಚಾರ ಮಾಡಲಿಲ್ಲ ಇವುಗಳಲ್ಲಿಯ ಮಣ್ಣು ತೆಗೆಯಬೇಕಾದರೆ ಪ್ರತಿಯೊಂದಕ್ಕೆ ೧೦ ಲಕ್ಷ ರೂಪಾಯಿಗಳು ಬೇಕು. ಮತ್ತು ಕೆಸರು-ಮಣ್ಣು ತೆಗೆಯುವ ಯಂತ್ರವನ್ನು ಉಪಯೋಗಿಸಬೇಕಾದರೆ ಕನಿಷ್ಟ ೧೦ ಅಡಿ ಆಳ ನೀರು ಇರಬೇಕು. ಆದರಿಂದ ಇವ್ಯ ಖರ್ಚು ಮಾಡುವದು ಅವಶ್ಯಕತೆ ಸಹ ತೋರುವದಿಲ್ಲ ಯುಕ್ತ ಕಂಡರೆ ದಕ್ಕೆಯ ಫಂಡಿನಿಂದ ಒದು ಸಣ್ಣ ಮಣ್ಣು ತೆಗೆಯುವ ಯಂತ್ರವನ್ನು ಕೊಂಡುಕೊಂಡು ರತ್ನಾಗಿರಿ-ಕುಲಬಾ ಜಿಲ್ಲೆಗಳೊಳಗಿನ ೫ ಬಂದರಗಳಲ್ಲಿ ಪ್ರಯತ್ನ ಮಾಡಿ ನೋಡಬಹುದು.

ಹೊಳೆಗಳಲ್ಲಿ ಮಣ್ಣು ತುಂಬಿ ಅಲ್ಲಲ್ಲಿ ಬೇಲೆ ಬೀಳುತ್ತದೆ, ಹಲವೆಡೆ ದೊಡ್ಡ ದೊಡ್ಡ ಬೇಲೆಗಳವೆ ಹೊಳೆಯ ನಡುವಲ್ಲಿ ಉಸುಬಿನ ರಾಶಿಯಾಗಿ ಬೆಳುತ್ತಿದೆ ಹೊಳೆಯೊಳಗ ತದಡಿ ಒಂದರದ ಸಮಿಾಪ ೬ ಕೆಡೆ ಬೇಲೆ ಬೀಳುತ್ತಿದೆ ಕಾಗಲ, ಮಣಕಿ, ಹಂಕಡೆ ಈ ೩ ಗ್ರಾಮಗಳ ಒಳ ೪ ಬೇಲೆಗಳು ಬೆಳುತ್ತವೆ. ನೊದಲು ಸಿಟ್ಟವ ಮೇಲಿನ ಸರಕುಗಳೆಲ್ಲ ಕುಮಟೆಯ ಮಾರ್ಗವಾಗಿ ಒಂ-ಹೋಗುತ್ತಿದ್ದವು. ಕುಮಟೆಯೊಳಗೆ ದೊಡ್ಡ ದೊಡ್ಡ ವಜಾರಗಳವ, ಭದ್ರವಾದ ದಕ್ಕೆಯೂ ಉಂಟು ಕುಮಟಾ ಮ್ಯುನಿಸಿಪಾಲಿಟಿಯ ಬರ್ಡಿನಲ್ ತೆರಿಗೆ ಮತ್ತು ವಜಾರಗಳ ಭಾಡಿಗೆ ಉಳಿಸುವದಕ್ಕಾಗಿ ವರ್ತಕರು ತದಡಿ ಬಂದರದಿಂದ ತಮ್ಮ ಸರಕುಗಳನ್ನು ಹೊಳೆಯ ಮಾರ್ಗವಾಗಿ ಕಳಿಸುತ್ತಿದ್ದರಿ ದೀನದಿಯಲ್ಲಿ ಸಂಕ ಕಟ್ಟಿಸುವ ವಿಚಾರ ನಡದಿದೆಯೆಂದು ತಿಳಿಯತ್ತೇನೆ. ಸಂಕವಾದರೆ ಭಟ್ಟದ ಮೇಲಿನ ವ್ಯಾಪಾರವು ಪುನಃ ಕುಮಟೆಯ ಮಾರ್ಗವಾಗಿಯೇ ಸಾಗಬಹುದು ಆದರಿಂದ ಸಂಕವಾದ ಬಳಿಕ ಒದಗಬಹುದಾದ ಪರಿಸ್ಥಿತಿಯನ್ನು ನೀರೀಕ್ಷಿಸಿ, ಆ ಮೇಲೆ ಈ ಕುರಿತು ಯುಕ್ತ ಕಂಡ ಕ್ರಮ ಕೈಕೊಳ್ಳತಕ್ಕದ್ದು. ತದಡಿಯೊಳಗಿನ ಧಕ್ಕೆಯ ಬಳಿ ಕೆಸರು ತುಂಬಿ ಮಜ್ಜೆಗಳಿಗೆ ತೊಂದರೆಯಾಗುತ್ತದಾಗಿ ನಮಗೆ ಹೇಳೋಣಾಗಿತ್ತು. ಆದರೆ ಸ್ಥಳದಲ್ಲಿ ಮಾಡಿದ ಚೌಕಶಿಯಿಂದ ೫೦ ಟನ್ ಭಾರದ ಹಡಗುಗಳು ಧಕ್ಕೆಗೆ ತಾಗುತ್ತವಾಗಿ ನಮಗೆ ತಿಳಿದು ಬಂತು. ಇದಕ್ಕೂ ದೊಡ್ಡ ಮಜ್ಜೆಗಳು ಈ ಬಂದರಕ್ಕೆ ಬರುವ ದಿಲ್ಲವಾದ್ದರಿಂದ ಈ ಕುರಿತು ಯಾವದೇ ಕ್ರಮ ಕೈಕೊಳ್ಳುವ ಅವಶ್ಯವಿಲ್ಲ

ಕರಾವತಿ ನದಿಗೆ ಮಾವಿನಕುರ್ವೆ, ಇಡಗುಂಜಿ, ಕೊಡಾಣಿ ಈ ೩ ಗ್ರಾಮಗಳ ಬಳಿ ೩ ದೊಡ್ಡ ದೊಡ್ಡ ಬೇಲೆಗಳು ಬೀಳುತ್ತವೆ ಕೂಲಿಯಾಳುಗಳನ್ನು ಹಚ್ಚಿ ಅವನ್ನು ತೆಗೆಯುವದು ಅಶಕ್ಯ ಮಾತು. ಹೀಗೆ ಬೇಲೆ ಬೀಳ ಕ್ರಿದ್ದಾಗ್ಯೂ ಮಧ್ಯಮ ತರಗತಿಯ ಹಡಗಗಳು ಗೇರಸಪ್ಪೆಯ ತನಕ ಭರತಿಗೆ ಹೋಗಬಲ್ಲವು. ಆದರಿಂದ ಇಂಜನ್ನಿಯರ ಇಲಾಖೆಯವರು ಮಾವಿನ ಕುರ್ವೆಯಲ್ಲಿ ಸಣಕ ಕಟ್ಟಬೇಕೆಂದು ಮಾಡಿದ ಸೂಚನೆ ನಮಗೆ ಸಮ್ಮತವಿದೆ. ಮಾವಿನಕುರ್ವೆಯಲ್ಲಿ ಬೀಳುವ ಬೇಲೆ ಮೊದಲನೆದು. ಸಂಕ ಆಗದಿದ್ದರೆ ಬೇಲೆ ಬೀಳುವಲ್ಲಿ ಗುಟ್ಟು ಹುಡಿ ಗುರ್ತು ಮಾಡಿ ಹೊಳೆಯಲ್ಲಿ ಆಡ್ಡಾಡುವವರಿಗೆ ಸೂಚನೆ ಕೊಡಬಹುದು ಕರಾವತಿ ಹೊಳೆಯ ಒಳಬಾಯಿ ಶ್ರದೇಶದಲ್ಲಿ ಬೇಲೆ ಬೀಳುತ್ತಿದ್ದಾಗ್ಯೂ ಆದರಿಂದ ಯಾರಿಗೂ ಯಾವದೇ ಅನಾನುಕೂಲತೆಯಾಗುವದಿಲ್ಲ. ಅದರಿಂದ ಈ ಪ್ರದೇಶದಲ್ಲಿ ವಿನೋದೂ ವಿರ್ವಾಟು ಮಾಡುವ ದವಶ್ಯವಿಲ್ಲ.

ಭಟಕಳ ಹೊಳೆಯ ಕುರಿತು ಕಮಿಟಿಯವರು ವಿಶೇಷ ಸೂಚನೆ ಮಾಡಿದ್ದಾರೆ ಭಟಕಳದೊಳಗೆ ಹೊಳೆ ತುಂಬಿ ಬಂದಿದೆ ಮಜ್ಜೆಗಳಿಗೆ ಓಡ್ಯಾಡಲಿಕ್ಕೆ ತೊಂದರೆಯಾಗುತ್ತದೆ, ಮಣ್ಣು ತೆಗೆಯುವದು ಅಶಕ್ಯ ಆದರಿಂದ ಸ್ವಾಭಾವಿಕವಾಗಿಯೇ ಮಣ್ಣು ಹರಿದು ಹೋಗುವಂತೆ ಕಮಿಟಿಯ ಸೂಚನೆದಾದ, ದೀಪಸ್ತಂಭ ಇಲಾಖೆಯ ಡೆಪ್ಯುಟಿ ಸುಪರಿಂಟೆಂಡಂಟರಾದ ಮಿ॥ ಲೊಗ್ಸ್ಟೈಲರವರು ಮಾಡಿದ ಯೋಜನೆಯನ್ನು ಮಂಡಳದವರು ಅಂಗೀಕರಿಸಿದ್ದಾರೆ: ಭರತ ಕ್ಕೆ ನೀರು ಒಣೀರುತ್ತದೆ, ಆ ಕಾಲದಲ್ಲಿ ನೀರನ್ನು ಕಟ್ಟಿಡಬೇಕು, ಬಲೋ ಇಳಿತವಾದ ಒಳಕ್ಕೆ ಆ ನೀರನ್ನು ಬಿಟ್ಟುಬಡಬೇಕು. ಹೊಳೆಯೊಳಗಿನ ಕೆಸರು ಮಣ್ಣು ಪ್ರವಾಹವೇಗಕ್ಕೆ ಹರಿದುಹೋಗಿ ಹೊಳೆ

ಸ್ವದೇಶೀ

ಬಜಳೆಗಜಳು

ಸ್ವದೇಶೀ

ತಗ್ಗ, ಅಂದ, ಮೋಹಕ ಮತ್ತು ಪಕ್ಕ ಒಣ್ಣಿದ ಆದರೆ ವಾರದರ್ಶಕವಾದ ಜವದಾಣಾಪಾಸಾ (ಗೋದಿಕಾಳಿನಂತೆ ಕೆತ್ತಿದ) ಕಾಂಪ (ಪೈಲು ಇಲ್ಲ) ಮತ್ತು ಇತರ ಹ್ಯಾನ್ಸೀ ದಿರುಸಾಯನಗಳ ಕಾಜಿನ ಬಳೆಗಳು, ಮೆಸರ್ಸ ಗೋರ ಮತ್ತು ಕಂಪನಿಯವರು ತಮ್ಮ ಕ್ರಿಸ್ಟಲ್ ಗ್ಲಾಸ ವರ್ಕ್ಸ ಸಂಸ್ಥೆಯಲ್ಲಿ ತಯಾರಿಸುತ್ತಿರುವ ಅವರ ಮಾಲು ಈಗ ಬಜಾರದಲ್ಲಿ ಎಲ್ಲ ವ್ಯಾಪಾರಕ್ಕರ ಕಡೆಗೆ ದೊರೆಯುವದು. ರೀತಿ ನಿರ್ಣಯ ಮಾಡಿರುವ ಬಗ್ಗೆ ದರ ಕೊಡಲಾಗಿದೆ.

ಜವದಾಣಾ ಪಾಸಾ — ಪೈಲು ಹಾಕಿದ ಒಳೆಗಲು ೦—೬—೬ ಪ್ರತಿಯೊಂದು ಕಟ್ಟಿಗೆ [ಒಂದು ಕಟ್ಟಿನಲ್ಲಿ ಆರು ಡಜನ್ ತೋಡುಗಳು ಇರುವವು]
ಕಾಂಪ — ತ್ರಿಕೋಣ ಪ್ಲೇನ್ ೦—೬—೬
ಜವದಾಣಾ ಕಾಂಪ — ತ್ರಿಕೋಣ ಪ್ಲೇನ್ ಮೇಲೆ ಪೈಲು ಹಾಕಿದ್ದು ೦—೨—೦

ಎಲ್ಲ ದರಗಳು ಪ್ಯಾಕಿಂಗ ಹೊರ್ತುಪಡಿಸಿ ಕಾರಖಾನೆಯ ಡಿಲಿವ್ಹರಿ ಎಂದು ತಿಳಿಯತಕ್ಕದ್ದು ಪ್ಯಾಕಿಂಗ ಬಾಬ್ತ ಒಂದು ಪೆಟ್ಟಿಗೆಗೆ ರೂ. ೧ ೨ ೦ ಪೈ।

ಹೆಚ್ಚಿನ ಮಾಹಿತಿಗಾಗಿ ಬರೆಯಿರಿ.— ಮೆಸರ್ಸ ಗೋರ ಮತ್ತು ಕಂಪನಿ,
ಮೆಹರವಾನ ಬಿಲ್ಡಿಂಗ, ಸರ ಫಿರೋಜಶಹಾ ಮೆಹತಾ ರೋಡ, ಫೋರ್ಟ, ಮುಂಬಯಿ

ಕೃಷ್ಣಪ್ಪನ್ನ ಕೈಮಮಾಗಿ ಆಶವಾಗುವದು. ಈ ಯೋಜನೆ ಗಾಗ್ಯು, ಉಳುವಿಲ ಚೀಲಗೆರೆಯಪ್ಪೇ ಖರ್ಚು ನಾನು ಈ ಹೊಳೆಯನ್ನು ೫ ವರ್ಷಗಳಿಂದ ನೀರಿ ಸ್ಥಿಕ್ಕಿದ್ದೇನೆ ಈ ಪ್ರಯೋಗದಿಂದ ಕಾರ್ಯ ಸಾಧಿ ಸಲೇಬೇಕು ನಾನು ಇದನ್ನು ಕೈಕೊಳ್ಳಲಿಕ್ಕೆ ಸಿದ್ಧ ವಿದ್ದೇನೆ." ಹೀಗೆ ವಿಲ್ಲೋಸ್ಟೇಲರವರು ಖಂಡಿ ತ ಹೇಳುತ್ತಾರೆ. ಅದರಿಂದ ಈ ಉಪಾಯ ಮಾಡ ಬಹುದೆಂದು ಮಂಡಳದವರು ಪ್ರಸ್ತಿ ಮಣ್ಣು ತೆಗೆದರೆ ನೈಮ್ಯ ಭಾಗದಲ್ಲಿ ಧಕ್ಕೆಯನ್ನು ಬೆಳಸಬಹುದಾ ಗಯೂ ಮಂತಳದವರು ಸೂಚಿಸುತ್ತಾರೆ. ಉತ್ತರ ಪಾರ್ಶ್ವದಲ್ಲಿ ಧಕ್ಕೆಯನ್ನು ಜಳಸಬೇಕಾಗಿ ಒಬ್ಬರು ಸೂಚಿಸಿದ್ದರು. ಆದರೆ, ಆ ಪಾರ್ಶ್ವದಲ್ಲಿ ಆಶ್ರಯ ವೇನೂ ಇಲ್ಲದ್ದರಿಂದ ಮಂತಳದವರು ಆ ಸೂಚನೆ ಯನ್ನು ಗ್ರಾಹ್ಯ ಮಾಡಲಿಲ್ಲ.

ಬೆಲೇಕೇರಿಯಿಂದ ಹಟ್ಟಿಕೇರಿ ವರೆಗಿನ ಹೊಳೆಯಲ್ಲಿ ಬಂಡಗಲ್ಲುಗಳಿರುವದರಿಂದ ೭ ಟನ್ ಭಾರದ ವರೆಗಿನ ಮಜ್ಜೆಗಳು ಹಟ್ಟಿಕೇರಿಯ ವರೆಗೆ ಹೋಗುತ್ತವೆ. ಹಟ್ಟಿಕೇರಿಯು ಕಟ್ಟಿಗೆ ವ್ಯಾಪಾರದ ಸ್ಥಳ. ಜನರು ನೂಡಿದ ಸೂಚನೆಯಂತೆ ೩-೪ ಕಡೆ ಹೊಳೆಯಲಿನ ಬಂಡೆಗಲ್ಲುಗಳನ್ನು ತೆಗಿಸಿದರೆ ೧೦ ಟನ್ ಭಾರದಷ್ಟು ಮಜ್ಜೆಗಳು ಓಡಾಡಲನುಕೂಲವಾಗುವದು. ಆದರೆ ಬಂಡೆಗಲ್ಲುಗಳನ್ನು ತೆಗೆದರೆ ಮಣ್ಣು ತುಂಬುವ ಭೀತಿಯುಂಟು. ಹಟ್ಟಿಕೇರಿಯಿಂದ ಸಣ್ಣ ಮಜ್ಜೆಗಳಲ್ಲಿ ತಂದ ಕಟ್ಟಿಗೆಯನ್ನು ಬೇಲೇಕೇರಿಯಲ್ಲಿ ಕೆಲವು ಕಾಲ ಇಟ್ಟು ಅಮೇಲೆ ದೊಡ್ಡ ವ-ಜ್ಜೆಗಳಲ್ಲಿ ಕಳಸುತ್ತಾರೆ. ಹೊಸ ಸೂಚನೆಯಿಂದ ವ್ಯಾಪಾರಕ್ಕೆ ಏನೊಂದೂ ಅಡಚಣೆಯಾಗುವಂತಿಲ್ಲ.

ಅಂಕೋಲೆಯೊಳಗಿನ ಕಸ್ಟಪ್ಪ ಅಘಸಿಗೆ ದೋಣಿ ಕಲ್ಪುವಂತೆ ಹೊಳೆಯೊಳಗಿನ ಮಣ್ಣು ತೆಗೆಯುವದು ಮನುಷ್ಯ ಯತ್ನಕ್ಕೆ ಸಾಧ್ಯವಾದ ಮಾತಲ್ಲ ಇದಾಗ ದಿದ್ದರೆ ಆಜೆ ದಂಡೆಗಿರುವ ಕೇಣಿಯಲ್ಲಿ ಕಸ್ಟಪ್ಪ ಆಫೀಸು ಇಡಬೇಕಾಗಿಯೂ ಕೇಡೆ-ಅಂಕೋಲಾ ದಂಡೆಗಳನ್ನು ಜೋಡಿಸುವಂತೆ ಈಗ ಇರುವ ಸಣ್ಣ ಸಂಕವನ್ನು ದೊಡ್ಡವಾಗಿ ಕಟ್ಟಸಬೆ ಕಾಗಿಯೂ ಜನರು ಸೂಚನೆ ಮಾಡಿದರು. ಇದು ವ್ಯವಹಾರಿಕ ಸೂಚನೆ ಮತ್ತು ಇದನ್ನು ಸ್ವೀಕರಿಸಬೇಕಾಗಿ ಕಮಿಟಿಯು ನಿರ್ಣಯ ಕೊಟ್ಟರುತ್ತದೆ.

ಗಂಗಾವಳಿಯಲ್ಲಿ ಹೊಳೆಯೊಳಗಿನ ಮಣ್ಣು ತೆಗಿಸ ಬೇಕಾಗಿ ಒಬ್ಬೊಬ್ಬರು ಕಟ್ಟಿಗೆ ವರ್ತಕರು ಸೂಚನೆ ಮಾಡಿದರು. ಇದಕ್ಕೆ ಜನಾಭಿಪ್ರಾಯವಿರಲಿಲ್ಲ. ಭರ ತಕ್ಕೆ ೫೦ ರಿಂದ ೬೦ ಟನ್‌ದಷ್ಟು ಭಾರವುಳ್ಳ ಮಜ್ಜೆ ಗಳು ಈಗ ಓಡಾಡುತ್ತವೆ ಸರಕಾರಿ ಕಟ್ಟಿಗೆ ಡಿಪೋ ಗಳು ಮುಚ್ಚಲ್ಪಟ್ಟವೆ, ಈಗ ಇಲ್ಲಿ ಕಟ್ಟಿಗೆ ವ್ಯಾಪಾರ ಬೆಳೆಯುವ ಸಂಭವವಿಲ್ಲ,ಅದರಿಂದ ಈ ಹೊಳೆಯ ಕುರಿ ತು ಮಂಡಳದವರು ಏನೂ ಶಿಫಾರಸು ಮಾಡುವದಿಲ್ಲ.

ಕುಮಟೆಯಲ್ಲಿ ಕಸ್ಟಮ್ಸು ಆಫೀಸಿನ ಬಳ ಹೊಳೆ ತುಂಬಿದು ಬಂದಿವೆ ಆ ಕೆಸರನ್ನು ತೆಗಿಸಬೇಕಾಗಿ ಜನರು ಸೂಚಿಸಿದ್ದರು. ಆದರೆ ಈ ಸೂಚನೆ ಗ್ರಾಹ್ಯ ವೆಲ್ಲ ಒಂದು ವರ್ಷ ಇದನ್ನು ತೆಗಿಸಿದರೆ ಮರು ವರ್ಷ ಅಷ್ಟೇ ತುಂಬಿ ಬೀಳುತ್ತದೆ ಆದರಿಂದ ಈ ಸೂಚನೆ ಕವಿಗಿಟ್ಟಿಗೆ ಗ್ರಾಹ್ಯವಾಗಿಲ್ಲ

ಬಂದರ ಮಂತಳದವರು ತಮ್ಮ ವರದಿಯ ೭ನೇ ಅಧ್ಯಾಯದಲ್ಲಿ ನಮ್ಮ ಜಿಲ್ಲೆಯೊಳಗಿನ ಬೇರೆ ಬೇರೆ ಬಂದರಗಳ ಕುರಿತು ವಿವರವಾಗಿ ಬರೆದಿದ್ದಾರೆ.—

ಕಾರವಾರದಲ್ಲಿ ಹಡಗದಿಂದ ಇಳಿಯಲು ಕಟ್ಟಿಗೆ ಯ ಧಕ್ಕೆಯಿದೆ, ಇದನ್ನು ತೆಗೆದು ಕಲ್ಲು-ಧಕ್ಕೆಯನ್ನು ಕಟ್ಟಿಸಿ ಅದರ ಮೇಲೆ ವಗ್ಗಾಲು ಇಳಿಸುವ ಯಂತ್ರ ವನ್ನು ಇಡಬೇಕು. ಈಗಿನ ಕಟ್ಟಿಗೆಯ ಸಂಕ ತೀರ ಜೀರ್ಣಾವಸ್ಥಿರುತ್ತದೆ ಇದಲ್ಲದೆ, ಪ್ರಯಾಣಿಕರಿಗೆ ಇಳಿದುಕೊಳ್ಳಲು ಒಂದು ವಿಶ್ರಾಂತಿಗೃಹವಿರಬೇಕೆಂದು ಮಂಡಳದವರು ನಿರ್ಣಯಿಸಿದ್ದಾರೆ. ಪದಾತಿಯ ಗಡದಲ್ಲಿ ಸರಕು ಇಳಿಸಲು ಒಂದು ಧಕ್ಕೆಯುಂಟು. ಆದರೆ, ಅದರಿಂದ ಜನರಿಗೆ ತಕ್ಕಷ್ಟು ಪ್ರಯೋಜನವಿರುವದಿಲ್ಲ ಈ ಧಕ್ಕೆಯ ಮೇಲೆ ಯಾವಾಗಲೂ ಸರಕು ತುಂಬಿರುತ್ತದೆ. ಈ ಧಕ್ಕೆಯನ್ನು ಬೇಸಿಯೂ ಪ್ರಯೋಜನವಾಗುವದಿಲ್ಲ. ಅದರಿಂದ ಈಗಿನ ಧಕ್ಕೆ ಯ ಪಶ್ಚಿಮ ಪಾರ್ಶ್ವದಲ್ಲಿ ಬಂಡೆಗಲ್ಲುಗಳ ಪ್ರದೇಶದ ಮೇಲೆ ಪ್ರತ್ಯೇಕ ಧಕ್ಕೆಯನ್ನು ಕಟ್ಟಸಬೇಕಾಗಿ ಮಂ ಡಳದವರು ಶಿಫಾರಸು ಮಾಡಿದ್ದಾರೆ. ಇದಲ್ಲದೆ, ಕೋಡಿಬಾಗದಲ್ಲಿ ಪ್ರತ್ಯೇಕ ಧಕ್ಕೆಯನ್ನು ಕಟ್ಟಿಸಿ ಅದನ್ನು ಕಾರವಾರ-ಕೋಡಿಬಾಗ ಮಾರ್ಗಕ್ಕೆ ಜೋಡಿ ಸುವಂತೆ ಮಂಡಳದವರು ಶಿಫಾರಸು ಮಾಡಿರುತ್ತಾರೆ

ಅಂಕೋಲೆಯ ಹೊಳೆಯೊಳಗಿನ ಮಣ್ಣು ತೆಗೆಯಬೇಕೆಂದು ಜನರು ಸೂಚಿಸಿದ್ದರು. ಸಾಧಾರಣ ೫ ಮೈಲು ಉದ್ದ ಪ್ರದೇಶದೊಳಗಿನ ಮಣ್ಣು ತೆಗೆಯ ಬೇಕಾಗುತ್ತದೆ ಇದರಿಂದ ಪ್ರಯೋಜನವಿಲ್ಲವಾಗಿ ಜನರಿಗೆ ಒಪ್ಪಿಗೆಯಾಯಿತು. ಅದರಿಂದ ಕಸ್ಟಮ್ಸು ಆಫೀಸನ್ನು ಕೇಣಿಗೆ ಒಯ್ದು ಅಂಕೋಲಾ-ಕೇಣಿಗೆ ಜೋಡಿಸುವಂತೆ ಭದ್ರವಾದ ಸಂಕವನ್ನು ಕಟ್ಟಸ ಬೇಕೆಂದು ಕಮಿಟಿಯವರು ಶಿಫಾರಸು ಮಾಡಿದ್ದಾರೆ. ಹುಬ್ಬಳ್ಳಿ-ಧಾರವಾಡ-ಬ್ಯಾಡಗಿ ಮೊದಲಾದ ಘಟ್ಟದ ಮೇಲಿನ ವ್ಯಾಪಾರ ಸ್ಥಳಗಳಿಗೂ ಅಂಕೋಲೆಗೂ ಈಗ ವ್ಯಾಪಾರ-ಸಂಬಂಧ ಇಂಟಾದ್ದರಿಂದ ಅಂಕೋಲೆಗೆ ತಕ್ಕ ಅನುಕೂಲತೆಗಳನ್ನು ಪೂರೈಸುವದವಶ್ಯ.

ಬೆಲೇಕಾನದಲ್ಲಿ ಈಗ ದೀಪಸ್ತಂಭವಿಲ್ಲ. ಉತ್ತರ ದಿಕ್ಕಿನಿಂದ ಬರುವ ಹಡಗಗಳಿಗೆ ಅಪಾಯ ಸ್ಥಳ ದಾಟಿಬಂದ ಬಳಕ, ಈ ದೀಪ ಕಾಣುತ್ತದೆ. ಅದರಿಂದ ಬೆಲೆಕಾನದ ತೀರ ಉತ್ತರ ಭಾಗದಲ್ಲಿ ದೀಪಸ್ತಂಭ ವನ್ನು ಕಟ್ಟಿಸಿದರೆ ಉತ್ತರ-ದಕ್ಷಿಣ ವರೆಗೂ ಭಾಗ ಗಳಿಂದ ಬರುವ ಹಡಗಗಳಿಗೆ ದೀಪ ಕಾಣುತ್ತದೆ.

ಕುಮಟೆ ಹೊಳೆಗೆ ಸಂಕ ಕಟ್ಟಿಸಿದ್ದರಿಂದ ಕುಮಟಾ ಹೊಳೆ ತುಂಬಿ ಬಂದಿದೆ. ಭರತಕ್ಕೆ ನೀರಿನೊಡನೆ ಬಂದ ಕೆಸರು-ಮಣ್ಣು ಹಿಂದು ಹೋಗದೆ ಕಸ್ಟಮ್ಸು ಕಚೇರಿಯ ಬಳಯಲ್ಲಿಯೇ ಉಳಿಯುತ್ತದೆ. ೫ ಟನ್ ಭಾರದ ಮಜ್ಜೆಗಳ ಮೇಲೆ ಉಗಿಹಡಗದಿಂದ ಬಂದ ಸರಕು ತರುತ್ತಾರೆ. ಈ ಕೆಸರು-ಮಣ್ಣು ತೆಗೆಯುವದು ಶಕ್ಯವಿಲ್ಲ-ಆದರಿಂದ ದೀಪಸ್ತಂಭವಿರುವಗುದ್ದಿನಕೆಳಗೆ ಒಂದು ಧಕ್ಕೆಯನ್ನು ಕಟ್ಟಿಸಕಕ್ಕದ್ದು. ಈ ಧಕ್ಕೆಗೂ ಕುಮಟಾ ಬಂದರದ ಮಾರ್ಗಕ್ಕೂ ಒಂದು ಮಾರ್ಗ ವನ್ನು ಕಟ್ಟಿಸಬೇಕು. ಕುಮಟಾ ಮ್ಯುನಿಸಿಪಾಲಿಟಿಯ ಅಧ್ಯಕ್ಷರು ಈಕಂರಿತು ಅನುಕೂಲವಾಗಿವಿಚಾರಿಸುತ್ತೇ ವಾಗಿ ತಿಳಿದಿದ್ದಾರೆ. ಈಗ ಹಡಗಗಳು ದೂರ ಲಂಗರು ಹಾಕುತ್ತವೆ. ಇನ್ನೊಂದು ದೀಪಸ್ತಂಭ ಕಟ್ಟಿಸಿ ಬೆಳ ಕು ಮಾಡಿಕೊಟ್ಟರೆ ಹಡಗಗಳು ಇನ್ನೂ ಸಮೀಪ ವಾಗಿ ಲಂಗರು ಹಾಕಲಿಕ್ಕೆ ಅನುಕೂಲವಾಗುವದಿದೆ.

ಹೊನ್ನಾವರದಲ್ಲಿ ೩೦೦ ಮೌಣಬತ್ತಿ ಶಕ್ತಿಯುಳ್ಳ ದೀಪವನ್ನು ಇಳಯುವ ಸ್ಥಳದಲ್ಲಿ ಹೆಚ್ಚಬೇಕು,

(೧೦ನೇ ಪಾನಿನ ಮೇಲೆ ಮುಂದರಿಸಿದೆ.)

ಮಕ್ಕಳಿಗೆ ವರಪ್ರದಾ

ಜಮ್ಮಿ ವೆಂಕಟರಮಣಯ್ಯನವರ

ಲಿವ್ಹರ್ ಕ್ಯೂರ್

ಲಿವ್ಹರ್ ಮತ್ತು ಯಕೃತ್

ವಿಕಾರಗಳ ಮೇಲೆ

ಅಮೋಘವಾದ ಉಪಾಯ.

ಎಲ್ಲಾ ಔಷಧ ವ್ಯಾಪಾರಿಗಳಲ್ಲಿ

ಸಿಗುತ್ತೆ.

— ಅಥವಾ —

ಜಮ್ಮಿವೆಂಕಟರಮಣಯ್ಯ

ಲಿವ್ಹರ ಮತ್ತು ಸ್ಪ್ಲೀನ ಸ್ನೆಕಲಿಸ್ಪ,

ಮೈಲಾಪುರ-ಮದ್ರಾಸ ಇವರಿಂದ ತರಿಸಿಕೊಳ್ಳಿರಿ.

ಶಾಖೆ:- ಆರ್ಕಾಟ ಶ್ರೀನಿವಾಸಾಚಾರ ಬೀದಿ, ಬೆಂಗಳೂರು ಸಿಟಿ.

ಸ್ವಿಡ್ಡಿಕ್ ಬೋರ್ಡಿನ ತತ್ವಶೂನ್ಯ ಕಾರಭಾರಕ್ಕೆ ಜಿಲ್ಲಾ ಕೊಂಗ್ರೆಸ ಕಮಿಟಿಯ ಮುದ್ರೆ ಬಿತ್ತು !

ಶ್ರೀ॥ ಶಾಸ್ತ್ರಿ-ನಾಯಕರವರ ರಾಜಿನಾಮೆಯ ಬೆದರಿಕೆ !

ಜಿಲ್ಲಾ ಧ್ಯಕ್ಷರ ಘಟನಾಕಾರ್ಯ ಪಾಂಡಿತ್ಯ ! ಉಪಾಧ್ಯಕ್ಷರ ಕಬ್ಬಾರ್ಧಕಾಶಲ್ಯ !!

ವೃಕ್ಷಪತ್ರಿಕೆಗಳ ನಿಷೇಧ !!

[ನಮ್ಮ ಸ್ವಂತ ಪ್ರತಿನಿಧಿಗಳು ಸಂಗ್ರಹಿಸಿದ್ದು]

ಜಿಲ್ಲಾ ಸ್ವಿಡ್ಡಿಕ್ ಬೋರ್ಡಿನವರು ತಾವೇ ಮಾಡಿದ ಏಯಮಗಳನ್ನೂ ಜಿಲ್ಲಾ ಕೊಂಗ್ರೆಸ ಕಮಿಟಿಯವರು ತಂತಿಕೊಟ್ಟಿ ಮಾರ್ಗವಷ್ಟೂ ರಾಷ್ಟ್ರೀಯ ಸಭೆಯ ಉದಾತ್ತ ಧ್ಯೇಯ-ತತ್ವಗಳನ್ನು ಪರ್ಯಾಕ್ಷಿಸಿ, ಯಾವುದೇ ಅಂಶಕ ಹೇತುಗಳನ್ನು ಗಾಧಿಸಲೀಸದೆಯೆ ಇದೇ ಬರುವ ಜಿಲ್ಲಾ ಬೋರ್ಡಿಗೆ ಚುನಾವಣೆಗೆ ಲೋಕಲ್ ಬೋರ್ಡಿನ ಚುನಾವಣೆಗೆ ಲೋಕಬೆಂಬಲವಿಲ್ಲದ, ಅಪ್ರಸ್ತುತ, ಆತ್ಮಂತ ಅಪಪ್ರಾತ್ರ, ಮತ್ತು ಮುಂಬೆ ಪ್ರಮುಖ್ಯತೆಯನ್ನು ಜೊಂದಲೆಳಸುವ ಭಾದುರಿಯಾಳುಗಳನ್ನು ಕೊಂಗ್ರೆಸ ಪರವಾಗಿ ನಿಲ್ಲಿಸಿದ ಬಗ್ಗೆ ಬೆಟ್ಟಿಯೊಳಗಿನ ವೃತ್ತ ಪತ್ರಿಕೆಗಳಲ್ಲೂ ಜಲ್ಲೆಯಲ್ಲೂ ಘಟ್ಟಿತರ ಟೀಕೆಯಾಗುತ್ತಿರುವದನ್ನು ಕಂಡು ನಮ್ಮ ಸ್ವಿಡ್ಡಿ ಬೋರ್ಡಿನ ಸದಸ್ಯರಿಗೂ ಜಿಲ್ಲಾ ಕೊಂಗ್ರೆಸ ಕಮಿಟಿಯ ಪ್ರಮುಖ ಕಾರ್ಯಕರ್ತರಿಗೂ ಏನೆ ಹಾಗಹತ್ತಿತ್ತೆ ! ಆದ್ದರಿಂದ ಅವರು ತಾವು ಮಾಡಿರುವ ಅಕಶ್ಯಕ್ಯಗಳಿಗೆ ಜಿಲ್ಲಾ ಕೊಂಗ್ರೆಸ ಕಮಿಟಿಯ ಮಹಾಸಭೆಯ ಸಮ್ಮತಿವರ್ಣಕ ಮುದ್ರೆಯನ್ನು ಹಾಕಿಕೊಳ್ಳಲೆಸುಗಿ ಕಳೆದವಾರ ತಾ ೬ನೇ ಸೋಮವಾರ ೬ ಘಂಟೆಗೆ ಇಲ್ಲಿ ಕುದುರೆಯಲ್ಲಿ ಜಿಲ್ಲಾ ಕೊಂಗ್ರೆಸ ಕಮಿಟಿಯ ಮಾಸಾ ಸಭೆಯನ್ನು ಕೂಡಿಸುವ ಏರ್ಪಾಟು ಮಾಡಿದ್ದರು ಚುನಾವಣೆ ಕಾರ್ಯವಲ್ಲಿ ಅಸ್ಥೆಯುಳ್ಳ ನೂರಾರು ಜಿಲ್ಲಾ ಬಾಂಧವರು ಈ ಸಭೆಯನ್ನು ಎದುರು ನೋಡುತ್ತಿದ್ದರು

ನೆಮದಲೇ ಪ್ರಕಟವಾದ ಕಾರ್ಯಕ್ರಮದಂತೆ ಶನಿವಾರ ಮಧ್ಯಾಹ್ನ ೩ ಘಂಟೆಗೆ ಸ್ಟಲ್ಲಿಯ " ಕೊಂಗ್ರೆಸ-ಭುವನ " ದಲ್ಲಿ ಕಮಿಟಿಯ ಮಹಾಸಭೆಗೆ ಪ್ರಾರಂಭವಾಯಿತು ಬೆಳಿ ಬೆಳಿ ತಾಲ್ಲೂಕುಗಳಿಂದ ೧೦ ಮಂದಿ ಕಮಿಟಿಯ ಸದಸ್ಯರು ಸಬೆಗೆ ಬಂದಿದ್ದರು ಕಮಿಟಿಯ ಸದಸ್ಯರಲ್ಲದ ಅನೇಕ ಜನರೂ ಸಭಾಗ್ಯಹವಲ್ಲಿ ಕೂಡಿದ್ದರು ಜಿಲ್ಲಾಧ್ಯಕ್ಷೆ ರಾ॥ ಶಾಸ್ತ್ರಿಯವರು ಸಭೆಯ ಕೆಲಸ ಪ್ರಾರಂಭ ಮಾಡುತ್ತ ತಮ್ಮ ಪ್ರಾಸ್ತಾವಿಕ ಭಾಷಣದಲ್ಲಿ ಈ ಮಹಾಸಭೆ ಕರೆದ ಉದ್ದೇಶವನ್ನು ತಿಳಿಸಿ ಹೇಳಿದರು ಬರುವ ಜಿಲ್ಲಾ ಬೋರ್ಡಿನ ಚುನಾವಣೆಗೆ ಕೊಂಗ್ರೆಸ ಪಕ್ಷದಿಂದ ಸ್ವಿಡ್ಡಿ ಬೋರ್ಡಿನ ಸದಸ್ಯರು ನಮ್ಮ ಸ್ವಿಡ್ಡಿ ಬೋರ್ಡಿನವರು ಆರಿರುವ ಹುರಿಯಾಳುಗಳ ಸಂಬಂಧ ಮತ್ತು ಸ್ವಿಡ್ಡಿ ಬೋರ್ಡಿನ ಕಾರಭಾರದ ಸಂಬಂಧ ಕೆಲವು ಸ್ವಾರ್ಥ ವೃತ್ತಪತ್ರಿಕೆಗಳಲ್ಲಿ ಬಹಳ ಅಪ-ಪ್ರಚಾರ, ವಿರೋಧಾತ್ಮಕ ಟೀಕೆಗಳು ಪ್ರಕಟವಾಗಿರುವುದರಿಂದಲೆ, ಆದ್ದರಿಂದ ಸ್ವಿಡ್ಡಿ ಬೋರ್ಡಿನ ಸದಸ್ಯರುಗಳನ್ನೂ ಕಾರ್ಯವನ್ನೂ ಪೂರ್ಣವಾಗಿ ಚರ್ಚಿಸಿ, ಆ ಕುರಿತು ಜಿಲ್ಲಾ ಕಮಿಟಿಯು ಅಭಿಪ್ರಾಯವೇನಿರುತ್ತದೆಂಬುದನ್ನು ಸ್ಪಷ್ಟಪಡಿಸಬೇಕಾಗಿದೆ, ಸ್ವಿಡ್ಡಿ ಬೋರ್ಡಿನವರು ಮಾಡಿರುವ ಅಯ್ಕೆ ಪೂರ್ಣ ನಿರ್ದೋಷವಿರುತ್ತದೆಂದು ನಾವು ಹೇಳುವದಿಲ್ಲ ಅದರೆ ಜಿಲ್ಲೆಯೊಳಗಿನ ಹಾಗೂ ಆಲ್ಲಲ್ಲಿಯ ವಿಶಿಷ್ಟ ಪರಿಸ್ಥಿತಿಯಲ್ಲಿ ಅವರು ಮಾಡಿರುವ ಅಯ್ಕೆಗಳು ಸರಯಾಗಿರುವವೋ ಇಲ್ಲವೋ ಎಂಬುದನ್ನು ನಾವೆ ನೇರವಿಟ್ಟು ಬೋರ್ಡಿನವರು ಯಾರಿಂದಲೂ ಲಂಚ ಮನಂತಾದ್ದನ್ನು ತಕ್ಕೊಂಡು ಅಯ್ಕೆಗಳನ್ನು ಮಾಡಿರುವದೆಂದು ಯಾರಾದರೂ ಆರೋಪಣೆಗಳಿದ್ದರೆ ಅವನ್ನು ಮುಂಬೆ ಬಂದು ದಿಟ್ಟತನದಿಂದ ಹೇಳಿರಿ, ನಮ್ಮ ಮೇಲೆ ವಿಶ್ವಾಸವಿಟ್ಟಿದ್ದರೆ ಹಾಗೆ ಹೇಳಿರಿ, ನಾವು ರಾಜಿನಾಮೆ ಕೊಟ್ಟು ಹೊರಗೆ ಹೋಗುತ್ತೇವೆ ನಮ್ಮ ಕೆಲಸದ ಬಗ್ಗೆ ಕೊಂಗ್ರೆಸ್ಸಿನವರ್ಯಾರಿಗಾದರೂ ಅಸಮಾಧಾನವುಂಟಾದರೆ ಅವರು ನಮಗೆ ಬರೆದು ಇಲ್ಲವೆ ಭೆಟ್ಟಿಯಾಗಿ ಚರ್ಚೆ ಮಾಡಬಹುದಿತ್ತು, ನಮ ಸಂಗತಿಗಳನ್ನು ತಿಳಿಕೊಳ್ಳಬಹುದಿತ್ತು ಆ ಮಾರ್ಗ ಬಿಟ್ಟು ಕೊಟ್ಟು ಪತ್ರಿಕೆಗಳಲ್ಲಿ ಟೀಕೆ ಮಾಡುವದು ಸಯುಕ್ತಿಕವಲ್ಲ ' ಘಟನಾನುಸಾರ (constitutional) ಮಾರ್ಗವಲ್ಲ ' ಜಿಲ್ಲಾ ಕಮಿಟಿಯ ಸಬ್ಯಸದರಲ್ಲದವರೂ ಈ ಚರ್ಚೆಯಲ್ಲಿ ಭಾಗ ತೆಗೆದುಕೊಳ್ಳಬಹುದಾಗಿ ನಾನು ಸೂಚಿಸುತ್ತೇನೆ ಅವರಿಗೆ ಮತ ಪಾತ್ರ ಕೊಡಬಾರದು ಈ ಪ್ರಕಾರ ಅಧ್ಯಕ್ಷರು ರಾ॥ ಶಾಸ್ತ್ರಿಯವರು ಸುದಿರು ಸಭಿಕರಿಗೆ ಭರ್ಜಗಾರಂಭ ಮಾಡಲು ವಿನ್ನವಿಸಿದರು

ಮೊಲಿನಂತೆ ಅಧ್ಯಕ್ಷರು ಸದಸ್ಯೇತರ ಜನರಿಗೆ ಚರ್ಚೆಯಲ್ಲಿ ಭಾಗ ತೆಗೆದುಕೊಳ್ಳಲು ಆನುವು ಕೊಟ್ಟ ಬಗ್ಗೆ ಅಂಕೋಲೆಯ ರಾ॥ ಶ್ರೀನಿವಾಸ ಪೈರು ಅಧ್ಯಕ್ಷರ ಆಭಾರ ಮನ್ನಣೆ ಮಾಡಿ ಅಧ್ಯಕ್ಷರು ಹೇಳಿರುವ ಘಟನಾನುಸಾರ ಮಾರ್ಗದಿಂದ ಕಾರ್ಯಸಿದ್ಧಿಯಾಗದ್ದರಿಂದಲೇ ತಮ್ಮಂತಹ ಅನಂತಷ್ಟರು ನಿರುತ್ಸಾಹಿಗಳಾಗಿ ಪತ್ರಿಕೆಗಳ ಆಶ್ರಯ ತಕ್ಕೊಳ್ಳಬೇಕಾಯಿತೆಂದು ಸ್ಪಷ್ಟೀಕರಣ ಮಾಡಿದರು ಅವರ ಹಿಂದಿನಿಂದ ರಾ॥ ಹರಿ ಸೈರು (ಅಂಕೋಲಾ) ಎದ್ದು, ಬೋರ್ಡಿನವರು ಮಾಡಿರುವ ಅಯ್ಕೆಗಳ ಗುಣಾವೋಷಗಳ ಚರ್ಚೆ ಮಾಡಬೇಕಾದರೆ ಬೋರ್ಡಿನವರು ಅನುಸರಿಸಿದ ಧೋರಣೆ ತಿಳಿಕೊಳ್ಳುವದವಶ್ಯವಿದೆ, ಯಾವ ದೃಷ್ಟಿಯಿಂದ ಬೋರ್ಡಿನವರು ಹುರಿಯಾಳುಗಳನ್ನು ಆರಿಸಿದ್ದಾರೆಂಬುದನ್ನು ಸ್ಪಷ್ಟ ಮಾಡಬೇಕಾಗಿ ಅರಿಕೆ ಮಾಡಿಕೊಂಡರು. ಆಗ ೧೫ ತಿಮ್ಮಪ್ಪ ನಾಯಕರು ಎದ್ದು, " ಕೊಂಗ್ರೆಸಿನಲ್ಲಿ ಜನರಿರಬೇಕು ಮತ್ತು ಹಿಂದುಳಿದ ಜಾತಿಯವರಿಗೆ ಸಂಧಿ ಒದಗಿಸಿ ಕೊಡಬೇಕು ಈ ಎರಡು ಮುಖ್ಯ ತತ್ವಗಳನ್ನು ಮುಂದಿಟ್ಟು ಕೊಂಡುನಾವುಹುರಿಯಾಳುಗಳಆಯ್ಕೆಮಾಡಿರುತ್ತೇವೆ" ಎಂದು ಮಾತ್ರ ಕೊಟ್ಟರು ಆಬಳಿಕ ರಾ॥ ಶ್ರೀನಿವಾಸ ಸೈರು ಪುನಃ ಎದ್ದುನಿಂತು, ಕೊಂಗ್ರೆಸ ಹುರಿಯಾಳುಗಳೂ ಕೊಂಗ್ರೆಸ ಕಾರ್ಯಕಾರಿ ಸಂಸ್ಥೆಗಳಲ್ಲಿ ಅಧಿಕಾರಸ್ಥರಿರಬಾರದೆಂಬ ನಿಯಮವಿದೆ ೧೫ ಬಾಸಗೋಡ ರಾಮು ನಾಯ್ಕರು ಸ್ವಾಂತಿಕ ಕೊಂಗ್ರೆಸ ಕಮಿಟಿಯ ಕಾರ್ಯಕಾರಿ ಮಂಡಳದ ಸದಸ್ಯರಿದ್ದಾರೆ. ಅವರಿಗೆ ನೀವು ಹೇಗೆ ಟೀಕಿಟು ಕೊಟ್ಟಿರಿ? ಎಂದು ಪ್ರಶ್ನೆ ಮಾಡಿದರು ಈ ಬಗ್ಗೆ ರಾ॥ ಶ್ರೀನಿವಾಸ ನಾಯಕರು ಮುಂಬೆ ಮಾಡಿದ್ದೇನಂದರೆ, ರಾಮು ನಾಯ್ಕರು ಸ್ವಾಂತಿಕ ಕಮಿಟಿಯ ಕಾರ್ಯಕಾರಿ ಮಂಡಳದ ಸದಸ್ಯತ್ವಕ್ಕೆ ರಾಜಿನಾಮೆ ಕೊಡುತ್ತೇವೆಂದು ನಆನ ಕೊಟ್ಟ ಮೇಲೆಮೇ ಅವರ ಆಯ್ಕೆ ಮಾಡಿದ್ದೆವು, ಮುಂಬೆ ರಾಮು ನಾಯ್ಕರಿಗೆ ನೆಆನ ಪಾಲಿಸಲು ತಿಳಿಸುವಷ್ಟರಲ್ಲಿ ಹುಬ್ಬಳ್ಳಿಯಿಂದ ರಾ॥ ದಿವಾಕರರ ರಂಗರಾಯರಿಂದ ಪತ್ರ ಬಂತು, ಸ್ಥಾಪಾ ಸಂಸ್ಥೆಗಳಿಗೆ ಕೊಂಗ್ರೆಸ ಪರವಾಗಿ ಚುನಾವಣೆಗೆ ನಂತವರಾಗಿ ಅರಿಸುವೋದವರಾಗಲಿ ಕೊಂಗ್ರೆಸ ಕಮಿಟಿಗಳಲ್ಲಿ ಅಧಿಕಾರಸ್ಥಾನ ಅಕ್ರಮಿಸಬಾರದಾಗಿ ತಮ್ಮ ಘಟನಾವಳಿಯಲ್ಲಿ ನಿಯಮವಿಲ್ಲ, ಅದ್ದರಿಂದ ರಾ॥ ಗುಂಡಿದ ಸದಸ್ಯತನಕ್ಕೆ ರಾಜಿನಾಮೆ ಕೊಡಲು ರಾಮಾನಾಯ್ಕರಿಗೆ ಒತ್ತಾಯ ಸಡಿಸಬಾರದೆಂದು ರಾ॥ ದಿವಾಕರರು ಬರೆದಿರುತ್ತಾರೆ ಆದ್ದರಿಂದ ಉಭಯಸಂಕಟವಾಗಿದೆ ! ಆ ನಂತರ ರಾ॥ ಶ್ರೀನಿವಾಸ ಸೈರು ನುಡಿದದ್ದೇನಂದರೆ, "ಕೊಂಗ್ರೆಸ ಹುರಿಯಾಳುಗಳು ಸತತ ಮಾಡಿಧಾರಗಳೂ ಕೊಂಗ್ರೆಸ ಸಭಾಸದರಿದ್ದರೂ ಇವರೇಕೆಂದು ನಿಯಮವಿಗಳಿವೆ ಸತತ ಕೊಂಗ್ರೆಸ ಸಭಾಸದರೆಂದರೆ, ಕೊಂಗ್ರೆಸ್ಸು ಮಂತ್ರಿಗದ ಸ್ವೀಕಾರ ಮಾಡಿದ ನುಂಬಳಿಂದಲೂ ಕೊಂಗ್ರೆಸ ಸಭಾಸದರಿದ್ದ ನಲಿಂ ಪಥಕಾಂದು ಅಂಕೋಲೆಯಲ್ಲಿ ಕೂಡಿದ ಜಿಲ್ಲಾ ಕಮಿಟಿಯು ಸಭೆಯಲ್ಲಿ ಸ್ಪಷ್ಟತೆ ಮಾಡಿಲಲಾಗಿತ್ತು ಈಗ ಬೋರ್ಡಿನವರು ಅರಿಸಿದ ಜನರಲ್ಲಿ ಹಾಗೆ ಕೊಂಗ್ರೆಸ ಮೆಂಬರಾಂದ್ದವರೆಷ್ಟು ಮಂದಿಯಿದ್ದಾರೆ ? ಸತತ ಬಾದಿಧಾರಗಳೆಷ್ಟು ಇದ್ದಾರೆ ?

THE CANARA INDUSTRIAL & BANKING SYNDICATE LTD.,

(Incorporated in British India Liability of share holders Limited)

Estd.: } [1925

Head Office: UDIPI. (S. INDIA)

SEASON DEPOSITS

ARE ACCEPTED AT 3½% P A

Further particulars on application to any of

OUR THIRTY-FIVE OFFICES.

ಅಪೇಕ್ಷೆ ಉಸಾಧ್ಯಕ್ಷೆ ರಾ| ತಿಮ್ಮಪ್ಪ ನಾಯಕರು ಈ ಮುಂದಿನಂತೆ ಉತ್ತರ ಕೊಟ್ಟರು ಸತತ ಕೊಂಗ್ರೆಸ ಸಭಾಸದನೆಯೆಂದರೆ ಎಂದಿನಿಂದ ಕೊಂಗ್ರೆಸ ಸದಸ್ಯರಿದ್ದತರೆಂದು ಆರ್ಥನಲ್ಲ' ನಾವು ಅರಿವಿದ ಹುರಿಯಾಳುಗಳ ಕಡೆಯಿಂದ "ಮುಂದೆ ಅವರು ಸತತ ಕೊಂಗ್ರೆಸ ಮೆಂಬರ ರಾಗಿ ಉಳಿಯುವರೆಂದೂ, ಇನ್ನು ಮುಂದೆ ಸತತ ಖಾದಿ ಯನ್ನೇ ತೊಡುವೆಂದೂ ಆಭಿವಚನ ತಕ್ಕೊಂಡಿದ್ದೇನೆ! ಆಗಿನಿಬ್ಬ ಸಭಾಸದರು " ಈಗಲೂ ಕೆಲವು ಹುರಿ ಜೂಳುಗಳು ಖಾದಿ ಧರಿಸುವದಿಲ್ಲವಲ್ಲ !" ಎಂದು ಆಕ್ಷೇಪಿಸಿದರು 'ಹಾಗಾದರೆ ಅವರಿಗೆ ನಾವು ಎಚ್ಚರಿಕೆ ಕೊಡುತ್ತೇವೆ " ಎಂದು ರಾ| ನಾಯಕರು ಸಮಾಧಾನ ಹೇಳಿದರು.

ಇಸ್ಪಿಲ್ಲ ಪ್ರಸ್ತಾವಿಕ ಚರ್ಚೆಯಾದ ಮೇಲೆ ರಾ| ಮಾರ್ಜನಕರ ಶಂಕರರಾಯರು ಎದ್ದುನಿಂತು ಕೆಲವು ಹುರಿ ಜೂಳುಗಳ ಗುಣ ದೋಸಗಳನ್ನು ಚಿತ್ರಿಸಿದರು ನಮ್ಮ ಜಿಲ್ಲೆಯವರು ದೇಗೆ ದೇಶಭಾಂಡಿಯವರ ಅಭಿಮಾನ ಹಿಡಿದು ಸಡೆದರೆ, ರಾ| ಬಾಸಗೋಡ ರಾಮಾನಾಯ್ಕರು ರಾಗಿ ಹರಿಜೀಕರು, ಕರವುದರೆರು ಕೂಡ ಅಂತರಂಗ ಮಾಡುತ್ತಾರೆ ಇಂತಹ ಗೃಹಭೇದಿಗಳಿಗೆ ಟಿಕೀಟು ಕೊಡಬಹುದೇ ಎಂದು ಪ್ರಶ್ನಿಸಿದರು ಆಗ ಅಧ್ಯಕ್ಷರು ಪ್ರಾಂತಿಕ ಕಾರ್ಯ ಕರ್ತರು ಮುಂದೆ ಟೀಕೆ ಮಾಡುವರಾಗಿ ಅಪ್ಪಣೆ ಕೊಟ್ಟರು ರಾ| ಶಂಕರರಾಯರು ತಮ್ಮ ಭಾಷಣ ಮುಂದರಿಸುತ್ತ ರಾಮ ನಾಯ್ಕರ ಮೇಲೆ ಬಿಳ್ಳ ತರಿಯಾಗಿದೆಯೆ, ವಂಚನೆಗೆ ಅಸ್ಪದ ಮಾಡಿಕೊಟ್ಟ ಭಯಂಕರ ಅರೋಪಗಳಿವೆ, ಇಂತಹ ಮನು ಷ್ಯನನ್ನು ನಿ ವು ಅರಿಸಬಹುದೇ ? ನಿಂದು ಕೇಳಿದರು ಆಗ ರಾಮ ನಾಯ್ಕರ ಅಸುಯಾಯಿಗಳೊಬ್ಬರು 'ರಾಮ ನಾಯ್ಕರ ಮೇಲಕಾನಾ ಮಹಾತ್ಮೆಲಾ ?' ಎಂದು ಪ್ರಶ್ನಿಸಿ ದರು! "ಹೌದು' ರಾಮ ನಾಯ್ಕರ ಮೇಲೆ ನಾನು ಹಣ ವಂಚನೆಯ ಅರೋಪ ಮಾಡುತ್ತೇನೆ' ಅದನ್ನು ಸಿದ್ಧ ಮಾಡಿ ಕೊಡಲಿಕ್ಕೂ ಸಿದ್ಧನಿದ್ದೇನೆ !ಪ್ರಸಂಗ ಬಂದರೆ ಜೈಲಿಗೆ ಹೋಗಲಿಕ್ಕೂ ನನ್ನ ಕಯಾರಿಯದೆ !" ಎಂದು ಹೇಳಿ ಶಂಕರರಾಯರು ಆತನ ಬಾಯಿ ಮುಚ್ಚಿದರು! ಹಾಗೆಯೇ ಮುಂದರಿಯತ್ತ ಅವರು ಹೇಳ್ದತ್ತೇನೆಂದರೆ "ರಾ| ಎಸ್ ಡಿ ಕರ್ಕಯನರ ಬಗ್ಗೂ ನನ್ನ ಅಕ್ಷೇಪಣೆದೆ ಹಿಂದೆ ಅವರು ಸ್ವರಾಜ್ಯ ಸಕ್ಷದಲ್ಲಿದ್ದಾಗ ಸಕ್ಷದವರು ಅ ಕಾನೂ ನು-ಮಂಡಲಗಳನ್ನು ಬಿಟ್ಟು ಬಂದರೂ ಇವರು ಬಿಡಲಿಲ್ಲ' ಶಾಲಾ ದೋಡಿನ ಬೆರಮನ್ನರಿದ್ದಾಗಲೂ ಅವರು ಸಂಪಾದಿಸಿದಷ್ಟು ದುಷ್ಕೀರ್ತಿ ಇನ್ಯಾರೂ ಸಂಪಾದಿಸಿಲ್ಲ ರಾ| ಕರ್ಕಯನರಿಗೆ ತಿಳಿಸ್ದಿ, ತತ್ವಗಳಲ್ಲ' ಜಲ್ಲಿಯೂಳಿನ ಮೋಟಾರ ಚಲಾವಣೆಯ ಉದ್ಯೋಗ ಕಕ್ಕಯಿದ್ದವರು ಮಟ್ಟಿಗೆ ಜಿಲ್ಲೆಯವರ ಕೈಯಲ್ಲಿಯೇ ಇರತಕ್ಕದ್ದೆಂದು ನಾವು ಈ ಹಿಂದೆ ಒಂದು ತೀರ್ಮಾನ ಮಾಡಿದ್ದೇ ವಲ್ಲವೇ ? ಆ ತೀರ್ಮಾನವನ್ನು ರಾ| ಕರ್ಕಯನರು ಎಷ್ಟು ಮನ್ನಿಸಿದರು ಬಲ್ಲಿರಾ ? ನೊನ್ನೆಯೇ ಇವರು ದಕ್ಷಿಣ ಕನ್ನಡ ಜಿಲ್ಲೆಯ ಒಂದು ಮೋಟಾರ ಸರ್ವಿಸ್ ಕಂಪನಿಗೆ ನಮ್ಮ ಜಿಲ್ಲೆಯಲ್ಲಿ ಚಲಾವಣೆ ಮಾಡಲು ಸೌಕರ್ಯಗಳನ್ನು ಒದ ಗಿಸಿ ಕೊಡಲೇ ಬೇಕೆಂದು ಜಲ್ಲಾ ಬೋರ್ಡಿನ ಸಾಹೇಬ ರೆದುರು ಸಾದಿಸಲಿಕ್ಕೆ ಹೋಗಿದ್ದರು! ಇಂಥವರಿಗೆ ನೀವು ಕೊಂಗ್ರೆಸ ಹುರಿಯಾಳುತನದ ಮರ್ಯಾದೆ ಕೊಡಬಹುದೇ? ಈ ಹಿಂದೆ ರಾ| ಕರ್ಕಯನರು ಎರಡಾವರ್ತಿ ದೋಡಿನ ಚುನಾವಣೆಗೆ ನಿಂತಿದ್ದರು ಎರಡೂ ಸಾರೆ ಸೋತು ಹೋದರು. ಇವರಿಗೆ ಲೋಕಮನ್ನಣೆ ಎಷ್ಟಿದೆ? ನೀವೇ ನೋಡಿರಿ! ಹಳದೀಪುರದ ರಾ| ಕೇಲಂಗರವರಿಗೆ ಹೊನ್ನಾವರದಲ್ಲಿ ನಿಲ್ಲಿಸಿದ ಸಾರೆ ಕಾರವಾರದಲ್ಲಿ ನಿಲ್ಲಿಸಿದರು ಏಕೆ ? (ಅನ್ನಕ್ಷರ- ಕೇಲಂಗರು ಇಷ್ಟವ್ದಾರೆ, ಆ ಕ್ಷೇತ್ರ ಅವರೇ ಎತ್ತಲಿ) ಘಟಕ ಳ ಬೇಕೆಯಲ್ಲಿ ನಾಮಧಾರಿ ಸಮಾಜದ ಬಹುಮತವಿದೆ ಅಲ್ಲಿ ನೀವು ನಾಮಧಾರಿ ಗೃಹಸ್ಥನೊಬ್ಬನನ್ನು ನಿಲ್ಲಿಸಿದೆ ಯಾರೋ ಒಬ್ಬ ಯಾಜಿ ಎಂಬವನಿಗೆ ನಿಲ್ಲಿಸಿದ್ದು ಉಚಿತವೇ ?" ಈ ಪ್ರಕಾರ ರಾ| ಮಿಣಾಸಕರರು ತಮ್ಮ ಅಕ್ಷೇಪಗಳನ್ನು ಮುಂದಿಟ್ಟರು ಇನ್ನೂ ಕೆಲವರು ತಮ್ಮ ಅಕ್ಷೇಪಗಳನ್ನು ವಿವರಿಸಿದಾದ ಮೇಲೆ ಅಧ್ಯಕ್ಷರು ಈ ವಿಷಯದ ಚರ್ಚೆಯು ಸನಜರೋಸ ಮಾಡಿದರು ಮತ್ತು ಕೆಲವು ಅಕ್ಷೇಪಗಳ ನಿರಸನ ಮಾಡಲು ಯತ್ನಿಸಿದರು ರಾ| ಕರ್ಕಯನರ ಮೇಲಿನ ಆರೋಪಗಳಲ್ಲಿ ಹುರುಳಿಲ್ಲ, ಅವರಿಗೆ ಲೋಕ ಬೆಂಬಲವಿಲ್ಲವೆಂತಲೂ ಹೇಳಬರದು, ಇದೆಲ್ಲ ರಾ| ಕರ್ಕ ಯನರ ಹಗೆ ಹಿಡಿದು ರಾ| ಗಣಪತಿ ಗಂಗೊಳ್ಳಿಯವರು ನಡಿಸಿದ ಅಸ-ಪ್ರಚಾರದ ಫಲ, ಎಂದು ರಾ| ಕರ್ಕಯನರ ಅಯ್ಕೆಯನ್ನು ಅಧ್ಯಕ್ಷರು ಸಮರ್ಥಿಸಿದರು ತೇಲಂಗರವರ ಒಗ್ಗೆ ಅವರ ಪಿಲಾಕೆ ಹೀಗೆ ಹಳದೀಪುರ ಮತದಾರ ಸಂಘದಲ್ಲಿ ೧೩೦೦ ಬಿಲ್ಲರೆ ಮತದಾರರಿದ್ದಾರೆ, ಅವರಲ್ಲಿ ೯೦೦ ಮತದಾರರು ಹವೀಕರು, ರಾ| ತೇಲಂಗರವರಿಗೆ ಅಲ್ಲಿ ಯಕಸ್ಸು ಸಿಗುವಂತಿದ್ದಿಲ್ಲ, ಹೊನ್ನಾವರ ಮತದಾರ ಸಂಘದಲ್ಲಿ ಕ್ಷತ್ರಿಯ (ಶೇಣಗಾರ) ಜನರ ಪಾತಾಧಿಕ್ಯವಿದೆ, ಅಲ್ಲಿ ಆ ಸಮಾಜದವರಿಗೆ ಸ್ಥಾನ ಕೊಟ್ಟವನಿಗೆ ಗಟ್ಟಿಯಾದಯ್ಕೆ, ಆದ್ದರಿಂದ ಇದೆಲ್ಲ ಪರಿಸ್ಥಿತಿ ರಾ| ತೇಲಂಗರವರಿಗೆ ತಿಳಿ ಹೇಳ, ಭಟ್ಟರ ಪೇಚಿಬಲ್ಲಿ ಅವಕಾಶ ಮಾಡಿಕೊಡಲು ಯೋಚಿಸಿದೆ,ಅಲ್ಲಿ ರಾ|ನಾಗಪ್ಪ ನಾಯಕರು ತಮ್ಮ ಸ್ಥಳವಿಟ್ಟು ಕೊಡಲಿಕ್ಕೂ ಸಿದ್ಧ, ಕಾರವಾರದಿಂದ ಯಾರೂ ಅರ್ಜ ಕಳಿ ದ್ದಿಲ್ಲ, ರಾ| ತೇಲಂಗರ ಒಪ್ಪಗೆಯಂತೆಯೇ ಅಲ್ಲಿ ಅವರಿಗೆ ಸ್ಥಳ ಮಾಡಿಕೊಡಲಾಯಿತು' (ತಾವು ತಮ್ಮ ಬುದ್ಧಿಯಂ ದ ಕಾರವಾರದಲ್ಲಿ ಹುರಿಯಾಳಾಗಿ ನಿಲ್ಲಲು ಒಪ್ಪಿದ್ದಿಲ್ಲವಾ ಗಿಯೂ, ಸಿದ್ಧತೆ ಮೋಡಿನ ಸದಸ್ಯರಾದ ರಾ| ರಘುಪತಿ ಶೇಣ್ವಿಯವರು ಕಾರವಾರ ಮತದಾರ ಸಂಘದಿಂದ ತಾವು ಸುಲಭವಾಗಿ ಆರಿಸಿ ಬರಬಹುದಾಗಿ ಮನವೊಲಿಸಿದ್ದರಿಂದ ತಾವು ಕಾರವಾರ ತಾಲೂಕಿನ ಪರವಾಗಿ ಹುರಿಯಾಳಾಗಲು ಒಪ್ಪಿಕೊಂಡಿದ್ದಾಗಿರುತ್ತೆಂತಲೂ, ಆದರೆ ಈಗ ಅಲ್ಲಿ ಏಕ ಬೆಂಬಲ ಸಿಗುವ ಸಂಭವವಿಲ್ಲೆಂತಲೂ ರಾ| ತೇಲಂಗರು ಸ್ಪಸ್ಟೀಕರಣ ಮಾಡಿದರು) ರಾ| ಬಾಸಗೋಡ ರಾಮ ನಾಯ್ಕರಿಗೆ ಅಂಕೋಲೆಯಲ್ಲಿ ಪ್ರಬಲ ಬೆಂಬಲವಿದ್ದರಿಂದ ಅವರಿಗೆ ಅರಿಕೆಯಯ್ಕತೆಂದು ಅಧ್ಯಕ್ಷರು ಸ್ಪಸ್ಟೀಕರಿಸಿದರು! (ರಾ| ರಾಮನಾಯ್ಕರ ನಡತೆಯಿಂದ್ಲೂ ಕೊಂತಿಂದಲಿಲ್ಲ ಯಾ ಸಮರ್ಥಿಸಲಿಲ್ಲ) ಇನ್ನೆರಡು ಅಕ್ಷೇಪಗಳನ್ನೂ ಅಧ್ಯಕ್ಷರು ನಿರಾಕರಿಸಿದರು (ಈ ಅಕ್ಷೇಪಗಳನ್ನು ಅಧ್ಯ ಕ್ಷರು ಪಾವೇ ಎತ್ತಿದರು) ಹಬ್ಬಳ ಸಮಾಜ ದವರಿಗೆ ಬಹಳ ಸ್ಥಳಗಳನ್ನು ಕೊಟ್ಟಿದ್ದಾರೆಂದು ಅಕ್ಷೇಪ ಬಂದಿರೆ, ಹಿಂದಿನ ಚುನಾವಣೆಗಳ ಫಲಿತಾಂಶ ನೋಡಿ ಕೊಂಡರೆ ಹವ್ಯಕರಿಗೆ ಕನಿಷ್ಟ ೯ ಅಸನಗಳು ಸಿಗುತ್ತ ಬಂದಿವೆ, ಅಷ್ಟು ಸ್ಥಳಗಳನ್ನೇ ಬೋರ್ಡಿನವರು ಆ ಸಮಾಜಕ್ಕೆ ಕೊಟ್ಟಿದ್ದು ತಪ್ಪೇ ? ಎಂದು ಅಧ್ಯಕ್ಷರು ಕೇಳಿದರು. ಕುಮಟಾ ತಾಲೂಕಿನವರಿಗೆ ಗೌಡಸಾರಸ್ವತರಿಗೂ

(ಇನೇ ಸಾವನ ಮೇಲೆ ಮುಂದುಸಿದೆ)

ಜಾಹೀರ ನೋಟೀಸು.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟು, ಲಿಮಿಟೆಡ್

ಈ ಕೆಳಗೆ ಹೆಸರು ಕೋರುವವರು ನಮ್ಮ ಆಯಾ ಆಫೀಸಿನಿಂದ ಚಿನ್ನಾ ಚರಣಗಳ ಆಡವಿನ ಮೇಲೆ ಪಡೆದ ಸಾಲಗಳ ಅಸಲು ಮತ್ತು ಅವುಗಳ ಮೇಲಣ ಬಡ್ಡಿ ಹಣ ಬೇಕಿಗೆ ವ್ಯಾದಿಗೆ ಸಮೂಲ ಬಾರದೆ ಇದ್ದ ಕಾರಣ ಅವರಿಗೆ ಕಳುಹಿಸಿದ ಟಿಪಾಲು ರಿಜಿಸ್ಟ್ರಿ ನೋಟೀಸುಗಳು 'ಸದ್ರಿಯವರ ಪತ್ತೆ ಇಲ್ಲಾ' ಎಂಬ ಸಬಬಿನಿಂದ ಹಿಂತಿರುಗಿ ಬಂದಿರುವದರಿಂದ ಈ ಮೂಲಕ ಪ್ರಕಟಿಸೋಣಾ ಗುವದೇನೆಂದರೆ :— ಸದ್ರಿ ಸಾಲಗಳ ಬಾಬ್ತು ಬಡ್ಡಿ ವಗೈರೆ ಸಮಸ್ತ ಅಸ್ಸು ಬಡ್ಡಿ ವಗೈರೆಗಳಿಗೆ, ನೋಟೀಸುಗಳ ಖರ್ಚು ಸಹಿತ ತಾ. 22-4-1939 ನೇ ಶನಿವಾರ ಅಪರಾನ್ಹ ಘಂಟೆ 1ರ ಒಳಗೆ ಆಯಾ ಆಫೀಸಿಗೆ ಜಾಡಾ ವಸೂಲು ಬಾರದೆ ಇದ್ದರೆ ಸದ್ರಿ ಸಾಲಗಳ ಭದ್ರತೆ ಬಗ್ಗೆ ಸದ್ರಿಯವರು ಬೇಂಕಿನಲ್ಲಿ ಒತ್ತೆಯಿಟ್ಟ ನಗಗಳನ್ನು ತಾ. 26—4—39ನೇ ಬಧವಾರ ಮಧ್ಯಾನ್ಹ 3 ಘಂಟೆಗೆ ಬೇಂಕಿನ ಆಯಾ ಆಫೀಸುಗಳಲ್ಲಿ ಬಹಿರಂಗ ವಾದ ಏಲಂ ಮೂಲಕ ಸಾರಾಟ ಮಾಡಲಾಗುವದೆಂದು.

ಕುಮಟಾ ಆಫೀಸು.

ಸಾಲದ ನಂಬ್ರ 50/38 ಸಾಂತಯ್ಯ ಗಣಪಯ್ಯ ಸಾಗರ, ಪೋಸ್ಟ ಕುಮಟಾ
ಸಾಲದ ಅಸ್ಸು ಬಾಕಿ ರೂ. 6/— ಬಡ್ಡಿ ಬಾಕಿ ಹಾಗೆ 14—2—[illegible]

ಹೊನ್ನಾವರ ಆಫೀಸು.

ಸಾಲದ ನಂಬ್ರ 96/37 ಜ್ಹೊನ್ ಫಿಲಿಪ್ ಮೋಜಾರ ಮಾಲಿಕ, ಅಂಕೋಲಾ ಪೋಸ್ಟ
ಸಾಲದ ಅಸ್ಸು ಬಾಕಿ ರೂ. 150/— ಬಡ್ಡಿ ಬಾಕಿ ಹಾಗೆ 2—10—1937

Kumta, 5—4 —1939

S G. KAMAT,
Agent, KUMTA

ಬನ್ನಿರಿ ! —‖ ೫೯ ಚಂದ್ರಮೌಳೀಶ್ವರ ಪ್ರಸನ್ನ ‖— ನೋಡಿರಿ !!

ಉಡುಪಿ ಬ್ರಾಹ್ಮಣರ

ದಿ ಮೊಡರ್ನ ಹಿಂದೂ ಹೊಟೆಲ್,

ಮಹಾಶಯರೇ, **ಕುಮಟಾ.** (ಉ. ಕನ್ನಡ.)

ಶ್ರೀ ಗೋಕರ್ಣ ಕ್ಷೇತ್ರಕ್ಕೆ ಬರುವ ಹಬ್ಬಕ ಬ್ರಾಹ್ಮಣರೇ ಮೊದಲಾಗಿ
ಎಲ್ಲಾ ಮತದ ಪರಲೂರಿನ ಪ್ರಯಾಸಿಕರಿಗೂ, ಹುಬ್ಬಳ್ಳಿ, ಧಾರವಾಡ, ಬೆಳಗಾಂವ
ಕಡೆಗೆ ಹೋಗುವ ಟ್ರೈವ್ಹಲರರಿಗೂ ಉಳಕೊಳ್ಳಲಿಕ್ಕೂ, ಇತರ ಊಟೋಪಚಾರಕ್ಕೂ
ಬಹಳ ಸೌಕರ್ಯವುಳ್ಳದ್ದಾಗಿ ಇತ್ತೀಚೆಗೆ ಹೊಸದಾಗಿ ತೆರೆದಿರುವ ನಮ್ಮ

"ದಿ ಮೊಡರ್ನ ಹಿಂದೂ ಹೊಟೆಲ್"ದಲ್ಲಿ ಬಂದು ಅನುಭವ ಪಡೆಯಿರಿ !

ಸೂಚನೆ:— ವ್ಯವಸ್ಥೆ ಬಗ್ಗೆ ಪರಲೂರಿನವರು ಪತ್ರ ಮೂಲಕ ತಿಳಿಸುವುದುತ್ತಮ

ಬಿ. ರಾಮಕೃಷ್ಣಯ್ಯ, ಮಾಲಕ.

ಕಾನಡಾವೃತ್ತ.

ಮಿತಿ ಪ್ರಮಾಥಿ ಸಂವತ್ಸರ ವೈತ್ರ ಕೃ| ೬ಸ್ಮಿ, ಸೋಮವಾರ.

ಸಂಸ್ಥಾನಿಕರು ಸದ್ಬುದ್ಧಿಪ್ರೇರಿತರಾಗಲಿ.

ಸಂಸ್ಥಾನಿಕರು ಸದ್ಬುದ್ಧಿ ಪ್ರೇರಿತರಾಗಬೇಕಾಗಿ ನಮ್ಮ ವಿನಂತಿ. ರಾಜಕೋಟೆ ಪ್ರಕರಣದಿಂದ ಸಂಸ್ಥಾನಿಕರು ಬುದ್ಧಿಗಲಿಯಬೇಕಾಗಿಯೂ ನಮ್ಮ ಅಗ್ರಹ. ಪ್ರಜೆಗಳಿಗೆ ದಬ್ಬಿ ಲೋಕಕಂಟಕ ರಾಜ್ಯಭಾರವನ್ನು ಈವಾಗ ನಡಿಸುವದು ಅಶಕ್ಯ ಮಾತು. ರಾಜಕೋಟ ದೊಳಗೆ ಸರದಾರ ವಲ್ಲಭಭಾಯಿ ಪಟೇಲರೊಡನೆ ಮಾಡಿಕೊಂಡ ಒಡಂಬಡಿಕೆಯಂತೆ ರಾಕೂರ ಸಾಹೇಬರು ರಾಜ್ಯಪುಧಾರಣಾ ಮಂಡಳವನ್ನು ತಾವಾಗಿ ನೇಮಿಸಿದ್ದರೆ ಪ್ರಕಸ್ತವಾಗುತ್ತಿತ್ತು. ಫೆಡರಲ್ ಕೋರ್ಟಿನ ಮುಖ್ಯ ನ್ಯಾಯಾಧಿಕಾರಿಯಾದ ಸರ್ ಮೋರಿಸ ಗ್ವಾಯರವರು ನಿರ್ಣಯ ಕೊಟ್ಟಿಂತೆ, ಈಗಲಾದರೂ ಸರದಾರ ವಲ್ಲಭಭಾಯಿ ಪಟೇಲರವರ ಸೂಚನೆಗಳನ್ನು ಮಾನ್ಯ ಮಾಡಿ ರಾಜಕೋಟಿವ ಸಮಸ್ಯೆಗಳನ್ನು ರಾಕೂರ ಸಾಹೇಬರು ಬಗೆಹರಿಸುವರೆಂಬ ನಾವು ಆಶಿಸುತ್ತೇವೆ. ರಾಕೂರ ಸಾಹೇಬರಿಗೆ ಅನೇಕ ಸಲಹೆಗಾರಿರಬಹುದು. ಶ್ರೀಮಂತರಿಗೆ, ಐಶ್ವರ್ಯ ಸಂತರಿಗೆ, ಸಂಪನ್ನರಿಗೆ, ಸಮೃದ್ಧರಿಗೆ, ಅಧಿಕಾರಿ ಪುರುಷರಿಗೆ ಯಾವಾಗಲೂ ಬೇಕೆಷ್ಟು ಸಲಹೆಗಾರರಿರುವದು ಲೋಕಾನುಭವ. ನಿಃಸ್ವಾರ್ಥಿಗಳಿಗಿಂತ ಸ್ವಾರ್ಥ ಪರಾಯಣ ಸಲಹೆಗಾರರೆ ಸುಳಿದಾಟವೇ ಹೆಚ್ಚು; ಸ್ವತಂತ್ರ ವಿಚಾರವಂತರಿಗಿಂತ ಭಟ್ಟಂಗಿಗಳ ಉಪಟಳವೇ ಮಿಗಿಲಾದುದು; ನಿಸ್ಪೃಹರಿಗಿಂತ ಸ್ವ-ಕಾರ್ಯಸಾಧಕರ ಉಪದ್ರವವೇ ಹೆಚ್ಚು. ಆದರೆ, ಸ್ವಹಿತ-ಸ್ವಪ್ರೇಮ ಸಾಧಿಸಬಯಸುವವರು ಸಲಹೆಗಾರರೊಳಗಿನ ಭೇದಾಭೇದಗಳನ್ನೂ ಸಲಹೆಯೊಳಗಿನ ಯುಕ್ತಾಯುಕ್ತತೆಯನ್ನೂ ವಿಚಾರದಿಂದ ಕಂಡುಹಿಡಿದು ಸೂಕ್ತ ಸಲಹೆಗಳನ್ನಷ್ಟೇ ಸ್ವೀಕರಿಸುವವೆ. ನೋನಿರ್ಧಾರ ಮಾಡಬತ್ತಾರೆ. ಸಲಹೆಗಾರರೊಳಗೆ ಪ್ರಕೃತಿಭೇದದಂತೆ, ಸ್ವಾತಂತರದಂತೆ ಧ್ಯೇಯಭೇದ ವಿರುವದು ಸಾಹಜಕ. ಆದರೆ, ಸಂಸ್ಥಾನಿಕರಂಥ ಪ್ರಜಾಪರಿಪಾಲಕರಿಗೆ ದ್ವೈಯಭೇದವಿರಲಾರದು. ಪ್ರಜಾಪರಿಪಾಲಕರಿಗೆ ರಾಜಧರ್ಮ ಶಾಸ್ತ್ರದಲ್ಲಿ ಒಂದೇ ಧ್ಯೇಯ ಹೇಳಲ್ಪಟ್ಟಿದೆ.— ಪ್ರಜೆಗಳನ್ನು ಒಡಹುಟ್ಟಿದ ಮಕ್ಕಳೋಪಾದಿಯಲ್ಲಿ ಸಾಕಿ ಸಲಹುವದು. ಇದೇ ರಾಜಸ್ಥಾನದಲ್ಲಿರುವ ಸಮಸ್ತ ಸಂಸ್ಥಾನಿಕರ ಪ್ರಧಾನ ಕರ್ತವ್ಯ; ಇಹಲೋಕದೊಳಗಿನ ಪರಮ ಸಾರ್ಥವಾದರೂ ಅದೇ. ಪ್ರಜಾಪರಿಪಾಲನೆಗಿಂತ ಮಿಗಿಲಾದ ಧರ್ಮ ಪ್ರಜಾಪರಿಪಾಲಕರಿಗೆ ಎಲ್ಲಿಲ್ಲವೆಯೂ ಹೇಳಲ್ಪಟ್ಟಿಲ್ಲ. ರಾಕೂರ ಸಾಹೇಬರು ಇದನ್ನು ಚೆನ್ನಾಗಿ ಅರ್ಥಮಡಿಲ್ಲಿಟ್ಟು ಒಡಂಬಡಿಕೆಯಂತೆ ಸಂತೋಷದಿಂದಲೂ ಔದಾರ್ಯದಿಂದಲೂ ಪಾತ್ಸಲ್ಯದಿಂದಲೂ ನಡಕೊಳ್ಳಲು ಶಕ್ತಾಹಪಡಬೇಕಾಗಿ ನಾವು ವಿನಂತಿ ಮಾಡಿಕೊಳ್ಳುತ್ತೇವೆ

ಪ್ರಜೆಗಳೊಳಗೆ ಹಿಂದೂ-ಮುಸಲ್ಮಾನರೆಂಬ ಮತ್ಸರವನ್ನುಂಟು ಮಾಡುವ ಕಾರಸ್ಥಾನ ನಡೆದಿದೆಯೆಂಬುದು ತಿಳಿದು ನಮಗೆ ವಿಷಾದವಾಗಿದೆ. ಸರದಾರ ವಲ್ಲಭಭಾಯಿ ಪಟೇಲರೊಡನೆ ಮಾಡಿಕೊಂಡ ಒಡಂಬಡಿಕೆಯನ್ನು ನಿರರ್ಥಕಗೊಳಿಸುವ ದೆಸೆಯುಂಟಾದಲ್ಲೂ ತಮ್ಮ ನಿಂದ ಕುಶಪ್ರಭುತ್ವವನ್ನೂ ದರಬಾರ ವೀರವಾಲಾರರವರಂಥ ಲೋಕಕಂಟಕ ಆಡಳತದಾರರ ಪ್ರತಿಷ್ಠೆಯನ್ನೂ ಸ್ಥಿರ ಪಡಿಸುವ ದೆಸೆಯಿಂದಲೂ ರಾಕೂರ ಸಾಹೇಬರು ಕುಹಕ ನಡಿಸಿರುವಂತಿಗ ಸದ್ದಿಗಾರರು ತಿಳಿಯುವ ತ್ತಾರೆ. ಇದು ನಿಜವಿದ್ದರೆ, ಇದರಿಂದ ರಾಕೂರ ಸಾಹೇಬರಿಗೆ ಕ್ಷೇಮವಿಲ್ಲವೆಂದು ನಾವು ಎಚ್ಚರಿಕೆ ಕೊಡಬಯಸುತ್ತೇವೆ. ಸರ್ ಮೋರಿಸ ಗ್ವಾಯರರ ನಿರ್ಣಯದ ಪೂರ್ವದಲ್ಲಿ ಒಡಂಬಡಿಕೆಯ ಆರ್ಥದ ಕುರಿತು ಮತಭೇದವುಂಟಾದದ್ದು ವ್ಯಾಮಾನಿಕತನ ದ್ದೆಂದು ಎಣಿಸಲು ಅವಕಾಶವಿತ್ತು. ಸರದಾರ ವಲ್ಲಭಭಾಯಿ ಪಟೇಲರೊಡನೆ ಮಾಡಿಕೊಂಡ ಒಡಂಬಡಿಕೆಯಿಂದ ಸರದಾರರು ಸೂಚಿಸಿದವರನ್ನೇ ಸಂಸ್ಥಾನ ರಾಜ್ಯಪುಧಾರಣಾಮಂಡಳದಸಭಾಸದರನ್ನಾಗಿ ನೇಮಿಸಿಕೊಳ್ಳಲು ರಾಕೂರ ಸಾಹೇಬರು ಬದ್ಧರೋ ಹೇಗೆ? ಒಡಂಬಡಿಕೆಯಿಂದ ರಾಕೂರ ಸಾಹೇಬರ ಸಾರ್ವಭೌಮ ಅಧಿಕಾರ ನಿಯಂತ್ರಣವಾಗದಿದ್ದರೆ, ಸರದಾರ ಪಟೇಲರು ಸೂಚಿಸಿದವರನ್ನು ಬಿಟ್ಟು ಇತರರಿಗೆ ನೇಮಿಸಿಕೊಳ್ಳಬಾರದೋ ಹೇಗೆ? ಇವೇ ಮೊದಲಾದ ಸಮಸ್ಯೆಗಳ ವಿಚಾರವಾಗುವದಿತ್ತು. ಸರ್ ಮೋರಿಸ್ ಗ್ವಾಯರರವರು ಇವೆಲ್ಲ ವಿಷಯಗಳನ್ನು ನಿರ್ಮಲಚಿತ್ತದಿಂದ ಸಮಾಲೋಚಿಸಿ, ಸರದಾರ ವಲ್ಲಭಭಾಯಿ ಪಟೇಲರವರೊಡನೆ ಮಾಡಿಕೊಂಡ ಒಡಂಬಡಿಕೆಯಿಂದ ರಾಕೂರ ಸಾಹೇಬರು ಬದ್ಧರೆಂದೂ, ಆ ಒಡಂಬಡಿಕೆಯಂತೆ ಸರದಾರರು ಸೂಚಿಸಿದ ಇಸಮುಗಳನ್ನು ನೇಮಿಸಿದ್ದಲ್ಲಿ ರಾಕೂರ ಸಾಹೇಬರ ಸಾರ್ವಭೌಮ ಅಧಿಕಾರಕ್ಕೆ ನ್ಯೂನತೆಬರುವದಿಲ್ಲವಾಗಿಯೂ, ರಾಕೂರ ಸಾಹೇಬರು ತನಗಿರುವ ಸಾರ್ವಭೌಮ ಅಧಿಕಾರವನ್ನು ಅಪ್ಪರವಟ್ಟಿಗೆ ಒಡಂಬಡಿಕೆಯಂದ ಸರದಾರ ಪಟೇಲರಿಗೆ ಒಪ್ಪಿಸಿದ್ದಾರೆಂತಲೂ ಸರ್ ಮೋರಿಸ್‌ರು ನಿರ್ಣಯಿಸಿ ರಾಕೂರ ಸಾಹೇಬರಿಗೆ ಒಡಂಬಡಿಕೆಯಂತೆ ನಡತಿಕೊಳ್ಳಲು ವಿಧಿಸಿದ್ದಾರೆ. ಕ್ರಯಸ್ಥನಾತೆಯಿಂದ, ನ್ಯಾಯನಿಷ್ಠುರತೆಯಿಂದ ಸರ್ ಮೋರಿಸ್‌ರವರು ಕೊಟ್ಟ ನಿರ್ಣಯವನ್ನು ರಾಕೂರ ಸಾಹೇಬರು ಸಂತೋಷದಿಂದ ಸ್ವೀಕರಿಸಬೇಕಾಗಿ ನಾವು ಸೂಚಿಸುತ್ತೇವೆ. ಸರ್ ಮೋರಿಸರವರ ನಿರ್ಣಯವನ್ನು ಮಾನ್ಯ ಮಾಡುತ್ತೇವಾಗಿ ಇತ್ತಟ್ಟಿನವರು ಸರ್ವಾಧಿಕಾರಿ ಲಿನ್‌ಲಿತ್‌ಗೋ ದೊರೆಗಳಿಗೆ ಕೊಟ್ಟ ವಚನವನ್ನು ರಾಕೂರ ಸಾಹೇಬರು ಪ್ರತ್ಯಕ್ಷವಾಗಿ ಇಲ್ಲವೆ ಅಪ್ರತ್ಯಕ್ಷವಾಗಿ ಉಲ್ಲಂಘಿಸಿದರೆ, ರಾಕೂರ ಸಾಹೇಬರು ಅಪಥ್ಯರೆಂದು ಲೋಕಾಪವಾದ ಹಬ್ಬದಿರದು. ರಾಕೂರ ಸಾಹೇಬರ ಉಚ್ಚ ದರ್ಜೆಗೆ, ಗೌರವಸ್ಥಾನಕ್ಕೆ ಇದೊಂದು ಕಲಂಕವೊದೇ ನಾವಿನೆಯಬೇಕಾಗುವದು. ರಾಕೂರ ಸಾಹೇಬರು ದೀರ್ಘಾಲೋಚನೆ ಮಾಡಿ ಸರದಾರ ವಲ್ಲಭಭಾಯಿ ಪಟೇಲರೊಡನೆ ಮಾಡಿಕೊಂಡ ಒಡಂಬಡಿಕೆಯನ್ನು ಶುದ್ಧಕೆ, ಆರ್ಥಕ್ಕೆ, ಪ್ರವೃತ್ತಿಕ್ಕೆ ತಾಲಿಸಿ ಪ್ರಜಾತಂತ್ರೋದಯವನ್ನು ಗಳಸುವರೆಂದು ನಾವು ಕೋರುತ್ತೇವೆ. ಯಾಕೆಂದರೆ, ಪ್ರಜಾಪರಿಪಾಲಕರಿಗೆ ಪ್ರಜಾತಂತ್ರೋದಯಕ್ಕೆ ಮಿಗಿಲಾದ ಐಶ್ವರ್ಯ ಲೋಕದೊಳಗೆ ಬೇರೊಂದಿಲ್ಲವಷ್ಟೇ!

ನೊನ್ನೆ ಗುರುವಾರದಿಂದ ರಾಷ್ಟ್ರೀಯ ವಾರಕ್ಕೆ ಪ್ರಾರಂಭವಾಯಿತು. ರಾಷ್ಟ್ರೀಯ ಸಭೆಯವರು ಆ ಕಾಲದಲ್ಲಿ ಆತ್ಮನಿರೀಕ್ಷಣೆ ಮಾಡಿಕೊಂಡು ಆತ್ಮ ಶುದ್ಧಿಯನ್ನು ಸಾಧಿಸಿ ರಾಷ್ಟ್ರಧರ್ಮ ಪ್ರಸಾರ ನೋಡುವ ಸಮಯವದು! ಅಹಸುಸಾಬಾದದೊಳಗೆ ಗೃಹಮಂತ್ರಿಗಳಾದ ನಾ|| ಮುನತಿಯವರು ಧ್ವಜಾರೋಹಣ ಮಾಡುವಾಗ, ರಾಜಕೋಟ ಪ್ರಕರಣದೊಳಗಿನ ದಿಗ್ವಿಜಯದಿಂದ ಸಂಸ್ಥಾನ ಪ್ರಜೆಗಳ ಭವಿಷ್ಯ ನಿರ್ಣಯವಾಗಿರುವದೆಂದು ಉದ್ಗರಿಸಿದರು! ಸಂಸ್ಥಾನಿಕರು ರಾಜಧರ್ಮದಂತೆ ಪ್ರಜಾಪರಿಪಾಲನೆ ಮಾಡಿದ್ದರೆ, ಲೋಕಶಾಹಿ ಮನ್ವಂತರಕ್ಕು ಚಿತವಾಗಿ ಲೋಕ ಸಮ್ಮತವಾದ ರಾಜ್ಯಪುಧಾರಣೆಗಳನ್ನು ಕೈಕೊಳ್ಳಬಿದ್ದರೆ, ರಾಷ್ಟ್ರೀಯ ಸಭೆಯು ಸಂಸ್ಥಾನ-ಪ್ರಜೆಗಳಿಗೆ ನೆರವಾಗಿ ಸಂಸ್ಥಾನಿಕರೊಡನೆ ಜೋಕಾಡುವ ಪ್ರಸಂಗವುದುವೆಂದು ರಾಜಕೋಟ-ಪ್ರಕರಣವು ಸಂಸ್ಥಾನಿಕರಿಗೆಲ್ಲ ಎಚ್ಚರಿಕೆ ಕೊಡುತ್ತಿದೆ. ಅಳವಾಗಿ ಪರಾಂಬರಿಸಿದರೆ, ಸಂಸ್ಥಾನಿಕರಾದರೂ ಅಧಿಕಾರ ತೋರಿಸುವದನ್ನು, ಹೆಮ್ಮೆಪಡುವದನ್ನು ಸ್ವತಂತ್ರ ಪುರುಷರಲ್ಲ. ನೊನ್ನೆ ಗುರುವಾರ ವಾರ್ಲಿಮೆಂಟಿನಲ್ಲಿ ಸಂಸ್ಥಾನಿಕರ ಪರಿಸ್ಥಿತಿಯ ಕುರಿತು ಹಿಂದುಸಭವಿರೋಧಕ ಸಭಾಸದರೊಬ್ಬರು ಕೇಳಿದ ಪ್ರಶ್ನೆಗೆ, ಬ್ರಿಟಿಶ ಸರಕಾರವು ಶಕಲ ಸಂಸ್ಥಾನಿಕರ ಸಾರ್ವಭೌಮ ಸರಕಾರವೆಂದೂ, ಸಂಸ್ಥಾನಿಕರು ತಮ್ಮ ಸಂಸ್ಥಾನಗಳಲ್ಲಿ ಸಹ ಸರ್ವಾಧಿಕಾರಿಗಳಲ್ಲವೆಂದೂ, ಸ್ಪೇಚ್ಛೆಯಿಂದ ಪ್ರಜೆಗಳಿಗೆ ರಾಜ್ಯಾಧಿಕಾರ ಆರ್ಪಿಸಲು ಅವರಿಗೆ ಸ್ವಾತಂತ್ರ್ಯ ವಿಲ್ಲವಾಗಿಯೂ, ಸಂಸ್ಥಾನಿಕರು ತಮ್ಮ ಅಧಿಕಾರಕ್ಕೆ ಮಿಗಿಲಾ ರಾಜ್ಯಾಧಿಕಾರವನ್ನು ಪ್ರಜೆಗಳಿಗೆ ಆರ್ಪಿಸಿದ್ದಲ್ಲಿ ಅಂಥ ಯೋಜನೆಯನ್ನು ಬ್ರಿಟಿಶ ಸರಕಾರವು ಮನ್ನಿಸಲಿಕ್ಕಿಲ್ಲವಾಗಿಯೂ, ಸಂಸ್ಥಾನಿಕರು ಈ ವಿಷಯದಲ್ಲಿ ಬ್ರಿಟಿಶ ಸರಕಾರಕ್ಕೆ ಅಂತಿಕರೆಂದೂ ಸಹಾಯಕ ಭಾ. ಮಂ. ಕರ್ಜನ್ ಮೂರಹೆಡ್‌ರು ನಿರ್ಧಾರದಿಂದ ತಿಳಿಸಿದ್ದಾರೆ. ಸಾಮಾನ್ಯ ಭಾಸಿಯಲ್ಲಿ ಬೆಳೆದ ಬೆಳವಣಿಗೆ, ಸಂಸ್ಥಾನ-ಪೀಪಿಯಲ್ಲಿ ಸಂಸ್ಥಾನಿಕರು ಲೋಕ ಪ್ರಭುಗಳೆಂದು ಜಂಬ ಬಡಿಯುತ್ತಿದ್ದಾಗ್ಯೂ, ನಿಜವಾಗಿಯೂ ಇವರು ಬ್ರಿಟಿಶ ಸರಕಾರದ ಸೂತ್ರಗೊಂಬೆಗಳು !! ರಾಜಕೋಟ ಪ್ರಕರಣದಲ್ಲಿಯೇ ಈ ಅವಸ್ಥೆ ಪ್ರಕಟಿವಾಗದೆ! ಸರದಾರ ವಲ್ಲಭಭಾಯಿ ಪಟೇಲರಂಥ ಮಹಾತ್ಮರಿಗೂ ಧಿಕ್ಕರಿಸಿದ ರಾಕೂರ ಸಾಹೇಬರು ಸರ್ವಾಧಿಪತಿ ಲಿನ್‌ಲಿಥ್‌ಗೋ ದೊರೆಗಳಿಗೆ ಕೊಟ್ಟ ವಚನವನ್ನು ಉಲ್ಲಂಘಿಸಿದರೆ, ರಾಕೂರ ಸಾಹೇಬರು ಸ್ವಪ್ರತಿಷ್ಠೆಯಿಂದ ಸರದಾರರ ಸೂಚನೆಯಂತೆ ರಾಜ್ಯಪುಧಾರಣಾ ಮಂಡಳವನ್ನು ನೇಮಿಸಿದ್ದಲ್ಲಿ ಸರದಾರರ ಸೂಚನೆಯಂತೆ ಸಂಸ್ಥಾನ ರಾಜ್ಯಪುಧಾರಣಾಮಂಡಳದಸಭಾಸದರನ್ನಾಗಿ ನೇಮಿಸಿಕೊಳ್ಳಲು ರಾಕೂರ ಸಾಹೇಬರು ಬದ್ಧರೋ ಹೇಗೆ? ಒಡಂಬಡಿಕೆಯಿಂದ ರಾಕೂರ ಸಾಹೇಬರ ಸಾರ್ವಭೌಮ ಅಧಿಕಾರ ನಿಯಂತ್ರಣವಾಗದಿದ್ದರೆ, ಸರದಾರ ಪಟೇಲರು ಸೂಚಿಸಿದವರನ್ನು ಬಿಟ್ಟು ಇತರರಿಗೆ ನೇಮಿಸಿಕೊಳ್ಳಬಾರದೋ ಹೇಗೆ? ಇವೇ ಮೊದಲಾದ ಸಮಸ್ಯೆಗಳ ವಿಚಾರವಾಗುವದಿತ್ತು. ಸರ್ ಮೋರಿಸ್ ಗ್ವಾಯರರವರು ಇವೆಲ್ಲ ವಿಷಯಗಳನ್ನು ನಿರ್ಮಲಚಿತ್ತದಿಂದ ಸಮಾಲೋಚಿಸಿ, ಸರದಾರ ವಲ್ಲಭಭಾಯಿ ಪಟೇಲರವರೊಡನೆ ಮಾಡಿಕೊಂಡ ಒಡಂಬಡಿಕೆಯಿಂದ ರಾಕೂರ ಸಾಹೇಬರು ಬದ್ಧರೆಂದೂ, ಆ ಒಡಂಬಡಿಕೆಯಂತೆ ಸರದಾರರು ಸೂಚಿಸಿದ ಇಸಮುಗಳನ್ನು ನೇಮಿಸಿದ್ದಲ್ಲಿ ರಾಕೂರ ಸಾಹೇಬರ ಸಾರ್ವಭೌಮ ಅಧಿಕಾರಕ್ಕೆ ನ್ಯೂನತೆಬರುವದಿಲ್ಲವಾಗಿಯೂ, ರಾಕೂರ ಸಾಹೇಬರು ತನಗಿರುವ ಸಾರ್ವಭೌಮ ಅಧಿಕಾರವನ್ನು ಅಪ್ಪರವಟ್ಟಿಗೆ ಒಡಂಬಡಿಕೆಯಂದ ಸರದಾರ ಪಟೇಲರಿಗೆ ಒಪ್ಪಿಸಿದ್ದಾರೆಂತಲೂ ಸರ್ ಮೋರಿಸ್‌ರು ನಿರ್ಣಯಿಸಿ ರಾಕೂರ ಸಾಹೇಬರಿಗೆ ಒಡಂಬಡಿಕೆಯಂತೆ ನಡತಿಕೊಳ್ಳಲು ವಿಧಿಸಿದ್ದಾರೆ. ಕ್ರಯಸ್ಥನಾತೆಯಿಂದ, ನ್ಯಾಯನಿಷ್ಠುರತೆಯಿಂದ ಸರ್ ಮೋರಿಸ್‌ರವರು ಕೊಟ್ಟ ನಿರ್ಣಯವನ್ನು ರಾಕೂರ ಸಾಹೇಬರು ಸಂತೋಷದಿಂದ ಸ್ವೀಕರಿಸಬೇಕಾಗಿ ನಾವು ಸೂಚಿಸುತ್ತೇವೆ. ಸರ್ ಮೋರಿಸರವರ ನಿರ್ಣಯವನ್ನು ಮಾನ್ಯ ಮಾಡುತ್ತೇವಾಗಿ ಇತ್ತಟ್ಟಿನವರು ಸರ್ವಾಧಿಪತಿ ಲಿನ್‌ಲಿಥ್‌ಗೋ ದೊರೆಗಳಿಗೆ ಕೊಟ್ಟ ವಚನವನ್ನು ರಾಕೂರ ಸಾಹೇಬರು ಪ್ರತ್ಯಕ್ಷವಾಗಿ ಇಲ್ಲವೆ ಅಪ್ರತ್ಯಕ್ಷವಾಗಿ ಉಲ್ಲಂಘಿಸಿದರೆ, ರಾಕೂರ ಸಾಹೇಬರು ಅಪಥ್ಯರೆಂದು ಲೋಕಾಪವಾದ ಹಬ್ಬದಿರದು. ರಾಕೂರ ಸಾಹೇಬರ ಉಚ್ಚ ದರ್ಜೆಗೆ, ಗೌರವಸ್ಥಾನಕ್ಕೆ ಇದೊಂದು ಕಲಂಕವೊದೇ ನಾವಿನೆಯಬೇಕಾಗುವದು. ರಾಕೂರ ಸಾಹೇಬರು ದೀರ್ಘಾಲೋಚನೆ ಮಾಡಿ ಸರದಾರ ವಲ್ಲಭಭಾಯಿ ಪಟೇಲರೊಡನೆ ಮಾಡಿಕೊಂಡ ಒಡಂಬಡಿಕೆಯನ್ನು ಶುದ್ಧಕೆ, ಆರ್ಥಕ್ಕೆ, ಪ್ರವೃತ್ತಿಕ್ಕೆ ತಾಲಿಸಿ ಪ್ರಜಾತಂತ್ರೋದಯವನ್ನು ಗಳಸುವರೆಂದು ನಾವು ಕೋರುತ್ತೇವೆ. ಯಾಕೆಂದರೆ, ಪ್ರಜಾಪರಿಪಾಲಕರಿಗೆ ಪ್ರಜಾತಂತ್ರೋದಯಕ್ಕೆ ಮಿಗಿಲಾದ ಐಶ್ವರ್ಯ ಲೋಕದೊಳಗೆ ಬೇರೊಂದಿಲ್ಲವಷ್ಟೇ!

ಸಾರೋಣವಾಗಿದೆ. ಸಂಸ್ಥಾನಿಕರು ಪ್ರಜೆಗಳೊಡನೆ ಹಗೆತನ ಬೆಳಸಿದರೆ ಸಂಸ್ಥಾನಿಕರು ಹೆಚ್ಚೆಚ್ಚಾಗಿ ಬ್ರಿಟಿಶ ಸರಕಾರದ ಸ್ವಾಧೀನವಾಗಿ ತಮ್ಮ ಸ್ವತ್ವವನ್ನೇ ಕಳಕೊಳ್ಳುವ ಭೀತಿಯುಂಟು ಸಂಸ್ಥಾನಿಕರು ನಡಿಸುವ ಲೋಕಕಂಟಕ ನಿರಂಕುಶ ಕಾರಭಾರ ಬಿಂದೊದಗುವ ಅಪವಾದ-ಅಪಕೀರ್ತಿಗಳಿಗೆ ಸಂಸ್ಥಾನಿಕರು ಹೊಣೆಯಾಗಿ, ನಿರಂಕುಶ ಕಾರಭಾರದಿಂದ ಸಿಗುವ ಪ್ರಯೋಜನ ಪಡೆಯಲಿಲ್ಲಿ ಬ್ರಿಟಿಶ ಸರಕಾರವಾಗುವಗು. ಸಂಸ್ಥಾನಿಕ ಸಂಸ್ಥೆಯೇ ಲೋಕ ನಿನಾಶಕವೆಂದು ಜನಾಭಿಪ್ರಾಯವಾಗಿ ಸಂಸ್ಥಾನಿಕ-ಲೋಕವು ಸಂಕಟಕ್ಕೊಳಗಾಗುವ ಸಂಭವವುಂಟು ಸಂಸ್ಥಾನಿಕರು ಬಲಹೀನರಾದರೆ, ಪ್ರಜೆಗಳ ಮೇಲೆ ಸಾರ್ವಭೌಮ ಬ್ರಿಟಿಶ ಸರಕಾರದ ಅಪೇಕ್ಷೆಯಂತೆ ಸಂಸ್ಥಾನಿಕರು ಆಂಶಿಯಾಡಳಿತರಾದರೆ, ಸಂಸ್ಥಾನಿಕರು ಅಸಮರ್ಥರೆಂದೂ, ರಾಜ್ಯಾಡಳಿತೆ ನಡಿಸಲು ಅನರ್ಹರೆಂದೂ ಅಪಾತ್ರರೆಂದೂ ಬ್ರಿಟಿಶ ಸರಕಾರವು ಹೆಳಿದು, ಸಂಸ್ಥಾನಿಕರನ್ನು ಪದಚ್ಯುತಿ ಮಾಡುವ ಪ್ರಸಂಗವೊದಗಬಹುದು. ಪ್ರಜೆಗಳ ಬೆಂಬಲಕ್ಕೆ ಕುಂದು ತರುವಂಥ ಯಾವದೇ ಕೃತ್ಯವನ್ನು ಎಸ್ಸಕ್ಕೂ ನಡಿಸುವದು ಸಂಸ್ಥಾನಿಕರಿಗೆ ಶರವಲ್ಲ. ರಾಜಕೋಟ ಪ್ರಕರಣದಿಂದ ಬುದ್ಧಿಗಲಿತು ಸಂಸ್ಥಾನಿಕರೆಲ್ಲರೂ ಒಕ್ಕಟ್ಟಾಗಿ ಈಗಿನ ಮನ್ವಂತರದಲ್ಲಿ ಪ್ರಜಾಸಂತೋಷವನ್ನು ಗಳಿಸುವ ಉಪಾಯಗಳನ್ನು ಯೋಜಿಸಬೇಕಾಗಿ ನಾವು ಹೃತ್ಪೂರ್ವಕ ವಿನಂತಿ ಮಾಡಿಕೊಳ್ಳತ್ತೇವೆ. ಮಹಾತ್ಮರಂಥ ಲೋಕನಾಯಕರು ಸಂಸ್ಥಾನ-ಲೋಕದ ಹಿತಕಾಂಕ್ಷಿಗಳಾಗಿರುವಾಗ, ಮಹಾತ್ಮರ ವಚನಗಳನ್ನು ಸಂಸ್ಥಾನದೊಳಗಿನ ಲೋಕ ಪ್ರತಿಮುಖ್ಯರು ವಿಧೇಯತನದಿಂದ ಪಾಲಿಸುತ್ತಿರುವಾಗ, ಇತ್ತೀಚೆಗಿನಲ್ಲಿಯೂ ಮಧ್ಯಸ್ಥಿಕೆ ಮಾಡಿ ಇತ್ತೀಚೆಗೆ ಹಿತಕಾರಾದಲು ಮಹಾತ್ಮರು ಹನನಿಸುತ್ತಿರುವಾಗ, ಸಂಸ್ಥಾನಿಕರು ಪದ್ಧಿಪ್ರೇರಕರಾಗಿ ಕಾಲಪ್ರವಾಹ ಕೃತನುಸಾರವಾಗಿ ರಾಜ್ಯಾಡಳಿತೆಯನ್ನು ಸರಿಪಡಿಸಿಕೊಂಡು, ಸ್ವ-ಹಿತ, ಸ್ವ-ಜನಹಿತ, ಸ್ವ-ದೇಶ ಹಿತಗಳನ್ನು ಸಾಧಿಸಿ ಲೋಕಕ್ಕೆ ಆದರ್ಶಭೂತರಾಜರಾಗಿ ಹಿಂದದೇಶದ ಕೀರ್ತಿಯನ್ನು ತ್ರಿಭುವನದಲ್ಲಿ ಬೆಳಗಿಸಬೇಕಾಗಿ ನಾವು ಅತ್ಯಾಗ್ರಹಪೂರ್ವಕ ಬಿನ್ನೈಸುತ್ತೇವೆ.

ಈಗ ಮುಸೊಲಿನಿಯ ಬಾರಿ!

[ನಿರೀಕ್ಷಕಸು ಬರೆದುದು.]

ಹಿಟ್ಲರನ ಭಾವನವನ್ನೇ ನಿರೀಕ್ಷಿಸಬೇಕೆಂದು ನಾನು ಹೇಳಿದ್ದೇನೋ ಹೌದುಯದು! ಈಗಲೂ ಆ ಭಾವನವನ್ನೇ ನಾನು ಧ್ಯಾನಿಸುತ್ತಿದ್ದೇನೆ: "ನನಗೆ ಶಾಂತಿ ಬೇಕು; ಲೋಕಶಾಂತಿಗಾಗಿ ನಾನು ಯಾವ ತ್ಯಾಗ ಪ್ರಯತ್ನ ಮಾಡುವೆ. ಬೇಕಾದ ಪ್ರಬಲ ಜನಾಂಗದೊಡನೆ ಕಾದಾಡಲು ನಾನು ಸಿದ್ಧನಿದ್ದೇನೆ." ಹೀಗೆ ಅತನು ಸಾರಿ ಸಂಧಿ-ಸಮರಗಳ ಮನೋನಿರ್ಣಾರವನ್ನು ಲೋಕಕ್ಕೆ ಸಾರಿದ್ದಾನೆ.ಪೋಲಂಡದ ವಿಷಯ ಇನ್ನೂ ಚರ್ಚೆ ನಡೆಯುತ್ತಿದೆ ಪೋಲಂಡದ ವಿದೇಶ ಸಚಿವರಾದ ಕರ್ನಲ್ ಬೆಕ್‌ರವರು ಬ್ರಿಟಿಶ ಪ್ರಧಾನ ಮಂತ್ರಿಯೊಡನೆ ಅಪ್ತಾಲೋಚನೆ ಮಾಡುತ್ತಿದ್ದಾರೆ. ಹಿಟ್ಲರನು ಪೋಲಂಡದ ಮೇಲೆ ಸಾಗಿಹೋದರೆ ಬ್ರಿಟಿಶ-ಫ್ರೆಂಚರು ಪೋಲಂಡಕ್ಕೆ ನೆರವಾಗುವ ಬಗೆ ಹೇಗೆ? ಪೋಲಂಡ ದೇಶವಿಪುವದು ಜರ್ಮನಿಯ ಪೂರ್ವ ಪಾರ್ಶ್ವದಲ್ಲಿ! ಬ್ರಿಟಿಶ-ಫ್ರೆಂಚರಿರುವರು ಪಶ್ಚಿಮ ಪಾರ್ಶ್ವದಲ್ಲಿ!! ಪಶ್ಚಿಮ ಪಾರ್ಶ್ವದಿಂದ ಪೂರ್ವ ಪಾರ್ಶ್ವದಗಂಬ ನೆರವಾಗಿ ಹೋಗುವದು ಕಠಿಣ ಮಾತು. ಆದರಿಂದ ರುಶ್ಯರೊಡನೆ ಸ್ನೇಹ ಬೆಳಸಿ ಪೋಲಂಡದ ಮೇಲೆ ಹಿಟ್ಲರನು ಸಾಗಿಹೋದರೆ ರುಶ್ಯರುಪೋಲಂಡಕ್ಕೆ ನೆರವಾಗುವಂತೆ ವರ್ತಿಸಲು ಮಾಡೋಣವಾಗುತ್ತದೆ. ಅದೇ ಸಮಯ ಬ್ರಿಟಿಶ-ಫ್ರೆಂಚರು ಜರ್ಮನಿಯ ಪಶ್ಚಿಮ ಪಾರ್ಶ್ವದ ಮೇಲೆ ಸಾಗಿಹೋಗಬೇಕಾಗಿಯೂ ಆಲೋಚನೆ ನಡೆದಿದೆ. ಬ್ರಿಟಿಶ ಮುಖ್ಯ ಪ್ರಧಾನರಾದ ಚೆಂಬರಲೇನ ರವರು ಸರಕಾರದ ಪರವಾಗಿ ಬಿ|| ಹಡಸನ್‌ರವರಿಗೆ ರತಿಯಾಗಿ, ಪೋಲಂಡ, ಫಿನ್‌ಲಂಡ್, ಸ್ವೀಡನ್ ದೇಶಗಳನ್ನು ಸಂಚರಿಸಿ ಕಳಾಹಿಸ್ಪಾರೆ. ವ್ಯಾಪಾರ-ಸಂಬಂಧಗಳಿಗಾಗಿ ಅವರಿಗೆ ಕಳಸೋಣಾಗಿದೆಯೆಂದು ಗುರುವಾರ ಪಾರ್ಲಿಮೆಂಟಿನಲ್ಲಿ ಹೇಳೋಣಾಯಿತು. ಆದರೆ ಈ ಮಾತಿನಲ್ಲಿ ನನಗೆ ನಂಬಿಗೆ ಹುಟ್ಟುವು. ರಾಜಕಾರಣಕ್ಕಾಗಿಯೇ ಹಡಸನ್‌ರವರು ಬ್ರಿಟಿಶ ಪರವಾಗಿ ದೇಶಾಟನವನ್ನು ಕೈಕೊಂಡಿದ್ದಾರೆಂದು ನಾನು ತಿಳಿಯುತ್ತೇನೆ. ಆದರೆ, ಪೋಲಂಡದ ರಾಜಕಾರಣಕ್ಕೆ ಕಳೆದ ವಾರದಲ್ಲಿ ನೀರೀಕ್ಷಿಸಿದಂತೆ ಕಳೆ ಏರಲಿಲ್ಲ. ಹಿಟ್ಲರನು ಒಮ್ಮೆಲೇ ಬೌದ್ಧ ಮೂರ್ತಿಯಾಗಿದ್ದಾನೆ. ಅವಾಗ್ಯೂ ಆತನ ಕಾರಸ್ಥಾನ ನಿಂತಿತೆಂದು ನಾನು ತಿಳಿಯವದಿಲ್ಲ. ಹಿಟ್ಲರನಿಗೂ ಮುಸೊಲಿನಿಗೂ ದೀರ್ಘ ಕಾಲದ ವರೆಗೆ ಆಲೋಚನೆ ನಡೆದು ಮುಸೊಲಿನಿಯು ಆಲ್ಬೇನಿಯಾ ಜನಾಂಗವನ್ನು ಪಾದಾಕ್ರಾಂತ ಮಾಡಿಕೊಳ್ಳಬೇಕೆಂದು ನಿಶ್ಚಯವಾದಂತ್ಕೆ,ಮುಸೊಲಿನಿಯು ಶಕ್ತಿ-ಶಸ್ತಿವಾರ ಆಲ್ಬೇನಿಯಾದ ಮೇಲೆ ಸಾಗಿಹೋಗಿ, ಆಲ್ಬೇನಿಯಾದ ರಾಜಧಾನಿಯಾನ್ನೂ, ಸೆಂಜರ್, ದುರಾಝೋ, ವಲೋನಾ, ಸಿಕ್ಕಿರಾಂಟಾ ಬಂದರಗಳನ್ನೂ ಒಮ್ಮೆಲೇ ವಶ ಮಾಡಿಕೊಂಡು ಬಿಟ್ಟಿದ್ದಾನೆ. ಸುಸ ಸಾವಿರ ಸೈನಿಕರು ಒಮ್ಮೆಲೇ ಸಾಗಿಕೋಗಿದ್ದರು. ಅರಸರಾದ ಝೋಗ್ ರವರು ಸ-ಪರಿವಾರ ಅರಮನೆಯನ್ನು ಬಿಟ್ಟು ಓಡಿ ಹೋದರು! ಆಲ್ಬೇನಿಯಾ ಜನಾಂಗ ಅಡ್ರಿಯಾಟಿಕ್ ಸಮುದ್ರದ ಪೂರ್ವ ಪಾರ್ಶ್ವದಲ್ಲಿದೆ. ಇತಾಲಿಯಾ ಅದೇ ಸಮುದ್ರದ ಪಶ್ಚಿಮವಾರ್ಶ್ವದಲ್ಲಿದೆ. ಇವೆರಡೂ ಜನಾಂಗಗಳಿಗೆ ಪಡುಮಧ್ಯದಲ್ಲಿ ಸಮುದ್ರ ಒಂದೇ. ಇಲ್ಲಿಯ ದುರಾಝೋ-ವಲೋನಾ ಬಂದರಗಳ ಮೇಲೆ ಮುಸೊಲಿನಿಯ ಕಣ್ಣು! ಆತನ್ನು ಕೈವಶ ಮಾಡಿಕೊಳ್ಳಲು ಅತನು ಸಾಧನೆ ನಡೆಯುತ್ತಿತ್ತಂತೆ! ಝೋಗ್ ಅರಸರಿಗೆ ತಮ್ಮ ಪ್ರಧಾನಮಂತ್ರಿಯಾದ ದುರುಪದೇಶ ಕೊಟ್ಟು ಮುಸೊಲಿನಿಯು ಒಳ-ರಾಜ್ಯಕಾರಭಾರದಲ್ಲಿ ಕೈಹಾಕುವ ಕುಹಕ ಪಡಿಸಿದ್ದಾನೆಂದು ಆಲ್ಬೇನಿಯಾ ದೊಳಗೆಲ್ಲ, ಗದ್ದಲವಾಗಿ ಪುಂಡಾಟಿಕೆ ನಡೆಯಿತು. ಆಲ್ಬೇನಿಯಾದೇಶವನ್ನು ಪ್ರವೇಶಿಸಲು ಮುಸೊಲಿನಿಗೆ ಒಂದು ನೆವ ಬೇಕಾಗಿತ್ತು. ಪುಂಡರು ನೆವಮಾಡಿಕೊಟ್ಟರು! ಮುಸೊಲಿನಿಯೇ ಪುಂಡರನ್ನು ಕಳುಹಿ ಪುಂಡಾಟಿಕೆಯನ್ನೆಬ್ಬಿಸಿದನೋ ಏನೋ ನಾನರಿಯೆ! ಅಂತು ಗೊಂದಲವೆದ್ದಿತು! ಗೊಂದಲದಿಂದ ಇತಾಲಿಯನ್ನರಿಗೆ ಪ್ರಾಣಾಪಾಯವಿರುವದಾಗಿ ಮುಸೊಲಿನಿಯು ಮನೋನಿರ್ಧಾರ ಮಾಡಿ ಚತುರಂಗಬಲ ಸಹಿತ ಆಲ್ಬೇನಿಯಾದ ಬಂದರಗಳನ್ನೂ ರಾಜಧಾನಿಯನ್ನೂ ಒಳಗುಗ್ಗಿ, ೨ ದಿನಗಳಲ್ಲಿ ಆಲ್ಬೇನಿಯಾದೊಳಗೆಲ್ಲ ಹಾವಳಿಗನ್ನೆ ಬೈಸಿಬಿಟ್ಟಿದ್ದಾನೆ!! ಝೋಗ್ ಅರಸರು ಮೆನೆಮಾರು ಕಳಕೊಂಡು ಪಡರಿವಾರ ದಿಕ್ಕೆಟ್ಟದಿರಂತೆ ಓಡಿಹೋಗುವ ಪ್ರಸಂಗವಿದ್ದಾಗ್ಗೆ, ಸಾವಾನ್ಯ ಪ್ರಜೆಗಳ ಗತಿಯೇನಾಯಿತೆಂದು ನನಗೆ ಕೇಳುವದು ಬೇಡ! ಝೋಗ್ ಅರಸರು ನೆರೆಯ ಯುಗೊಸ್ಲಾವಿಯಾ ಅರಸರಿಗೆ ನೆರವಾಗಲು ಪರಿಪರಿಯಿಂದ ಕೇಳಕೊಂಡರು. ಮುಸೊಲಿನಿಯೊಡನೆ ಒಡಂಬಡಿಕೆ ಯಾದ್ದರಿಂದ ನಿರುಪಾಯವಿದೆಂದು ಅವರು ತಿಳಿಸಿದರು! ಆಲ್ಬೇನಿಯಾ ದೇಶ ತೀರ ಚಿಕ್ಕದು! ಪ್ರಜೆಗಳು ಹಿಂದುಳಿದವರು! ಒಕ್ಕಲತನವೇ ಇವರ ಮುಖ್ಯ ಹೋರೆ! ಇಂಥ ಬಲಹೀನರು ಇತಾಲಿಯನ್ನರಿಗೆ ಇದಿರಾಗುವದೆಂತು? ಅದಾಗ್ಯೂ ಧೈರ್ಯದಿಂದ ಕೆಲ ಕಾಲ ಹೋರಾಡಿದರು; ಇನ್ನೂ ಹೋರಾಡುತ್ತಿದ್ದಾರೆ! ಆದರೆ, ಈ ಜನಾಂಗ ಈಗ ಬಾಳಿ ಉಳಿಯುವದೆಂದು ನಾನು ಹೇಳಲಾರೆ. ಝೊಜೊ ಸ್ಕೊವಾಕಿಯಾದಂತೆ ವಿನಾಶ ಹೊಂದುವದೆಂದೇ ನನ್ನ ಎಣಿಕೆ. ಈಗ ಬ್ರಿಟಿಶ ಪ್ರಧಾನ ಮಂತ್ರಿಯು ದಿಗಿಲುಬಿದ್ದಿದ್ದಾರೆ! ಶನಿವಾರ ಮಧ್ಯಾನ್ಹ ೧೧|| ಘಂಟೆಗೆ ಬ್ರಿಟಿಶ ಪ್ರಧಾನ ಮಂತ್ರಿಯ ಅಗತ್ಯದ ಸಭೆಯಾಗಿ ೧ ಘಂಟೆಯ ವರೆಗೆ ದೀರ್ಘ ಚರ್ಚೆ ನಡೆಯಿತು. ಮುಖ್ಯ ಪ್ರಧಾನರಾದ ಬಿ|| ಚೆಂಬರಲೇನರವರು ರಜೆ ಇಂದು ಕುಠ್ಯವಾರವೇ ಲಂಡನ್ನಿನಿಂದ ಸ್ಕಾಟ್‌ಲಂಡ್‌ಗೆ ತೆರಳಿದ್ದರು. ಆ್ಯರಿಲ್ಲಿ ಈ ಘಟನೆ ಒದಗಿ ಬಂದಿದೆ. ಸ್ಯಾಮುಯಲ್ ಕಮಿಶನ್ನಿನ ಅಧ್ಯಕ್ಷರಾದ ಸರ್ ಜ್ಹೊಹ್ನ್ ಸ್ಯಾಮುಯಲ್‌ರವರ ಅಧ್ಯಕ್ಷತೆಯಲ್ಲಿ ಬ್ರಿಟಿಶ ಪ್ರಧಾನಮಂತ್ರಿಯವರ ಆಲ್ಬೇನಿಯಾದ ಪರಿಸ್ಥಿತಿಯನ್ನು ಕೂಲಂಕಷವಾಗಿ ಪರ್ಯಾಲೋಚಿಸತಂತೆ. ಇನ್ನೂ ಸಂಪೂರ್ಣ ವಾರ್ತೆಗಳು ಪ್ರಧಾನ ಮಂತ್ರಿಯ ಕೈಸೇರಲಿಲ್ಲ. ಆದರಿಂದ ಯಾವದೇ ನಿರ್ಣಯವನ್ನು ಪ್ರಧಾನ ಮಂತ್ರಿಯು ಕೈಕೊಂಡಿಲ್ಲ. ಬಿ|| ಚೆಂಬರಲೇನರು ಲಂಡನ್ನಿಗೆ ರಜೆ ತೀರುವ ಪೂರ್ವದಲ್ಲಿಯೇ ಓಡಿ ಬರಬಹುದು! ಅಗತ್ಯವಾಗಿ ಪಾರ್ಲಿಮೆಂಟಿನ ಸಭೆಯನ್ನು ಕೂಡಿಸಿ ಈ ಕುರಿತು ಚರ್ಚಿಸಬೇಕಾಗಿ ಹಲವು ಸಭಾಸದರು ಪ್ರಧಾನ ಮಂತ್ರಿಯಕ್ಕೆ ವಿನಂತಿ ಮಾಡಿಕೊಂಡಿದ್ದಾರೆ. ಪೋಲಂಡದೊಳಗಿನ ಘಟನೆ ನಿರೀಕ್ಷಿಸುತ್ತಿರುವಾಗಲೇ ಮುಸೊಲಿನಿಯು ಆಲ್ಬೇನಿಯಾ ಜನಾಂಗವನ್ನು ನುಂಗಿದ ಸುದ್ದಿ ಹೇಳುವ ಪ್ರಸಂಗ ನನ್ನ ಮೇಲೆ ಬಂತು! ಹಿಟ್ಲರ-ಮುಸೊಲಿನಿಯವರ ಸಾಮ್ರಾಜ್ಯವಿಸ್ತಾರದ ಕಾರಸ್ಥಾನ ಯಾವ ರೂಪದಿಂದ, ಎಲ್ಲಿ ಪ್ರಕಟವಾಗುವದೆಂಬ ಹೆಳುವದು ಕಠಿಣವಾಗಿದೆ. ಯುರೋಪ ಖಂಡದೊಳಗೆ ಶಾಂತಿಸ್ಥಾಪನೆಯ ಸೋಗು ಹಾಕಿಕೊಂಡು ಚಿಕ್ಕ ಚಿಕ್ಕ ಜನಾಂಗಗಳನ್ನು ನುಂಗುವ ಕ್ರಮ ನಡೆದಿದೆಯೆಂದು ನಾನು ತಿಳಿಯುತ್ತೇನೆ. ಬ್ರಿಟಿಶ-ಫ್ರೆಂಚರು ಈ ಚಾಪಲ್ಯವನ್ನು ಹೇಗೆ ಶ್ರುತಿಪಟ್ಟುವರೆಂದು ನೀರೀಕ್ಷಿಸಲು ನಾನು ಕುತೂಹಲಪಡುತ್ತೇನೆ ಯಾಕಂದರೆ, ಈಗಿನ ಮನ್ವಂತರದಲ್ಲಿ ಯಾರೂ ಸುರಕ್ಷಿತರಲ್ಲ; ಸುರಕ್ಷಿತತೆಯ ಅಭಾವದಲ್ಲಿ ಶಾಂತಿಸ್ಥಾಪನೆಯೆಂಗು ವ ಬಗೆಯೆಂತು?

ಸ್ಥಾನಿಕ ವೃತ್ತಾಂತ.

ಕುಮಟಾ— ಕಳೆದ ಬಕ್ರೀದ ಪ್ರಯುಕ್ತ ಮೈಯೆಲ್ಲ ಬೆವರುತ್ತಿದೆ ಊರಲ್ಲಿ ಮಹಮ್ಮದೀಯರ ಹಂಗಾಮ ನಡೆದಿದೆ

ಕಳೆದ ತಾ ೧೫ನೇ ಇಪ್ಪಿಯ ಕನ್ನಡ ಶಾಲೆಯಲ್ಲಿ ತಾಲೂಕಿನ ಸ್ಯಾಮಿಕ ಶಿಕ್ಷಕರು ತಾಲೂಕ ಹೆಡ್ ಮಾಸ್ತರ ರಾದ ರಾ। ಗ ತಿ ಭಟ್ಟರಯನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಇಲಾಖಾ ಸಂಘವಲ್ಲವ ನಿರ್ಣಯವಂತೆ ಉಚ್ಚ ವಾಸ, ವ್ಯಾಧನೆ ಮುಂತಾದ ಕಾರ್ಯಕ್ರಮಗಳನ್ನು ಜರುಗಿಸಿದರು

ದಿವ್ಯ ಲಿಂ ೨೬ ತತ್ವಗಳನುಸಾರವಾಗಿ ನಡೆಯುವ ಜನರನ್ನು ಡಿವೈನ್ ವೇರ್ಡ್ ಮ್ಯುಸಿಯಂಲಿಟ್ ಮುಂತಾದ ಸ್ಥಾಪಕ ಸಂಸ್ಥೆಗಳಲ್ಲಿ ಪ್ರವೇಶಿಸಿ ಅಸಂಖ್ಯೆಗಳಲ್ಲಿರುವ ಕೊಳೆಯನ್ನೂ ಅನ್ಯಾಯಗಳನ್ನೂ ಹೊಡೆದೋಡಿಸುವ ಪುಣ್ಯ ಆ ಸಂಸ್ಥೆಗಳನ್ನು ಪರಿಶುದ್ಧಗೊಳಿಸುವ ಉದ್ದೇಶದಿಂದಲೂ, ಕೊಂಗ್ರೆಸ ಪಿಸ್ಟ್ ಟೀಚಿಂಗ ಅನ್ಯಾಯಗಳನ್ನು ತೆಗೆಯಿಸಿ ಆವುಗಳ ಪ್ರತಿಕಾರ ಮಾಡುವ ಉದ್ದೇಶದಿಂದಲೂ ಜೆಸ್ಯೂಯೆಗಳಿನ ತೆಲ ಪ್ರಮುಖರು ಒಂದು ೧೯ ಪುರ್ಟಿ ಸಂಖ್ಯೆ " ಎಂದು ಸಂಸ್ಥೆಯನ್ನು ಸ್ಥಾಪಿಸಿದ್ದಾರೆ ಅಲ್ಲಿಯ ರಾ। ಗೋಪಾಲ ಸುಬ್ರಾಯ ಪಂಡಿತ ಇವರು ಈ ಸಂಸ್ಥೆಯ ತಾತ್ಪರ್ಯಿಕ ಅಧ್ಯಕ್ಷರಾಗಿ ಅರಿಸಲ್ಪಟ್ಟಿದ್ದಾರೆ

ವೈಜಾಪುರದಲ್ಲಿ ನಡೆದ ಒಂದು ಸಂಗತಿಯನ್ನು ಇಲ್ಲಿ ಉಲ್ಲೇಖಿಸುವದು ಅಪ್ಪಿಯ ಕಾಲೆಯೊಳಗೆ ಒಬ್ಬ ಅರಬ ಹುಡುಗನಿಗೂ ಬದ್ರಿನಾಥ ಎಂಬ ಲಿಂಗಾಯತ ಹುಡುಗನಿಗೂ ಮಾತಿಗೆ ಮಾತಾಯಿತು ಆರಬ ಹುಡುಗನು ಒದ್ರಿನಾಥನಿಗೆ ಬೈದುಬಿಟ್ಟನು ತಿರಿಯಹೋದನು. ಹೆಡ್‌ಮಾಸ್ತರರ ಕಡೆ ಬದ್ರಿನಾಥನು ದೂರಿ ಕೊಳ್ಳಲು, ಹೆಡ್‌ಮಾಸ್ತರರು ಕಿವಿಗೊಡಲಿಲ್ಲ ಹೆಡ್‌ಮಾಸ್ತರರು ಮುಸಲ್ಮಾನರಿಂದು ನಮೂದಿಸುವದನ್ನ ವಶ್ಯಕ ಆ ಮೇಲೆ ಈ ಪ್ರಕರಣ ವಿಕೋಪಕ್ಕೆ ಮುಟ್ಟಿ ಹಿಂದು ಹುಡುಗರು ಶಾಲೆಯಲ್ಲಿ ತಮ್ಮ ಪುರಕ್ಷಿತತೆಯಿಲ್ಲವೆಂದು ಶಾಲೆಯನ್ನು ಬಟ್ಟಿರು. ಆಗ ಹೆಡ್‌ಮಾಸ್ತರರಿಗೆ ಬುದ್ಧಿ ಬಂತು ! ಇನ್ನಮುಂದೆ ಹುಡುಗರ ರಕ್ಷಣೆಯ ಬಗ್ಗೆ ತಕ್ಕ ಜಾಗ್ರತೆ ಕೊಳ್ಳುತ್ತೇವಾಗಿಯೂ ತಪ್ಪು ಕ್ಷಮಿಸಬೇಕಾಗಿಯೂ ಒಪಕೊಬ್ಬ ಬಳಿಕ, ಪ್ರಕರಣ ಉಪಶಮನವಾಯಿತು

ಮಹಾತ್ಮರ ಪುಣ್ಯಂದಿರರಾದ ಶ್ರೀ|| ದೇವಿದಾಸ ಗಾಂಧಿಯವರು ಈಗ ಹೈದರಾಬಾದದಲ್ಲಿದ್ದಾರೆ ನಿಜಾಮ ಸರಕಾರದ ಅತಿಥಿಗಳಾಗಿ ಅಲ್ಲಿ ಉಳಕೊಂಡಿದ್ದಾರೆ ಶ್ರೀ|| ದೇವಿದಾಸ ಗಾಂಧಿಯವರಿಗೆ ಹೈದರಾಬಾದ ಸಂಸ್ಥಾನ ಕೊಂಗ್ರೆಸ ಕಮಿಟಿಯ ಕಾರ್ಯದರ್ಶಿಗಳಾದ ರಾ|| ರಾಮಕೃಷ್ಣ ಧೂತ ಮತ್ತು ಸಹಾಯದರಾದ ರಾ|| ಕಾಶಿನಾಥ ವೈದ್ಯರವರು ಕಂಡು ಕ್ಷೇಮಕುಶಲ ವಿಚಾರಿಸಿದರು. ತಾವು ಖಾಸಗಿ ಕೆಲಸಕ್ಕಾಗಿ ಹೈದರಾಬಾದಿಗೆ ಬಂದಿದ್ದೇವೆಂದು ಶ್ರೀ|| ದೇವಿದಾಸ ಗಾಂಧಿಯವರು ಪತ್ರಿಕಾ ಪ್ರತಿನಿಧಿಗಳ ಬಳ ನುಡಿದರು ಆದರೆ ಬಹುತರವಾಗಿ ಹೈದರಾಬಾದ ದೊಳಗಿನ ಪರಿಸ್ಥಿತಿಯನ್ನು ಸ್ವತಃ ತಿಳಕೊಂಡು ಕೊಂಗ್ರೆಸ ಕಾರ್ಯಕಾರಿ ಮಂಡಳಕ್ಕೆ ವರದಿಯನ್ನೊಪ್ಪಿಸುವದಕ್ಕಾಗಿ ಶ್ರೀ|| ದೇವಿದಾಸ ಗಾಂಧಿಯವರು ಸಂಜೆರಿದ್ದಿರಬೇಕು !

ಕೊಂಕಣಿ ಸರಿಪತ್ತು.

[ಸ್ವಂತ ಸುದ್ದಿಗಾರರ ತಂತಿ.]

ಕಾನಾರ, ತಾ ೧೦-೭-೪೯

ಮೊನ್ನೆ ತಾ ಅನೇಗೆ ಇಲ್ಲಿ ಮೊದಲನೇ ಕೊಂಕಣಿ ಪರಿಷತ್ತಿನ ಅಧಿವೇಶನ ಸೇರತು ಸಭೆಗೆ ೬೦೦ಕ್ಕೆ ಮಿಕ್ಕ ಜನಸಮುದಾಯ ಸೇರತ್ತು ಇವರಲ್ಲಿ ೨೦೦ ಮಂದಿ ಸ್ತ್ರೀಯರೇ ಅಧ್ಯಕ್ಷರಾದ ಶ್ರೀ|| ವಿಶ್ವನಾಥ ಪಾಂಡುರಂಗ ಪ್ರಭು, ಬಿ ಏ, ಅಂತೆಯೇ ಇವರು ಸಂಪೂರ್ಣವಾಗಿ ಡಾ|| ವಿಲ್ಸನ್, ಧಂಜಾರಕರವರಿಂದ ಅಭಿಪ್ರಾಯವನ್ನು ವಿವರಿಸಿ, ಕೊಂಕಣಿ ಭಾಷೆಯು ಸ್ವಾಶ್ರಿತ ಭಾಷೆಯಂತಲೂ ಅಲ್ಲದೆ ಅದು ಪ್ರತಿಪಾದಿಸಿದರು ಮಲಬಾರಿಂತಲೂ ಕೊಂಕಣಿ ಭಾಷೆ ಪುರಾತನವಾದದ್ದೆಂದು ಸಿದ್ಧಾಂತ ಮಾಡಿದರು ಸರ್ವಾತ್ಮಿಕ ಶಿಕ್ಷಣಪ್ರಸಾರ ಕಾರ್ಯಕ್ರಮದಲ್ಲಿ ಕೊಂಕಣಿ ಭಾಷೆಯಲ್ಲರು ತಮ್ಮ ಭಾಷೆಯನ್ನು ಉದ್ಧರಿಸಿಕೊಳ್ಳಲಿಕ್ಕೆ ಅನ್ಯ ಭಾಷೆಯವರಂತೆ ಪ್ರಯತ್ನಿಸಬೇಕೆಂದು ಪ್ರೋತ್ಸಾಹಿಸಿದರು ಆ ಮೇಲೆ ನಿರ್ಣಯಗಳಾವವು ದೀರ್ಘವಾಗಲಿ ಬಹುಮಂದಿ ಕೊಂಕಣಿ ಭಾಷೆಯನ್ನು ಬರೆಯಬೇಕಾಗಿಯೂ, ಕೊಂಕಣಿ ಸಮಾಜದೊಳಗೆ ಶಿಕ್ಷಣ ಪ್ರಸಾರ ಮಾಡುವದಕ್ಕಾಗಿ ಕೊಂಕಣಿ ಭಾಷೆ ಬಲ್ಲ ಜನರನ್ನು ನೇಮಿಸಿ ಕೆಲಸಕ್ಕೆ ಭಾಷೆಯ ಶ್ರಮಿಕ ಪುಸ್ತಕಗಳನ್ನು ತಯಾರಿಸಬೇಕಾಗಿಯೂ, ಮುಂಬರುವ ಜನಗಣತಿಯಲ್ಲಿ ಕೊಂಕಣಿ ಜನಸಂಖ್ಯೆಯ ಅಂಕಿಗಳನ್ನು ಪ್ರತ್ಯೇಕವಾಗಿ ತಯಾರಿಸಬೇಕಾಗಿಯೂ, ಕೊಂಕಣಿ ಭಾಷೆಯ ಜನರು ಬಹು ಸಂಖ್ಯಾಕರಿದ್ದಲ್ಲಿ ಕೊಂಕಣಿ ಪ್ರಾಥಮಿಕ ಶಾಲೆಗಳನ್ನು ಸ್ಥಾಪಿಸಬೇಕಾಗಿಯೂ ಸರಕಾರಕ್ಕೆ ವಿನಂತಿ ಮಾಡಿಕೊಳ್ಳುವ ನಿರ್ಣಯಗಳಾದವು

ಈ ಪರಿಷತ್ತಿಗೆ ಕೊಂಕಣಿ ಭಾಷೆಯನ್ನಾಡುವ ಸಕಲ ಸಮಾಜದವರು ಚೆತ್ತ್ಯಾಸಿದ್ದರು ಪರಿಷತ್ತು ಸಡಗರದಿಂದ ನೆರವೇರಿತು.

ಕಾನಡಾ ವೃತ್ತ

ಕನ್ನಡ ನಾಡಿನ ಪ್ರಮುಖ

ರಾಷ್ಟ್ರೀಯ ವಾರಪತ್ರಿಕೆ.

ಜಾಹೀರಾತುದಾರರಿಗೆ ಅನುಕೂಲ ಸಾಧನ.

ರಾಷ್ಟ್ರಪ್ರೇಮಿ ಕನ್ನಡಿಗರು ಚಂದಾದಾರರಾಗಿ

ಪ್ರೋತ್ಸಾಹಿಸಬೇಕು.

ಮುಂಬಯಿಯಲ್ಲಿ

ಉತ್ಕೃಷ್ಟ ನಿವಾಸ ವ್ಯವಸ್ಥೆ.

ಪ್ರವಾಸಿಗಳಿಗೂ ವಿದ್ಯಾರ್ಥಿಗಳಿಗೂ

ಬಹಳ ಅನುಕೂಲ!

ವೆಲ್‌ಕಮ್

ಹಿಂದೂ ಹೊಟೆಲ್

ತಾರಾ ಹೌಸ, ಗಿರಗಾಂವ

ಮುಂಬಯಿ.

ಮಧ್ಯವರ್ತಿ ಸ್ಥಳ: ಉತ್ಕೃಷ್ಟ ಊಟ!

ಉತ್ತಮ ಹವೆಯ ಕೋಣೆಗಳು!

ಊಟ-ಉಳಕೊಳ್ಳುವ ಅನುಕೂಲತೆ!!

ವಿದ್ಯಾರ್ಥಿಗಳಿಗೆ

ಪ್ರತ್ಯೇಕ ರಿಯಾಯತಿ ದರಗಳಿವೆ.

"ಸ್ಪಾರ ಆಫ್ ಕೆನರಾ ಪ್ರೆಸ್",

ಕುಮಟಾ.

ನಮ್ಮಲ್ಲಿ ಕನ್ನಡ, ಮರಾಠಿ, ಇಂಗ್ಲಿಷ, ಗುಜರಾಥಿ ಭಾಷೆಯಿಂದ ಬೇಕಾದ ನಮೂನೆಯ ಕಲರ ಪ್ರಿಂಟಿಂಗ ವೆನೈರೆ ಸಣ್ಣ-ಮೊಡ್ಡ ಛಾಪಾ ಕೆಲಸಗಳು, ಪುಸ್ತಕ-ಮುದ್ರಣವೂ, ರೂಲಿಂಗ-ಬೈಂಡಿಂಗ ಕೆಲಸವೂ ಉತ್ತಮವಾಗಿ ಸುಲಭ ದರದಲ್ಲಿ ತಕ್ಕ ಕಾಲಕ್ಕೆ ತಯಾರಿಸಿ ಕೊಡಲಾಗುವದು! ನಿಮ್ಮ ಕೆಲಸಗಳನ್ನು ನಮ್ಮ ಬ್ಲಿಗೇ ಕಳಿಸಿರಿ. ಒಮ್ಮೆ ಅನುಭವತಕೆಯ್ದೊಂಡು ನೋಡಿರಿ!

ದಕ್ಷಿಣ ಭಾರತ ಹಿಂದೀ ಪ್ರಚಾರ ಸಭಾ,

ಮದ್ರಾಸ ಇವರ

ಹಿಂದೀ ಪುಸ್ತಕಗಳು.

ಪ್ರಿ ಸ್ಕೂಲ ಬೋರ್ಡಿನಿಂದ ಮೊದಲಾಗಿ ಮಂಜೂರಾದ

ಉರ್ದು ಪುಸ್ತಕಗಳು

ಎಲ್ಲ ತರಗ ಶಾಲೋಪಯೋಗಿ

ಕನ್ನಡ ಪುಸ್ತಕಗಳು

ರಕಂ ಆಗಿಯೂ ಚಿಲ್ಲರೆ ಆಗಿಯೂ ನಮ್ಮಲ್ಲಿ ಸಿಗುತ್ತವೆ

ಬುಕ್ ಸೆಲ್ಲರ್‌ರಿಗೂ ಶಿಕ್ಷಕರಿಗೂ

ಯೋಗ್ಯ ಕಮಿಶನ್ ಕೊಡಲಾಗುವದು

ದಿ ನ್ಯೂ ಸರಸ್ವತಿ ಪಬ್ಲಿಸ್ಟಿ, ಕುಮಟಾ.

ಶ್ರೀಧನ್ವಂತರೀಶ್ವರ ರಸಾಯನೌಷಧಿ ಕಾರಖಾನೆ

— TRADE MARK —

ಪನವೇಲ ಕುಲಾಬಾ

— ಈ ಸಂಸ್ಥೆಯ —

ಬ್ಯಾಂಕಿತನದಲ್ಲಿಯತ್ತ ಉಪಯುಕ್ತತೆಯಮೇಲೆ ಉಪಯುಕ್ತ

ವಿಷಧವು

ಉಬ್ಬಲೋಹ

BHRALOHA

ದೊರೆಯುವ ಸ್ಥಳ— ಕಾರವಾರ –ಮೆಸರ್ಸ ಮುಜುಮದಾರ-ಕೆಸವೇಕರಬ್ರದರ್ಸ. ಅಂಕೋಲಾ.ವಿ.ಸ್ಕೇಶನರಿ ಡಿಪೋ.ಗಿಕುಮಟಾ. ವೇಣಪ್ಪಾ ಆಯ್ಯಾನಾಯ್ಕ.ಕಿ ಹೊನ್ನಾವರ.- ಕಲ್ಯಾಣಪುರ ಬ್ರದರ್ಸ.

ದಿ ಬೋಂಬೆ ಲ್ಯಾಫ್ ಎಶ್ಯೂರನ್ಸ ಕಂಪೆನಿ, ಲಿಮಿಟೆಡ್.

ಸ್ಥಾಪನೆ: 1908.

ಈ ಕಂಪನಿಯು ಈ ಹಿಂದೀ ಇಷ್ಟು, ಇದರ ಕಂತಿನ ದರಗಳೂ, ಶರುತ್ತುಗಳೂ ಬಹಳ ರೋಯಿಷವೂ ಇವೆ. ಪಲಿಯ ಹಣವು ಸರಕಾರಿ ಪ್ರೊ. ನೋಡುಗಳಲ್ಲಿಯೂ, ಇಂಡಿಯನ್ ಪ್ರಸ ಎಕ್ಸೆನ ನಿಯಮಗಳಂತೆ ಪನಃ ಬ್ಯಾರಿಯು ಸೆಕ್ಯುರಿಟಿಗಳಲ್ಲಿಯೂ ಇಡಲ್ಪಟ್ಟಿದೆ.

ಮಲ್ಟಿಪಲ್ ಬೆನಿಫಿಟ್ ಎಂಬ ಕಲಮು ನಿಮೆದಾರರಿಗೆ ಅತಿಶಯ ಲಾಭಕರವಾಗಿದೆ.

ಸವಿಸ್ತರ ನಾಮಕಿ ಸ್ಥಳಿಕ ಏಜಂಟರ ಕಡಿಗೆ ಅಥವಾ ಪತ್ರದ್ವಾರದಿಂದ ತಿಳಿಗಿನ ವಿಳಾಸಕ್ಕೆ ಬರೆದಲ್ಲಿ ತಿಳುವದು.

Kumta Agents-

D. K. Nayak Bros

K. N Nayak.

Honavar Agent -

R. V. Prabhu

K. PadmanabhaRao & Sons.

BELGAUM

Chief Agents for

Karnatak Districts & S. M. States.

ಸುಲಭ ಕ್ರಯ! ಸುಲಭ ಕ್ರಯ!

ಡಾಕ್ಟರ ಜೀ. ಬೀ. ಯವರ ಸುಗಂಧಿ ನಕ್ಷತ್ರದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಕ್ಷತ್ರ ಪುಡಿಯು ಕಂಡು ಹಿಡಿಯಲ್ಪಟ್ಟಿ ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಕ್ಷತ್ರ ಪುಡಿಯಿಂದ ಸ್ವಸ್ಥನಾಗುವ ವ್ಯಾಧಿಗಳು ಯಾವವೆಂದರೆ— ಪಿಸಕಿ, ಒಂಟೆಕಲೆನೋವು ತಲೆಯಲ್ಲಿಯು ರೋಗಗಳು., ಕಣ್ಣುಗಳಲ್ಲಿ ಕಾಂಟಾಗಕ್ಕೆ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಬಟ್ಟ ವ್ಯಾಧಿಗಳನ್ನೂ ಸ್ವಸ್ಥ ಪಡಿಸಿ ಜಾ ಪಕ ಶಕ್ತಿಯನ್ನು ಹೆಚ್ಚು ಮಾಡುತ್ತದೆ. ಮತ್ತು ಬೆಟ್ಟಿನ ಸಾಧಾರಣ ನಕ್ಷತ್ರ ಸಂಗಡ ಈ ಸುಗಂಧ ನಕ್ಷತ್ರ ಪುಡಿಯನ್ನು ಬಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳಿಸುವಾಗುವದು. ಇದನ್ನು ಅನೇಕ ಪುಡಿಗಳು ತಮ್ಮ ಗೃಹದಲ್ಲಿ ಕಟ್ಟಿಟ್ಟಲ್ಲಿ ಇಷಧವಾಗಿ ಉಪಯೋಗಿಸುತ್ತಾರೆ. ಮತ್ತು ಇದರಿಂದ ಸೀನೆ ಪುಕ್ಕಟೆ ಕಳಿಸಲಾಗುವದು. ಬುದ್ಧಿ ಬಂದರೆ ಕ್ರಯ ರೂ. ೦-೪-೦, ಪ್ಲಿ ಪಿ. ಳಆಗಿ ಡಜನ್ ೧ ಕ್ಕೆ ರೂ. ೨-೮-೦. ವಿ. ಪಿ. ೦-೮-೦ ದಯವಾಡಿ ನಿಮ್ಮ ಹೆಸರನ್ನೂ, ಆದ್ರೆಸನ್ನೂ ಪರಿಯಾಗಿ ತಿಳಿಯುವಂತೆ ಬರೆಯಿರಿ.

(Registered Trade Mark.)

ಪತ್ರೆ:— ಗುರುಬಸವ ಅಂಡ್ ಕಂಪನಿ ಲಿಮಿಟೆಡ್, ಸ್ಟೋ. ಬಾ. ಗಂ, ಬೆರ್ಹಾಮ್‌ಪುರ, ಮದರಾಸ

ಇದನ್ನು ಪಾಂಡುರಂಗ ಕೃಷ್ಣ ಶ್ಯಾನಭಾಗ (ಸಂಪಾದಕ) ಇವರು ತಮ್ಮ "ಸ್ಪಾರ ಆಫ್ ಕೆನರಾ ಪ್ರೆಸ್"ದಲ್ಲಿ ಮುದ್ರಿಸಿ ಪ್ರಕಟಿಸಿದರು.

Reg. No. B. 1270. Monday, 17th July, 1939.

ವರ್ಷ ೨೨

ಪತ್ರದ ವರ್ಗಣೆ.

ಊರುಗಳಲ್ಲಿ ಅಗಾವು
ರೂಪಾಯಿ 2-4-0.
ಮುನಿಯಾರ್ಡರಿನಿಂದ
ರೂ. 3-1-0.
ಪ್ರಿ ಪಿ. ಆಂಜೆಪೆಸ್ಟ್ ಸೇರಿ
ರೂಪಾಯಿ 3-4-0.
ಪ್ರತಿ ಸಂಚಿಕೆಗೆ 0-1-0
ಹಳೇ ಸಂಚಿಕೆಗೆ 0-2-0

ಕಾನಡಾವೃತ್ತ.

THE KANARA NEWS.

ನರಪತಿಹಿತಕರ್ತಾ ದ್ವೇಷ್ಟತಾಂ ಯಾತಿ ಲೋಕೇ ಜನಪದಹಿತಕರ್ತಾ ಸ್ವಾಶ್ರಯೇಚ್ಛುಃ।
ಇತಿ ಸತಿ ವಿರೋಧೇ ವರ್ತಮಾನೇ ಸಮಾನೇ ನೃಪತಿಜನಪದಾನಾಂ ತುಲ್ಯಮಃ ಕಾರ್ಯಕರ್ತಾ ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಸಂಚಿಕೆ ೪

ಜಾಹೀರಾತುಗಳ ದರ.
ಇಂಗ್ಲಿಷ, ಇಂಗ್ಲಿಷ ಮಿಶ್ರಾ ಟೈಪಿನ (೧೫ ಎಮ್ಮ್ ಉದ್ದ) ೪ ಸಾಲುಗಳವರಿಗೆ ರೂ.1-0-0 ಆ ಮಂತ್ರ ಪ್ರತಿಸಾಲಿಗೆ 0-2-0. ಜಿಡ್ಡಿಂಗದ ಸಾಲು ಎಮ್ಮ್ ಹೊಚ್ಚಿರುವದೋ ಆ ಮಾನದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು.
ಇತರ ಜಾಹೀರಾತುಗಳ ಬಗೆ ಪತ್ರವ್ಯವಹಾರ ಮಾಡಿದಲ್ಲಿ ತಿಳಿಸಲ್ಪಡುವದು.

-ಈ(ಕುಮಟಾ— ಕಾನಡಾವೃತ್ತ, ಸೋಮವಾರ, ತಾರೀಖು ೧೭ ಮಾಹೆ ಜುಲ್ಯಾ ಸನ್ ೧೯೩೯ನೇ ಇಸವಿ.)ಈ-

TO BE FREE -- SLAVE.

Are you able to do what you want to, or are you hampered in your freedom of action? If so, knock the "L" out of slave, — SAVE. This bank will help you. Let us open a Savings Account for you to-day.

RESOURCES OF A CRORE.

Estd. 1906
CANARA BANK, LIMITED.

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ್, ಲಿಮಿಟೆಡ್,

(ರಿಜಿಸ್ಟರ್ಡ ಹಿಂದುಸ್ಥಾನದಲ್ಲಿ ಸಂಘಟಿಸಲಾದದ್ದು.)

ರಿಜಿಸ್ಟರ್ಡ ಆಫೀಸು:— "ಲಕ್ಷ್ಮೀ ನಿವಾಸ" ಬಿಲ್ಡಿಂಗ್ಸ— ಕುಂದಾಪುರ. ದ. ಕ.

ಫಿಕ್ಸೆಡ್, ಸೇವಿಂಗ್ಸ ಬೇಂಕ್, ಕರೆಂಟ್ ವಗೈರೆ ಡಿಪೋಜಿಟುಗಳು ಸ್ವೀಕರಿಸಲ್ಪಡುವವು.

ಕಾಯಂ ಠೇವಣಾತಿಗಳ ಬಡ್ಡಿ ದರಗಳು- 6 ತಿಂಗಳು ಮುದ್ದತ್ತಿಗೆ 3½%; 1 ವರ್ಷದ ಮುದ್ದತ್ತಿಗೆ 4%;
2 ವರ್ಷ ಯಾ ಹೆಚ್ಚಿನ ಅವಧಿಗೆ 4½%.

ಅಲ್ಪ ಮುದ್ದತ್ತಿನ ಠೇವುಗಳು (Short term deposits) ಸಹ ಅಂಗೀಕರಿಸಲ್ಪಡುವವು.

ಎಲ್ಲಾ ವಿಧದ ಬೇಂಕಿಂಗ್ ವ್ಯವಹಾರಗಳು ಒಳ್ಳೇ ಸವಲತ್ತಿನಿಂದ ನಡಿಸಲ್ಪಡುವವು.

ಕುಂದಾಪುರ,
1—1—1939.

The Agricultural & Industrial Bank, Ltd.

ಮದ್ಯಪಾನೋಚ್ಚಾಟಣದ ಕಾರ್ಯಕ್ರಮ.

ಸರಕಾರದ ಯೋಜನೆಗಳು.

ತಾ ೧೯ ೧೯೬೯ನೇಯಿಂದ ಕುಮಟಾ-ಅಂಕೋಲಾ ತಾಲೂಕುಗಳು ಪೂರ್ಣ ಮದ್ಯವಾನೋಚ್ಚಾಟಣ ಕ್ಷೇತ್ರಗಳೆಂದೂ, ಉಳಿದ ಭಾಗವು ಮದ್ಯ ನಿರೋಧನ ಪ್ರಕ್ಷೇತ್ರವೆಂದೂ ಎಣಿಸಲ್ಪಡುವವು ಮದ್ಯ ನಿರೋಧನ,ಮದ್ಯವಾನೋಚ್ಚಾಟಣ ಪ್ರದೇಶದ ಸುತ್ತು ಮುತ್ತು ೩ ಮೈಲುಗಳಲ್ಲಿ ಮದ್ಯದಂಗಡಿ ಇಡಗೊಡಲಿಕ್ಕೆಲ್ಲ ಆದಕ್ಕಾಗಿ ಸರಕಾರವು ಅಬಕಾರಿ ಕಮಿಶನರರ ವಿಫಾರಸಿನಂತೆ ೩೦ ಸಾವಿರ ರೂಪಾಯಿಗಳ ಖರ್ಚನ್ನು ಮಂಜೂರ ಮಾಡಿದೆ.

ಕುಮಟಾ ಅಂಕೋಲಾ ತಾಲೂಕುಗಳಲ್ಲಿ ಶೇಂದಿ-ಶೆರಾಟು ಮತ್ತು ವಿದೇಶಿ ಮದ್ಯಗಳು ದೊರಕಲಿಕ್ಕಿಲ್ಲ. ಸರಕಾರಿ ಹಸಕುಮುಗಳ ಪೇರಿಗೆ ವಿಶೇಷ ಪ್ರಸಂಗಗಳಲ್ಲಿ ಯಾವನೊಬ್ಬನಿಗೆ ಮಾದಕ ಪದಾರ್ಥ ಪಡೆಯಲು ಅಪ್ಪಣೆ ಕೊಡ್ಪ್ಪುವದು ಆಫೀಮು, ಗಾಂಜಾ ಮೊದಲಾದವುಗಳ ಅಮದು ರಫ್ತು ನಿರ್ಬಂಧಿಸಲ್ಪಡುವದು ಸ್ಥಳಿಕ ಡಾಕ್ಟರರ ಶಿಫಾರಿಯಿಂದ ವೈಸನ-ಪತ್ರ ಪಡೆದವರಿಗೆ ಅವುಗಳನ್ನು ಪೂರೈಸುವಂತೆ ವ್ಯವಸ್ಥೆಯಾಗುವದು

ಉಳಿದ ತಾಲೂಕುಗಳಲ್ಲಿ ಶೇಂದಿ, ಕಾಬು, ವಿದೇಶಿ ಮದ್ಯಗಳ ಅಂಗಡಿ ಇರಲಿಕ್ಕೆಲ್ಲ, ಆದರೆ ಈಗ ಕುಮಟಾ-ಅಂಕೋಲಾ ತಾಲೂಕುಗಳಲ್ಲಿರುವಂತೆ ಶೇಂದಿ-ಕಾಬುಬುಗಳನ್ನು ಅಮದು ಮಾಡಲಿಕ್ಕೆ ಮದ್ಯ ನಿರೋಧನ ಪ್ರದೇಶದಲ್ಲಿ ಆಕ್ಟ್ರಡೆಯಿರುವದು ಕಾರವಾರ ಪಟ್ಟಣದಲ್ಲಿ ಮಾತ್ರ ಒಂದು ವಿದೇಶಿ ಮದ್ಯದ ಅಂಗಡಿ ಇರುವದು

ನಮ್ಮ ಇಡೀ ಜಿಲ್ಲೆ ಮದ್ಯನಿರೋಧನ ಪ್ರದೇಶವಾಗುವದರಿಂದ ಅದರ ಸುತ್ತುಮುತ್ತಲಿನ ೩ ಮೈಲು ಪ್ರದೇಶದಲ್ಲಿ ನೆರೆಯ ಬೆಳಗಾವಿ-ಧಾರವಾಡ ಜಿಲ್ಲೆಗಳಲ್ಲಿರುವ ತಾವರಗಟ್ಟಿ, ಗೋಧೋಳ, ಕೊಡಗಾಯಿ, ಅಳಣವರ, ಬೊಮ್ಮನಗಟ್ಟಿ, ಕೊಪ್ಪರಡಿ ಕೊಪ್ಪ ಹುಂದಿಹಾಳ, ಸವುಸಗಿ, ಕರಗುದ್ರಿ, ಹಸನಾಬಾದಾಗಳಿಗಳಿಗಿರುವ ಮದ್ಯದಂಗಡಿಗಳೆಲ್ಲ ಮುಚ್ಚಲ್ಪಡುವವು ಅದರೆ ಅರವಟ್ಟಿಗಿಯಲ್ಲಿ ಮದ್ಯದಂಗಡಿಗಳೂ, ಆಫೀಮು-ಗಾಂಜಾ ಅಂಗಡಿಗಳೂ ಇಡಲ್ಪಡುವವು. ಕಾನಡಾ ಜಿಲ್ಲೆಯ ಚತುಃಸೀಮೆಯಿಂದ ಅರವಟ್ಟಿಗಿ ೫೫ ಮೈಲು ದೂರವುಂಟು.

ಬೆಳಗಾವಿ ಜಿಲ್ಲೆಯ ಲೋಂಡಾ, ಧಾರವಾಡ ಜಿಲ್ಲೆಯ ಹಾನಗಲ್ಲ, ತಡಸ, ಕಲಘಟಗಿ, ನಿಗಡಿ ಮತ್ತು ಅರವಟ್ಟಿಗೆ ಈ ೬ ಅಂಗಡಿಗಳಲ್ಲಿ ಸರಕಾರಿ ಮುದ್ರೆಯುಳ್ಳ ಬಾಟ್ಲಿಗಳು ಮಾಂಟಾಬ್ಕೆ ಇಡಲ್ಪಡುವವು

ವೈಸನ-ಪತ್ರ ಪಡೆದ ವ್ಯಕ್ತಿಗಳಿಗೆ ಆಫೀಮು-ಗಾಂಜಾ ಮಾಂಟಾ ಮಾಡುವದಕ್ಕಾಗಿ ತಾಲೂಕಿನ ಮುಖ್ಯ ಸ್ಥಳಗಳಲ್ಲಿಯೂ ಪೇರೆಯ ಮುಖ್ಯ ಸ್ಥಳಗಳಲ್ಲಿಯೂ ೧೧ ಅಂಗಡಿಗಳು ತೆರೆಯಲ್ಪಡುವವು ಅವು ಸರಕಾರಿ ಮುದ್ರೆಯಿದ್ದ ಪೆಟ್ಟಿಗೆಯಲ್ಲಿ ಮಾರಲ್ಪಡುವವು ಸುಪಾ-ಮುಂಡಗೋಡಗಳಲ್ಲಿ ಆಫೀಮಿನ ಮಾಂಟಾವಾಗಲಿಕ್ಕೆಲ್ಲ. ಈ ಮಾಂಟಾವಾಗುವದು ಮಾಮುಲೇದಾರ ಮತ್ತು ಮಹಾಲ್ಕರಿಗಳ ಕಚೇರಿಗಳಲ್ಲ ಮಾಂಟಾ ಮಾಡುವವರು ಕಾರಕೂನರು. ಈ ಕಾರಕೂನರಿಗೆ ಒಬ್ಬ ಪೇದೆ ಇರುವನು ಆಫೀಮಿನ ದರ ತೊಲೆಗೆ ರೂ ೧|| ಗಾಂಜಾ ತೊಲೆಗೆ ೧೫ ಆಣೆ, ಭಂಗಿ ತೊಲೆಗೆ ೩ ಆಣೆ.

ಕಾರವಾರದಲ್ಲಿ ಯುರೋಪಿಯನ್‌ರೂ ಇತರರೂ ವಿಹಾರಕ್ಕಾಗಿಯೂ, ಆರೋಗ್ಯಕ್ಕಾಗಿಯೂ ಬರುವ ಸಂಪ್ರದಾಯವುಂಟು ಅದರಿಂದ ಯುರೋಪಿಯನ್ನರಿಗೆ ವಿದೇಶಿ ಮದ್ಯ-ಪತ್ರಗಳು ಕೊಡ್ಪ್ಪಡುವವು ಕಾರವಾರದಲ್ಲಿ ಆಫಿಸರಿಗಳಿಗಾಗಿ ಚಿತ್ತರಂಜನ ಕೂಟ(Club) ವಿದೆ ಅದಕ್ಕೆ ಮದ್ಯ ಪಡೆಯಲು ಅಪ್ಪಣೆ ದೊರೆಯುವದು ಯುರೋಪಿಯನ್ನರು ತಮ್ಮ ಕುಡುಕ ಪತ್ರಗಳನ್ನು ಹಾಜರಪಡಿಸಿ ಕಾರವಾರದೊಳಗಿನ ವಿದೇಶಿ ಮದ್ಯದಂಗಡಿಯಿಂದ ಮದ್ಯ ಪಡೆಯಬಹುದು.

ಕಾನಡಾ ಜಲ್ಲೆಯ ಸುತ್ತುಮುತ್ತು ಸವೆದ್ರ, ಬ್ರಿಟೀಶರ ಪ್ರದೇಶ, ವ ದ್ಯಾಸ ಇಲಾಖೆ ಹೀಗಿರುವದರಿಂದ ಈ ಎಲ್ಲ ಪ್ರದೇಶದ ಮೇಲ್ವಿಚಾರಣೆ ಮಾಡಲು ಚೀಪ ಇನ್ಸಪೆಕ್ಟರು ಇಡಲ್ಪಡುವರು ಸುತ್ತು ೩ ಮೈಲು ಈಚೆ ಸಮುದ್ರದಲ್ಲಿ ತಪಾಸಣೆ ಮಾಡುವದಕ್ಕೆ ಒಂದು ಲೌಂಚು ಇಡಲ್ಪಡುವದು.

ಈ ಯೋಜನೆಯ ಮೂಲಕ ಸರಕಾರಕ್ಕೆ ತಗಲುವ ನಷ್ಟದ ವಿವರ –

ಕುಮಟಾ-ಅಂಕೋಲಾ ತಾಲೂಕುಗಳಲ್ಲಿ ಮದ್ಯ ಪಾನೋಚ್ಚಾಟಣ ಮಾಡಿದ ಬಗ್ಗೆ ರೂ. ೬,೦೦೦, ಇತರ ಪ್ರದೇಶದಲ್ಲಿ ಮದ್ಯನಿರೋಧನ ಮಾಡಿದ ಬಗ್ಗೆ ೨೦,೦೦೦, ಬೆಳಗಾವಿ ಧಾರವಾಡ ಜಿಲ್ಲೆಗಳಿಗೆ ೬ ಅಂಗಡಿಗಳನ್ನು ಮುಚ್ಚಿದ ಬಗ್ಗೆ ರೂ. ೧೧, ೫೦, ಹೀಗೆ ಸರಕಾರಕ್ಕೆ ನಷ್ಟವಾಗುವದು. ಇದಲ್ಲದೆ, ಮದ್ಯಪಾನೋಚ್ಚಾಟಣ ತಿಂದಿ ಮೊದಲಾದ ಪುಗಸ ಮೂಲಕ ರೂ ೬೦,೦೦೦ ಹೆಚ್ಚು ಖರ್ಚು ಬಂದೀತು ಈ ಖರ್ಚು ರೂ ೧,೩೦,೦೦೦ ತನಕ ವಿರುವ ಸಂಭವವುಂಟು

ರಾಮನಗುಳಿ, ಗೋಕರ್ಣ, ಅವಸಾ, ಬಿಣಗೆ ಕುಂಜಲ, ಅನಮೋಡ, ಗೋವಾ ಸೀಮೆ, ಬೆಳಗಾಂವ-ಸುಪಾ ಸೀಮೆ, ಹೆಸರಂಗಡಿ, ಗೊರಟೆ, ಹಲ್ಯಾಡಿ, ಕೆರವಡ್ತಿ, ಕಲಘಟ್ಟಿಗಿ, ಹಳಿಯಾಳ, ಅಳಣವರ, ತಾವರಗಟ್ಟಿ, ಮುಂಡಗೋಡ, ಕೊಪ್ಪರಡಿಕೊಪ್ಪ, ಬನವಸಿ, ದಾಸನಕೊಪ್ಪ, ಬಳಗಿ, ಮನಮನೆ, ಕೋಡಕಣಿ (ಸಿದ್ದಾಪುರ) ಈ ಸ್ಥಳಗಳಲ್ಲಿ ಚೌಕಿಗಳನ್ನು ಕಟ್ಟಿಸಿ ಅಬಕಾರಿ ಕಾವಲುಗಾರರು ಇಡಲ್ಪಡುವರು.

ಸರಕಾರವು ಈ ಯೋಜನೆಯನ್ನು ಪ್ರಯೋಗವೆಂದು ಮನ್ನಿಸಿರುವದಾಗಿ ತಿಳಿಯುತ್ತದೆ. ೧೯೪೦ನೇ ಇಸ್ವಿ ಜನವರಿ ತಿಂಗಳಲ್ಲಿ ಅಂದರೆ ಸರಿಸುಮಾರಿ ೫ ತಿಂಗಳಲ್ಲಿ ಈ ಯೋಜನೆಯ ಪರಿಣಾಮ ನೋಡಿ ಗುಣದೋಷಗಳ ಕುರಿತು ವರದಿಯನ್ನೊಪ್ಪಿಸಲಿಕ್ಕಾಗಿ ಸರಕಾರವು ವಿಧಿಸಿರುವದಾಗಿ ತಿಳಿಯುತ್ತದೆ.

ಮುಂಬಯಿಯೊಳಗಿನ ವಿಶೇಷ.

—ಮುಂಬಯಿಯಲ್ಲಿ ಮಾತ್ರ ಮದ್ಯ-ನಿರೋಧನದ ಕಾರ್ಯಕ್ರಮ ಅಗೋಸ್ತ ೧ನೇ ತಾರೀಖಿನಿಂದ ಲೇ ಪ್ರಾರಂಭಿಸಬೇಕೆಂದು ನಿಶ್ಚಯವಾಗಿದೆ. ಈ ಕುರಿತು ಸರಕಾರವು ಬಹು ತತ್ಪರತೆಯಿಂದ ದುಡಿಯುತ್ತಿದೆ. ಮದ್ಯ ಕುಡಿಯುವ ಪ್ರದೇಶದವರು ಮಾತ್ರ ಕುಡುಕ-ಪತ್ರ ಪಡೆಯಲಿಕ್ಕೆ ಹಕ್ಕುದಾರರು (eligibles). ಇವರು ಹೊಟೆಲುಗಳಲ್ಲಿ ಪ್ರತ್ಯೇಕವಾದ ಕೋಣೆಗಳಲ್ಲಿ ಮದ್ಯ ಸೇವಿಸಬೇಕು. ಕುಡುಕ-ಪತ್ರಗಳಿದ್ದವರು ಬಜ್ಯೂಟ್ಗೆರಂಗಿ ಇಲ್ಲವೆ ಒತ್ತ ಟ್ಟಿಗೆ ಮದ್ಯ ಸೇವಿಸಬಹುದು. ಆದರೆ ಕುಡುಕ ಪತ್ರವಿಲ್ಲದವರು ಬಂದ ಕೂಡಲೆ ಇವರು ಕುಡಿಯುವ ದನ್ನು ನಿಲ್ಲಿಸಕ್ಕಕ್ಕಿದ್ದು. ನಿಯಮಗಳನ್ನು ಪಾಲಿಸಿಕೊಳ್ಳಲಿಕ್ಕೆ ಪ್ರತಿ ಹೊಟೆಲಿನಲ್ಲಿ ಅಬಕಾರಿ ಇಲಾಖೆಯವರು ಕಾವಲುಗಾರರನ್ನು ನೇಮಿಸುವರು. ರೋಗಿಗಳಿಗೆ ಮಾದಕ-ಪದಾರ್ಥಗಳು ಡಾಕ್ಟರರ ಶಿಪಾರಸಿನ ಮೇರೆಗೆ ಸಿಗುವವು. ಇಡೀ ಮುಂಬಯಿ ಪಟ್ಟಣದಲ್ಲಿ ಕುಡುಕ-ಪತ್ರಗಳದ್ದವರಿಗೆ ಮದ್ಯ ಮಾರಾಟ ಮಾಡುವದಕ್ಕಾಗಿ ೩೦ ಅಂಗಡಿಗಳು ಇಡಲ್ಪಡುವವು.

ಚಿಕ್ಕ ಚಿಕ್ಕ ಮದ್ಯದಂಗಡಿಕಾರರಿಗೆ ನಷ್ಟವೊದಗಬಾರದೆಂದು ಜುಲ್ಯಾ ಹಿಗೆನೇ ತಾರೀಖಿನ ಮಧ್ಯರಾತ್ರೆ ೧೫ ಘಂಟೆಗೆ ಅವರ ಕಡೆಗಿರುವ ಯಾವತ್ತೂ ಮಾದಕ ಪದಾರ್ಥಗಳನ್ನೆಲ್ಲ ಸರಕಾರವು ಖರೀದಿ ಮಾಡುವದು.

ಪಾರ್ಸಿ ಸಮಾಜದವರು ಇನ್ನೂ ವಿರೋಧವನ್ನೇ ಪ್ರದರ್ಶಿಸುತ್ತಿದ್ದಾರೆ ಮದ್ಯ ಕುಡಿಯಲಿಕ್ಕೆ ಧರ್ಮಾಜ್ಞೆಯಿರುವದಾಗಿ ಇವರ ಸಾಧನೆ ಶ್ರೀ|| ಮಹಾದೇವ ಭಾಯಿ ದೇಸಾಯಿಯವರು ೧೯೫೯ನೇ ಇಸ್ವಿಯಲ್ಲಿ ಡಾ|| ದಾದಾಜಾಂದಿ, ಸರ್ ಕಾವಸಜಿ ಜಹಾಂಗೀರ, ರಾ|| ನವರೋಜ ಜಮಾಸಿಯಾ ಮೊದಲಾದ ಪಾರ್ಸಿ ಪ್ರಮುಖರ ಜಿಭಿಪ್ರಾಯಗಳನ್ನು ವಿವರಿಸಿ ಮದ್ಯ ಪಾನದ ವ್ಯಾಪಾರವನ್ನು ಸಮೂಲ ಉಚ್ಚಾಟಣ ಮಾಡಬೇಕೆಂದು ಈ ಪ್ರಮುಖರು ಆವೇಶದಿಂದ ನೂಡಿದ ಪ್ರತಿಪಾದನೆಗಳನ್ನು 'ಹರಿಜನ' ಪತ್ರಿಕೆಯಲ್ಲಿ ಸಮಾಲೋಚಿಸಿ, ಇವರಲ್ಲಿ ಸರ್ ಕಾವಸಜಿ ಜಹಾಂಗೀರ, ರಾ|| ದುಮಾಸಿಯಾರವರು ಮದ್ಯ ಪಾನೋಚ್ಚಾಟಣಕ್ಕಾಗಿ ವಿರೋಧ ಬಗೆಯುವ ಬಗೆ ಹೇಗೆಂದು ವಿಚಾರಿಸುತ್ತಾರೆ. ದಾದಾ ಭಾಯಿ ನವರೋಜಿಯವರಂತು ಮದ್ಯ-ವ್ಯಾಪಾರದ ಆಪಾ ಪಡೆಯಬಾರದೆಂದು ವಿಶ್ವರ್ಯವೆಂತ ಕಾಮಾ ಕಂಪನಿಯ ಸಂಬಂಧವನ್ನು ಕುಂದಿರಿಸಿಕೂಂಡ ಕಥೆಯನ್ನು ಚರಿತ್ರಕರ್ತರಾದ ರಾ|| ಮಸಾನಿಯವರು ಉಲ್ಲಾಸದಿಂದ ಉಲ್ಲೇಖಿಸಿದ್ದಾರೆ. ಈ ಮಹಾನೀಯರೆಲ್ಲರೂ ಪಾರ್ಸಿ ಧರ್ಮಾನಿಷ್ಠರಲ್ಲವೇ ? ಎಂಬುದಾಗಿಯೂ ಶ್ರೀ|| ಮಹಾದೇವಭಾಯಿ ದೇಸಾಯಿಯವರು ಪ್ರಶ್ನಿಸಿ ಪಾರ್ಸಿ ಜನರ ಧರ್ಮದ ಅಕ್ಷೇಪಬರೆ ಕೋಲಾಹಲವೆದಂತು ಸಿದ್ಧವಾಗಿದ್ದಾರೆ. ಅಬಕಾರಿ ಇಲಾಖೆಯ ಪ್ರಧಾನರಾದ ನಾ|| ಡಾ|| ಗಲ್ಲರಾದರೂ ಪಾರ್ಸಿಗಳೇ ಎಂದು ನೆನಪಿನಲ್ಲಿಡುವದು ಅವಶ್ಯ

ಮುಂಬಾಗದ ಪಕ್ಷವನ್ನು ಸ್ಥಾಪಿಸಿಕೊಂಡು ಪ್ರಜಾರ ಕಾರ್ಯವನ್ನು ನಡಿಸುತ್ತಿದ್ದ ಶ್ರೀ||ಸುಭಾಷ ಚಂಗ್ರರಿಗೆ ಕೊಂಗ್ರೆಸ ಚಾಲಕರನ್ನು ಹಳೆಯುವ ಹವ್ಯಾಸ ಮೀರಿದಪ್ಪಿದೆ. ಮುಂಬಯಿಯೊಳಗೆ ಮುಂಬಯಿ ಸರಕಾರವು ಮದ್ಯವಾನೋಚ್ಚಾಟಣ ಕೈಕೊಂಡಿದ್ದು ಆಶ್ಚರ್ಯವ್ಯವಾಯಿತೆಂದೂ ದೇಶಕಿಂಕರಪ್ರಾಜಕವಾಯಿತೆಂದೂ ಪುಣೆಯೊಳಗೆ ಅವರು ನುಡಿದು ಮುಂಬಯಿ ಸರಕಾರವನ್ನು ಅಧಿಕ್ಷೇಪಿಸಿದರು. ನಾ|| ಮುಖ್ಯಮಂತ್ರಿ ನಿಲ್ಲಿಂಗ್ಲಿನೊಡಲಾದವರು ಶ್ರೀ|| ಸಭಾಪರಿಗೆ ಹಿಂದಿನ

ನೆನೆವು ಮಾಡಿಕೊಟ್ಟಿದ್ದಾರೆ. ಮುಂಬಯಿ ಸರಕಾರದ ಯೋಜನೆ ಸ್ವಕಂಠ್ಯವಲ್ಲ. ಅಖಿಲ ಭಾರತೀಯ ವಾರ್ತಾಮಂಡಲಿ ಬೋರ್ಡಿನ ಸಭೆಯಲ್ಲಿ ಈ ಯೋಜನೆ ಮಸ್ಸಿಲ್ಲಟ್ಟಿತ್ತಾಗಿಯೂ ನಾ||ರು ಹೇಳಿ, ಮುಂಬಯಿ ಸರಕಾರವು ಮದ್ಯಪಾನೋಚ್ಚಾಟಣ ಸಂಕಲ್ಪವನ್ನು ಪ್ರಕಟಿಸಿದೊಡನೆ ಆ ಕಾಲದಲ್ಲಿ ರಾಷ್ಟ್ರೀಯ ಸಭೆಯ ಅಧ್ಯಕ್ಷರಾಗಿದ್ದ ಶ್ರೀ|| ಸುಭಾಷಚಂದ್ರ ಬೋಸರು ಮುಂಬಯಿ ಸರಕಾರಕ್ಕೆ ಅಭಿನಂದಿಸಿದ್ದರಾಗಿಯೂ ಪ್ರಕಟಿಸುತ್ತಾರೆ. ಮುಂಧಾಗ ಪಂಗಡದ ಪ್ರವರ್ತಕರಾದ ಶ್ರೀ|| ಸುಭಾಷಚಂದ್ರ ಬೋಸರು ಮದ್ಯವಾನೋಚ್ಚಾಟಣ ಕಾರ್ಯವನ್ನು ಕ್ರಮವಾಗಿ ಕೈಕೊಳ್ಳಬೇಕಾಗಿತ್ತೆಂದು ಪ್ರತಿಪಾದಿಸಿ, ಹಿಂಭಾಗಕ್ಕೆ ಕೂಡು ಮಾತ್ರವಿದ್ದಾರಾಗಿ ಮುಂಬಯಿಯೊಳಗಿನ ರಾಷ್ಟ್ರೀಯ ಸಭೆಯ ಸದಸ್ಯರೂ ಸಮಾಜಸತ್ತಾವಾದಿಗಳೂ ಅಭಿಪ್ರಾಯಪಡುತ್ತಿದ್ದಾರೆ. ಮಹಾತ್ಮರು ಆಬಟಾಬಾದಿಂದ ಪ್ರಕಟಿಸಿರುವ ಶ್ರೀ|| ಸುಭಾಷಚಂದ್ರರ ಅಕ್ಷೇಪಗಳನ್ನು ಖಂಡಿಸಿದ್ದಾರೆ.

—ರೂ ಎಷ್ಟೂ ಅಕ್ಷೇಪ ಮಾಡಿದಾಗ್ಯೂ ಮುಂಬಯಿಯೊಳಗೆ ಆಗಸ್ಟ್ ೧ನೇ ತಾರೀಖಿನಿಂದ ಮದ್ಯ-ನಿರೋಧನೆಯಾಗುವದು ಖಂಡಿತ ಮಾತು.

೩ ವರ್ಷಗಳಲ್ಲಿ ಇಡೀ ಮುಂಬಯಿ ಇಲಾಖೆಯೊಳಗೆ ಮದ್ಯ-ನಿರೋಧನೆ ಮಾಡಬೇಕೆಂದು ಮುಂಬಯಿ ಸರಕಾರದ ದೃಢಸಂಕಲ್ಪವಾಗಿರುವದಾಗಿ ತಿಳಿಯುತ್ತದೆ.

ವಂಬಯಿಯೊಳಗಿನ ಬೇರೆ ಬೇರೆ ಪತ್ರಿಕೆಗಳು ಮದ್ಯವಾನೋಚ್ಚಾಟಣ ಕಾರ್ಯ-ಕ್ರಮದ ಪ್ರಿಕ್ಯರ್ಥ ಈ ತಿಂಗಳ ಕೊನೆಯ ವಾರದಲ್ಲಿ ವಿಶೇಷ ಸಂಚಿಕೆಗಳನ್ನು ಹೊರಡಿಸಿ ಮದ್ಯವಾನೋಚ್ಚಾಟಣದಿಂದಾಗುವ ಲಾಭಗಳನ್ನು ಜನರಿಗೆ ತಿಳಿಸಿ ಹೇಳುವವು. ಮದ್ಯಪಾನೋಚ್ಚಾಟಣ ಮಂಡಳದವರು ಅಲ್ಲಲ್ಲಿ, ಎಲ್ಲೆಲ್ಲಿ, ಎಲ್ಲಿ ನೋಡಿದಡಲ್ಲಿ ಮದ್ಯಪಾನದಿಂದುಂಟಾಗುವ ಅನರ್ಥಗಳನ್ನು ವಿವರಿಸುವ ಚಿತ್ರಪಟಗಳನ್ನು ಹಚ್ಚುತ್ತಿದ್ದಾರೆ ೪೦,೦೦೦ಕ್ಕೆ ಮಿಕ್ಕಿ ಚಿತ್ರಪಟಗಳು ಹಚ್ಚಲ್ಪಟ್ಟಿವೆ. ಕೃಷ್ಣ ಸಿನೆಮಾ ಮಂದಿರದಲ್ಲಿ 'ಶರಾಬಿ' ಚಿತ್ರಪಟ ತೋರಿಸಲ್ಪಡುತ್ತಿದೆ. ಕಡಿಮೆ ತನದಿಂದ ಉಂಟಾಗುವ ಅನರ್ಥಗಳು ಬೋಧಿಸಲ್ಪಡುತ್ತವೆ ಇನ್ನೊಂದು ವಾರದಲ್ಲಿ ಇನ್ನು ೫ ಚಿತ್ರಪಟಗಳು ತಯಾರಿಸಲ್ಪಡುವವು ಇದಲ್ಲದೆ, ಕಡಿತದಿಂದ ಶರೀರದ ಮೇಲೆ ಉಂಟಾಗುವ ಬೇರೆ ಬೇರೆ ಪರಿಣಾಮಗಳನ್ನು ತೋರಿಬರುವದಕ್ಕಾಗಿ ಮಾಯೋಪಕರಗಳ ಯೋಜನೆಯಾಗಿದೆ ಹಾಡುಗಳು ಹಾಡಲ್ಪಡುವವು. ಮದ್ಯಪಾನೋಚ್ಚಾಟಣ ಕಾರ್ಯಕ್ರಮದಲ್ಲಿ ಕಾವಲುಗಾರರುಗಲು ೬೪೦ ಸ್ವಯಂಸೇವಕರ ಒಂದು ದಲ ತಯಾರಿಸಲ್ಪಟ್ಟಿದೆ. ಇನ್ನೂ ಸ್ವಯಂಸೇವಕರು ದಾಖಲಾಗುತ್ತಿದ್ದಾರೆ

ವಾರ್ತೆಗಳು.

— ಬಂಗಾಲದೊಳಗಿನ ಜಮಾಲಪುರ ಕೋರ್ಟಿನಲ್ಲಿ ಬಹು ದೊಡ್ಡ ಸಮಸ್ಯೆ ಉಂಟಾಗಿದೆ. ಬರಾದಿಯಾ ನ್ಯಾಮದ ನಗರ-ಶೆಟ್ಟರ ಕೊಲೆಯಾಯಿತೆಂದು ಪೋಲೀಸರು ತಪಾಸ ಮಾಡಿ ಎಲಬುಗಳ ಮೇಲಿಂದ ಸಾಕ್ಷಿ-ಪುರಾವೆ ತಯಾರಿಸಿ ಖಟ್ಲೆ ಮಾಡಿಕೊಟ್ಟಿದ್ದರು! ಖಟ್ಲೆಯಲ್ಲಿ ಪೋಲೀಸರು ಹಿಡಿದು ತಂದ ಆರೋಪಿಗರು ನಗರಶೆಟ್ಟರ ಕೊಲೆ ಮಾಡುವಾಗ ತಾವು ಪ್ರತ್ಯಕ್ಷ ಕಂಡಿದ್ದೆವಾಗಿ ಕೆಲವರ ಸಾಕ್ಷಿಗಳಿದವು! ಆ ಮೇಲೆ ಮೃತಿಯನ್ನೈದಿದ ನಗರ-ಶೆಟ್ಟಿರು ಕೋರ್ಟಿನಲ್ಲಿ ಹಾಜರಾಗಿ ತಾವು ಜೀವಂತರಿರುವೆವಾಗಿಯೂ, ಬೇರೆ ಕಡೆ ಉಳಕೊಳ್ಳುತ್ತೇವಾಗಿಯೂ ಕೋರ್ಟಿಗೆ ಅರಿಕೆ ಮಾಡಿಕೊಂಡರು. ಮುಂದೇನು ಮಾಡಬೇಕೆಂದು ಸೆತ್ತನ್ನ ಜಜ್ಜರಿಗೆ ತಿಳಿಯದೆ ಖಟ್ಟೆ ವಿಚಾರ ಮುಂದೂಡಲ್ಪಟ್ಟಿದೆ.

— ಶ್ರೀ|| ಸುಭಾಷಚಂದ್ರ ಬೋಸರು ಅಪ್ಪಣೆ ಕೊಟ್ಟಿಂತೆ, ಹಲವಡೆ ಸಭೆಗಳಾಗಿ ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯ ನಿರ್ಣಯಗಳ ನಿಷೇಧವಾಯಿತು. ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯು ಪ್ರಾಂತಿಕ ಕೊಂಗ್ರೆಸ ಕಮಿಟಿಯ ಅಪ್ಪಣೆ ಪಡೆಯದೆ ಸತ್ಯಾಗ್ರಹ ಹೂಡಬಾರದೆಂದು ನಿರ್ಣಯ ಸಿಟ್ಟು, ಸ್ವಾತಂತ್ರ್ಯ-ನಿಯಂತ್ರಣವೆಂದು ಮುಂಭಾಗ ಪಕ್ಷದ ಅಕ್ಷೇಪ. ಇದಲ್ಲದೆ ಪ್ರಾಂತಿಕ ಸರಕಾರಗಳ ಆಡಳಿತೆಯಲ್ಲಿ ಪ್ರಾಂತಿಕ ಕೊಂಗ್ರೆಸ ಕಮಿಟಿಯವರು ಕೈಹಾಕಬಾರದೆಂದೂ, ತಪ್ಪುಗಳೇನಾದರೂ ಇದ್ದರೆ ಅವಕ್ಕೆ ತೋರಿ ಕೊಡಬೇಕೆಂದೂ ಮಾಡಿದ ನಿರ್ಣಯದಿಂದ ರಾಷ್ಟ್ರೀಯ ಸಭೆಯು ಸುಧಾರಣಾವಾದಿಯಾಯಿತೆಂಗೂ ರಾಷ್ಟ್ರೀಯ ಸಭೆಯ ಕ್ರಾಂತಿಕಾರಕ ಪ್ರವೃತ್ತಿಗೆ ನ್ಯೂನತೆಯುಂಟಾಯಿತೆಂದೂ ಮುಂಭಾಗ ಪಕ್ಷದ ಇನ್ನೊಂದು ಆರೋಪ. ಹೀಗೆ ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯ ಮೇಲೆ ಪ್ರಕಟವಾಗಿ ಸಭೆ ಸೇರಿತು ಅಪಸಂಬಿಗೆಯಾಗುವಂತೆ ಗೌಪ್ಯವಹಾಸಿ ಮಾಡಿದ ಬಗ್ಗೆ ಕೊಂಗ್ರೆಸ ಕಾರ್ಯಕಾರಿ ಮಂಡಳವು ಶ್ರೀ|| ಸುಭಾಷಚಂದ್ರ ಬೋಸ್ರನ್ನು ಶ್ರೀ||ಸರಿವಮಾನ ಮೊದಲಾದ ರಾಷ್ಟ್ರೀಯ ಸಭೆಯ ವರ್ಕಿಂಗ್ ಕಮಿಟಿ ಸದಸ್ಯರನ್ನು ಕೈಕೊಳ್ಳುವ ಅಲೋಚನೆಯ ಲ್ಲಿರುವವಾಗಿ ತಿಳಿಯುತ್ತಿದೆ ಕೊಂಗ್ರೆಸ ಕಾರ್ಯಕಾರಿ ಮಂಡಳದ ಸಭಾಸದರು ತಮ್ಮ-ತಮ್ಮೊಳಗೆ ಮಹಾತ್ಮರೊಡನೆ ಅಲೋಚನೆ ನಡಿಸುತ್ತಾರಾಗಿ ತಿಳಿಯುತ್ತಿದೆ. ಪಂ|| ಜವಾಹರಲಾಲರು ರಾಷ್ಟ್ರೀಯ ಸಭೆಗು ರಾಯಭಾರಿಗಳಾಗಿ ನೊನ್ನೆ ಪುಣೆಯಿಂದ ವಿಮಾನ ಮಾರ್ಗವಾಗಿ ಸಿಂಹಲದ್ವೀಪಕ್ಕೆ ಹೊರಟು ಹೋಗಿದ್ದಾರೆ. ಅವರು ಇನ್ನು ೧೦ ದಿನಗಳಲ್ಲಿ ಮರಳಿ ಬರುವರು. ಅವರು ಹಿಂತಿರುಗಿ ಬಂದ ಬಳಕ, ಕೊಂಗ್ರೆಸ ಕಾರ್ಯಕಾರಿ ಮಂಡಳದ ಸಭೆ ಸೇರಿ ಶಾಸನಕ್ರಮ ಕೈಕೊಳ್ಳುವದು.

— ಗೋವಾ ವ್ಯಾಪಾರದಲ್ಲಿ ಪತ್ರಿಕೆಗಳ ಮೇಲೆ ಕರಿನಿರ್ಬಂಧಗಳು ಹೇರಲ್ಪಟ್ಟಿವೆ. ಪ್ರತಿಯೊಂದು ಪತ್ರಿಕೆಯವರು ಪತ್ರಿಕೆಯೊಳಗೆ ಪ್ರಕಟವಾಗುವ ಲೇಖಗಳ ನ್ಯೂ ವಾರ್ತೆಗಳನ್ನೂ ಸರಕಾರಕ್ಕೆ ಕಳುಹಿ, ಸರಕಾರದ ಮನ್ನಣೆ ದೊರೆತರೆ ಮಾತ್ರ ಅವನ್ನು ಪ್ರಕಟಿಸತಕ್ಕದ್ದು. ಆದರಿಂದ ಪತ್ರಕರ್ತರು ಬೇಸತ್ತಿಟ್ಟಿದ್ದಾರೆ ಸರಕಾರದ ಯೋಜನೆಗಳ ಮೇಲೆ ಅಕ್ಷೇಪ ಮಾಡಲಿಕ್ಕೆ ಇಂಬೇ ದೊರೆಯುವದಿಲ್ಲ. ಪತ್ರಿಕೆಗಳ ಉದ್ದೇಶವೇ ನಿರರ್ಥಕವಾಗುತ್ತಿದೆ. ಆದರಿಂದ ಸಾಹಸಿಗರೊಬ್ಬರು ಮುಂಬಯಿಯೊಳಗೆ 'ಗೋವಾ ಕಾಮುಗರ' ಎಂಬ ಪತ್ರಿಕೆಯನ್ನು ಸದ್ಯಕ್ಕೆ ಹೊರಡಿಸಿದ್ದಾರೆ ಇದು ಇಂಗ್ಲಿಷ ಮತ್ತು ಕೊಂಕಣಿ ಭಾಷೆಗಳಲ್ಲಿ ಪ್ರಕಟವಾಗುತ್ತದೆ. ಈ ಪತ್ರಿಕೆಯ ಮೇಲೆ ಇನ್ನೂ ಸರಕಾರವು ಯಾವದೇ ನಿರ್ಬಂಧ ಹೊರಡಿಸಿಲ್ಲ. ಆದರೆ, ಈ ಪತ್ರಿಕೆಯನ್ನು ಗೋವಾ ಪ್ರಾಂತದಲ್ಲಿ ಒಳಗೇರಗೊಡುವದಿಲ್ಲ. ಗೋಮಾಂತಕಕ್ಕೆ ಬರುವ ಪತ್ರಿಕೆಯ ಗಂಟುಗಳನ್ನು ತಪಾಸ ಮಾಡಿ ಬಿಡುವ ಕ್ರಮ ನಡೆದಿದೆ ಎಲ್ಲಾ ವರೂ 'ಗೋವಾ-ಕಾಮುಗಾರ'ನು ಆಡಗಿ ಗೋಮಾಂತಕಕ್ಕೆ ಸೇರಿ ಗೋವೆಯೊಳಗೆ ಅಸಂತೋಷವನ್ನುಂಟು ಮಾಡಬಹುದೆಂದು ಸರಕಾರವು ಭೀತಿಗೊಂಡಿದೆ. ಪ್ರತಿಯೊಂದು ಗಂಟೆನೆಳಗಿನ ಪ್ರತಿಯೊಂದು ಪತ್ರಿಕೆಯನ್ನು ತಪಾಸ ಮಾಡಿ ಬಿಡುವ ತನಕ ಯಾಗಿಬಂಡಿ ನಿಲ್ಲುವದಿಲ್ಲ, ಯಾಗಿಬಂಡಿ ಹೊರಟು ಹೋಗಿಬಿಡುತ್ತವೆ ಗಂಟುಗಳು ಏನೇ ಯಾಗಿಬಂಡಿಗೆ ಹೋಗಬೇಕು ಆದರಿಂದ ಬೇರೆ ಬೇರೆ ಪತ್ರಿಕೆಗಳ ವಾಚಕರು ಬಹಳ ಅಸಮಾಧಾನಪಟ್ಟಿದ್ದಾರೆ.

— ನಿಜಾಮ ರಾಜ್ಯದೊಳಗೆ ವಿಚಿತ್ರ ಪರಿಸ್ಥಿತಿಯಂಟಾಗಿದೆ. ದಿವಾಣಾರಾದ ಸರ್ ಅಕಬರ ಹೈದರಿಯವರೂ ನಿಜಾಮ ಸಾಹೇಬರೂ ಕೂಡಿಬರುವದಿಲ್ಲ

(೦೦ನೇ ಪಾನಿನ ಮೇಲೆ ನುಂದುವರಿದೆ)

The Canara Industrial & Banking Syndicate, Ltd.,
Estd:] HEAD OFFICE:- UDIPI. [1925.
MEMBER: Reserve Bank of India,
Bankers' Clearing House, Bombay.
Five years Cash Certificates are issued at the price of Rs. 8/=, Rs. 80/=, Rs. 400/=, and Rs 800/= Repayable on maturity at Rs. 10/= Rs. 100/=, Rs. 500/— Rs. 1000/= respectively.
You can cash the Certificates at any time before maturity.
AN INVESTMENT WHICH IS LIQUID AND YET VERY REMUNERATIVE
Further particulars can be had from:
THE KUMTA BRANCH:
General Banking Business Transacted.

ಪತ್ರಕರ್ತರ ನುಡಿಗನ್ನಡಿ.

ಅಭಿಪ್ರಾಯಗಳು

೧ ನಿಜಾಮ ರಾಜ್ಯದ ಹೈದರಾಬಾದಿನೊಳಗೆ ಬೆಂಕಿಪೆಟ್ಟಿಗೆಯ ಚಿಕ್ಕ ಚಿಕ್ಕ ಕಾರಖಾನೆಗಳು ಸ್ಥಾಪಿಸಲ್ಪಟ್ಟಿವೆಯೆಂದು ತಿಳಿದು ನಮಗೆ ಸಂತೋಷವಾಗಿದೆ. ಹಿಂದುಸ್ಥಾನ ಸರಕಾರವು ಪೂರ್ಣಸಿದ ಬರೇ ಬೇರೆ ಅನುಕೂಲ್ಯಗಳನ್ನು ನಿಜಾಮ ರಾಜ್ಯದೊಳಗಿನ ಕಾರ್ಯಕರ್ತರು ಗೃಹಸಿ ಅಲ್ಲಲ್ಲಿ ಬೆಂಕಿಪೆಟ್ಟಿಗೆ ಮಾಡುವ ಚಿಕ್ಕ ಚಿಕ್ಕ ಕಾರಖಾನೆಗಳನ್ನು ಸ್ಥಾಪಿಸಿಕೊಂಡಿದ್ದಾರೆ ಒಂದೊಂದು ಕಾರಖಾನೆಯಲ್ಲಿ ದಿನಾಲು ೧೦೦ ಗ್ರಾಸ್ ಅಂದರೆ ಸಂಸಾರಿ ೧೦—೧೫ ಸಾವಿರ ಬೆಂಕಿಪೆಟ್ಟಿಗೆಗಳನ್ನೆ ತಯಾರಿಸುವ ಕ್ರಮವುಂಟು ನಮ್ಮಲ್ಲಿ ಇಂಥ ಉಪಕ್ರಮ ಮಾಡಬಹುದಾಗಿ ನಮಗೆ ತೋರುತ್ತದೆ ಈ ಉದ್ದಿಮೆಗೆ ಬಹಳ ಬಂಡವಲು ಬೇಡ ೨-೩ ಸಾವಿರ ರೂಪಾಯಿಗಳಿಗಳ ಗೆ ಚಿಕ್ಕ ಕಾರಖಾನೆಯನ್ನು ಏರ್ಪಡಿಸಿಕೊಳ್ಳಬಹುದಾಗಿದೆ. ಬೆಂಕಿಪೆಟ್ಟಿಗೆಗೆ ಅವಶ್ಯವುಳ್ಳ ಕಟ್ಟಿಗೆಯನ್ನು ನಮ್ಮಲ್ಲಿ ಕೊರತೆಯಿಲ್ಲ, ಅಗ್ಗವಾಗಿ ಎಲ್ಲೂ ಕಟ್ಟಿಗೆ ಸಿಗುತ್ತದೆ. ಮುಂಬಯಿ ಸರಕಾರವು ಈ ಉದ್ದಿಮೆಗೆ ಪ್ರೋತ್ಸಾಹ ಕೊಡುವ ವಿಚಾರದವರಿದ್ದಿದರಿಂದ ಉದ್ದಿಮೆದಾರರಿಗೆ ಒಹಳ ಅನುಕೂಲತೆಗಳು ದೊರಯವ ಸಂಭವವುಂಟು ಕಡ್ಡಿ ಪೆಟ್ಟಿಗೆಗಳ ಮೂಲಕ ಹೇರಳ ಹಣ ಇಲ್ಲಿಂದ ಪರದೇಶಗಳಿಗೆ ರವ್ತಾಗುತ್ತದೆ ಆದರಿಂದ ಸಾಹಸಿಗ ಸಾಹಕಾರರು ಯಾರೂ ಬ್ಯಗಿ ಕಡ್ಡಿ ಪೆಟ್ಟಿಗೆ ಮಾಡುವ ಕ್ರಮವನ್ನು ಕಲಿಸಿ ತಂದು, ಬೇಕಿ ಪೆಟ್ಟಿಗೆಯ ಕಾರಜ್ಞಾನೆಗಳನ್ನು ಸವ್ಥಲ್ಲಿ ಹೊರಡಿಸುವ ಆಲೋಚನೆ ಮಾಡಬೇಕಾಗಿ ನಾವು ವಿನಂತಿ ಮಾಡಿಕೊಳ್ಳುತ್ತೇನೆ ಚಿಕ್ಕ ಪುಟ್ಟ ಉದ್ದಿಮೆಗಳು ಹೊರಟ ಹೊರತು ನಮ್ಮಿ ಜಿಲ್ಲೆಯ ಸಂಪದಭ್ಯುದಯವಾಗದೆಂದು ನಾವು ಹೇಳುವದನವಶ್ಯಕ

೨ ಚಿಕ್ಕ-ಪುಟ್ಟ ಉದ್ದಿಮೆಗಳ ಸ್ಥಾಪನೆಯ ಮೇಲೆಯೇ ನಮ್ಮ ಕಟು ಕ್ರಮವುಂಟು ಯಂತ್ರಶಕ್ತಿಯನ್ನು ನಾವು ಪ್ರೋತ್ಸಾಹಿಸುವದಿಲ್ಲ ಯಂತ್ರಶಕ್ತಿಗೆ ಭಂಡವಲು ಹೆಚ್ಚು ಬೇಕು. ಜಾಲಕರ ಕರ್ಖಾನೆಶಕ್ತಿಗೂ ಕುಂದು ಬರುತ್ತದೆ ' ಹರಿಜನ ' ಪತ್ರಿಕೆಯಲ್ಲಿ ಶ್ರೀ॥ ವ್ಯಾಧಿಲಾಲರು ನ್ಯೆಯೂರಿನೊಳಗಿನ ಅವಸ್ಥಾಂತರವನ್ನು ಅಲ್ಲೇಖಿಸಿದ್ದಾರೆ ದೊಡ್ಡ ಬಳ್ಳಾಪುರವೆಂದರೆ ಮೈಸೂರಿನೊಳಗೆ ರೇಶಿಮೆ ವಸ್ತ್ರ ಕೈಗಾರಿಕೆಯ ಕೇಂದ್ರ ತರತರದ ಆರಳೆಯ-ರೇಶಿಮೆಯ ಸೀರೆಗಳು ಅಲ್ಲಿ ತಯಾರಿಕ್ಕುತ್ತವೆ ಅಲ್ಲಿಯ ರೇಶಿಮೆ ವಸ್ತ್ರಗಳೂ, ಸೀರೆಗಳೂ ಲೋಕಪ್ರಸಿದ್ಧವಿದ್ದವು ಅಂತು ಅಲ್ಲಿ ೧೮೦೦ ಮಂದಿ ನೇಕಾರರು ಹಗಲಿರುಳು ದುಡಿಯುತ್ತಿದ್ದರು ಇವರಲ್ಲಿ ೧೦೦೦ ಜನರು ರೇಶಿಮೆಯ ಕೆಲಸ ಮಾಡುತ್ತಿದ್ದರು ಎಲ್ಲರೂ ಕೈಮಗ್ಗಗಳ ಮೇಲೆ ನೇಯುತ್ತಿದ್ದರು ರೇಶಿಮೆ ನೂಲು-ವವರಿಗೆ ತಿಂಗಳಿಗೆ ರೂ. ೫೦, ಅರಳೆ ನೇಯುವವರಿಗೆ ರೂ ೩೦ ಹೀಗೆ ಪಸ್ತುತಿಯಿತ್ತು ಸಂಸಾರಿ ೯ ಗಜ ಉದ್ದ ೬ ಸೀರೆಗಳನ್ನು ನೇಯಲಿಕ್ಕೆ ಒಬ್ಬನಿಗೆ ೧ ತಿಂಗಳು ಅವಧಿ ತಗಲುತ್ತಿತ್ತು; ದಿನಾಲು ೮ ತಾಸು ದುಡಿಯ-ಬೇಕಾಗಿತ್ತು. ೧೯೩೪ನೇ ಇಸ್ವಿಯಲ್ಲಿ ಯಂತ್ರ-ಮಗ್ಗಗಳ ಸಪ್ಲಿ-ಟಾಯಿತು ಯಂತ್ರಗಳಿಂದ ಕೂಡಲೆ ಅವ್ಯ ಗಳ ಉತ್ಪತ್ತಿ ಹೆಚ್ಚು; ತಿಂಗಳಿಗೆ ೩೦ ಸೀರೆಗಳು ಒಂದು ಯಂತ್ರದ ಮೇಲೆ ತಯಾರಾಗಪ್ರಾರಂಭವಾಯಿತು ಕೈಮಗ್ಗಗಳ ನೇಲೆ ತಯಾರಾಗುವ ಸೀರೆಗಳಿಗಿಂತ ಈ ಸೀರೆಗಳ ಬೆಲೆ ಅಗ್ಗ! ಆದರಿಂದ ನೇಕಾರರು ಯಂತ್ರ-ಮಗ್ಗಗಳನ್ನು ತರಿಸಲಾರಂಭಿಸಿದರು ೧೯೩೮ ಯಂತ್ರ ಮಗ್ಗಗಳನ್ನು ರೂ. ೧೦೦೦ ಬೆಲೆ ಸಾಲ ತಗೆದು ಯಂತ್ರ-ಮಗ್ಗಗಳನ್ನು ತರಿಸಬೇಕಾಯಿತು ಯಾಕಂದರೆ ನೇಕಾರರು ಸಾವಕಾರರಲ್ಲ. ಸೀರೆಗಳ ಉತ್ಪತ್ತಿ ಹೆಚ್ಚಿದ ಪಟ್ಟು ವಿರಾಕೆ ಆ ಮಾನದಿಂದ ಬೆಳೆಯಲಿಲ್ಲ ಆದರಿಂದ ನೇಕಾರರಿಗೆ ಮೇಲಾಟಕ್ಕೆ ಪ್ರಾರಂಭವಾಯಿತು. ಮೈಸೂರಿನಲ್ಲಿ ದರ ಇಳಿ-ಇಳಿದು, ಪಸ್ತುತ್ತ ಕಡಿಮೆಯಾಯಿ ಕು. ಕೈಮಗ್ಗ ದವರಿಗೆ ಯಾರೂ ಕೇಳದಾದರು. ೪ ೫ ವರ್ಷಗಳಲ್ಲಿ ಇವರ ಸಂಖ್ಯೆ ೫೦೦೦ಕ್ಕೆ ಇಳಿಯಿತು ಅವರಿಗೆ ತಿಂಗಳಿಗೆ ರೂ ೧೨ ಪ್ರಾಪ್ತಿ ಮಾಡಲು ಈಗ ಕಠಿಣವಾಗಿದೆ! ಕೈಮಗ್ಗದ ಉದ್ದಿಮೆ ನಷ್ಟವಾದಂತೆಯೇ ಸೈ! ಬೇರೆ ಉದ್ದಿಮೆಗೆ ಇಲ್ಲಿ ಅವಕಾಶವಿಲ್ಲ ಆದರಿಂದ ಜನರು ದೇಶಾಂತರ ಮಾಡುವ ಪ್ರಸಂಗ ಬಂದಿದೆ ಹೀಗೆ ವ್ಯಾಸಲಾಲರು ' ಹರಿಜನ ' ಪತ್ರಿಕೆಯಲ್ಲಿ ಒರೆದು, ದೊಡ್ಡ ಒಳ್ಳಾಪುರದೊಳಗಿನ ಅವಸ್ಥಾಂತರದ ಮೇಲಿಂದ ಯಂತ್ರಸಹಾಯವಾದಿಗಳು ಎಚ್ಚರಿಕ ಪಡೆಯಬೇಕಾಗಿ ಸೂಚಿಸಿದ್ದಾರೆ ನಾವೂ ಸಹ ಹಾಗೆಯೇ ಮುಂಜಾಗ್ರತೆ ಕೊಡಬಯಸುತ್ತೇವೆ. ಯಂತ್ರಗಳಿಂದ ಪದ್ಯಕ್ಕೆ ಲಾಭ ಕಂಡರೂ ಆಂಶ್ಯದಲ್ಲಿ ಅದರಿಂದ ಲೋಕಕ್ಷೇಮವಾಗುವದಿಲ್ಲ ಜನರ ಹಸ್ತಕೌಶಲ್ಯಕ್ಕಾಗಲಿ, ಬುದ್ಧಿವೈಭವಕ್ಕಾಗಲಿ ಎಡೆ ದೊರಕದೆ ಯಂತ್ರವ ದಿಯು ಯಂತ್ರವಾಗಿ ರೂಪಾಂತರ ಹೊಂದುತ್ತಾನೆ ಆದರಿಂದ ಉದ್ದಿನೆ ಯ ನ್ನು ಹೊರಡಿಸಬಯಸುವವರು ಆ ಹವ್ಯಾಸಕ್ಕೆ ಬಲಿಬೀಳಲಯಕ್ಷವ ಆಧಾರದ ಮೇಲೆ ಉದ್ದಿಮೆಗಳನ್ನು ಹಿಡಿಸುವ ಕ್ರಮವನ್ನು ಕೈಕೊಂಡರೆ ಅವರಿಗೂ ಕ್ಷೇಮ, ಲೋಕಕ್ಕೂ ಕ್ಷೇಮವಾಗಿ ಬಡತನದಿಂದ ಸಂಕಟಗ್ರಸ್ತವಾದ ಗ್ರಾಮ-ಗ್ರಾಮಾಂತರಗಳು ಉದ್ಧಾರ ಹೊಂದುವವು

೩. ಕರ್ನಾಟಕದೊಳಗೆ ಮುಂಭಾಗ ಪಂಗಡವನ್ನು ಸ್ಥಾಪನೆಯಾದ ಸಂಗತಿ ಕೇಳಿ ನಮಗೆ ವಿಷಾದವಾಗುತ್ತಿದೆ ರಾ॥ ಸಿದ್ದಪ್ಪಾ ಹೊಸಮನಿಯ ನರಂಧ್ರ ಅನುಭವಕ್ಕೆ ಪ್ರಮುಖರು ಪಂಗಡದ ಅಧ್ಯಕ್ಷರಾದ ವಾರ್ತೆಯನ್ನು ಕೇಳಿ ನವ-ಗೆ ಮಿಕ್ಕೂ ವಿಷಾದವಾಗಿದೆ. ರಾಷ್ಟ್ರೀಯ ಸಭೆಯೊಳಗೆ ಕೆಲ ಮಟ್ಟಿಗೆ ನಿರಂಕುಶ ಕಾರಭಾರವುಂಟು, ಆದರೆ ನಿಷೇಧವೆಂದು ಪ್ರತ್ಯೇಕ ಪಂಗಡವನ್ನು ಹೊರಡಿಸುವದು ನಮಗೆ ಯುಕ್ತ ತೋರುವದಿಲ್ಲ ರಾಷ್ಟ್ರೀಯ ಸಭೆಯವರು ರಾಷ್ಟ್ರೀಯ ಸಭೆಯೊಳಗಿನ ಕುಂದು-ಕೊರತೆಗಳನ್ನು ಹೋಗಲಾಡಿಸಲು ಬೇಕು-ಬೇಕಾದ ಪ್ರಯತ್ನವನ್ನು ನಡಿಸಬಹುದು ಆದರೆ ಪ್ರತ್ಯೇಕ ಪಂಗಡವನ್ನೇ ಸ್ಥಾಪಿಸಿಕೊಂಡು ಹಗಲಿರುಳು ಪ್ರತಿಯೊಂದು ವಿಷಯದಲ್ಲಿಯೂ ವಿರೋಧ-ಪ್ರದರ್ಶನ ಮಾಡುವ ಕ್ರಮವನ್ನು ನಾವು ವಿರೋಧಿಸುತ್ತೇನೆ. ಮುಂಭಾಗ ಪಂಗಡದ ತತ್ವಗಳೇನೆಂದು ಇನ್ನೂ ಯಾರಿಗೂ ಸರಿಯಾಗಿ ತಿಳಿಯದಿದ್ದಾಗ್ಯೂ, ರಾಷ್ಟ್ರೀಯ ಸಭೆಯ ದ್ವೇಷಸಾಧನೆಯೆಂದು ಅವಾಗ ಸಾಮಾನ್ಯ ಅಭಿಪ್ರಾಯವಾದಿದೆ ರಾಷ್ಟ್ರೀಯ ಸಭೆಯೊಳಗಿನ ಅಲಂಕುಪ್ಪರ ಕೂಟವದೆಂದು ನಾವು ಹೇಳಿದರೆ ವಸ್ತುಸ್ಥಿತಿಯ ವಿಪರ್ಯಾಸವಾಗದು ನುಹಾತ್ಮೆರು ನಡಿಂತೆ, ರಾಷ್ಟ್ರೀಯ ಸಭೆಯು ಅಹಿಂಸೆಯಿಂದ ಹಿಂಸೆಯ ಕಡೆಗೆ ಕ್ರಮವಾಗಿ, ಸ್ಥಿರವಾಗಿ ಕೂಚು ಮಾಡುತ್ತಿದೆಂದು ನಮಗೂ ಅನಿಸುತ್ತಿದೆ ರಾಷ್ಟ್ರೀಯ ಸಭೆಯೊಳಗೆ ಇತ್ತಿಲಾಗಿ ಅಸಹ್ಯ ಪ್ರಕಾರಗಳು ಹೆಚ್ಚೆಚ್ಚಾಗಿ ಕಲಿದೋರುತ್ತಿವೆ. ಅಸಹ್ಯರು ಅಧಿಕಾರಸ್ಥಾನಗಳನ್ನು

ಚಕ್ರಬಿಂದು

ಮಕ್ಕಳ ಮರಣವನ್ನು ತಪ್ಪಿಸುವುದು.

(ರೆಜಿಸ್ಟರ್ಡ್) (ಲಿವರ್ ಕ್ಯೂರ್)

ವಿಜಯನ್ನಿ ಕಲಕತ್ತಾ, ಮುಂಬಯಿ, ಮದ್ರಾಸ, ಬೆಂಗಳೂರು, ಮಂಗಳೂರು.

Spleen and Liver Enlargement for Children.

ಮಕ್ಕಳ ಯಕೃತ್, ಪ್ಲೀಹ, ಹೊಟ್ಟೆ ದೊಡ್ಡದಾಗುವಿಕೆ, ಹಸುರು ಸರಗಳು, ಕಾಮಿಲೆ, ಗಡ್ಡೆರೋಗ, ಕೋವೆರೋಗ, ಮೈ-ಕೈ ಬಾವುಗಳಿಗೆ ದಿವ್ಯೌಷಧ!

1 ತಿಂಗಳಿಗೆ ಸಾಕಾಗುವ ಔಷಧದ ಬೆಲೆ ರೂ 3

ಏತಕ್ಕೆ ಚಿಂತಿಸುವಿರಿ?

ಆಸೇತುಹಿಮಾಚಲದ ವರೆಗೂ 43 ವರುಷಗಳಿಂದ ಕೀರ್ತಿ ಪಡೆದಿರುವ ಮಕ್ಕಳ ಸ್ಪ್ಲೀನ ಮತ್ತು ಲಿವ್ವರ್ ವ್ಯಾಧಿಗಳಿಗೆ ಇದೊಂದೆ ರಾಜಔಷಧವಾಗಿದೆ

ಡಾ॥ ವಿ ಎನ್ ಶ್ರೀನಿವಾಸರಾವ್ ಲಿಮ್ಟೆಡ್ ಸ್ಥಕಲಿಕ್ಕ,

ಎಂ. ವಿ. ಪ್ರಾಸಾದಿಕ ಔಷಧಾಲಯ

ಶಿವಮೊಗ್ಗಾ

ಇವರಲ್ಲಿ ವಿಚಾರಿಸಿರಿ

ಶಿರಿ ವಜಂಟಿ—

ಸುಬ್ಬಾಯ ಸೀತಾರಾಮ ಹೆಗಡೆ

ಆಮಟಿಯ ವಜಂಟಿ -

ದೇವಪ್ಪಾ ಆಯ್ಯು ನಾಯ್ಕ

ಪಡೆಯುತ್ತಿದ್ದಾರೆ ಈ ಪ್ರಕಾರಗಳನ್ನು ನಾವು ನಿಶ್ಚಿತ ಲಿಕ್ಕೆ ಸಕತೋದ್ಯೋಗ ಮಾಡತಕ್ಕದ್ದು ನನ್ನ ಕರ್ತವ್ಯವೆಂದು ಅದನ್ನು ನಾವು ಮಾಡಿದೆ ರಾಷ್ಟ್ರೀಯ ಸಭೆಯನ್ನು ನಿಂದಿಸುವ ಪ್ರತ್ಯೇಕ ಪಂಗಡವೆನ್ನು ನಿರ್ಮಿಸಿಕೊಂಡರೆ, ಆದರಿಂದ ರಾಷ್ಟ್ರೀಯ ಸಭೆಯ ಗೌರವಕ್ಕೆ ಹಾನಿಯಾಗುವದಿಲ್ಲದೆ. ಮುಂಭಾಗ ಪಕ್ಷದ ಪ್ರತಿಷ್ಠೆ ಬೆಳೆಯದು. ರಾಷ್ಟ್ರೀಯ ಸಭೆಗೆ ಈಗಾಗಲೇ ಬಹಳ ಶತ್ರುಗಳದ್ದಾರೆ. ಬ್ರಿಟಿಷ ಸಾಮ್ರಾಜ್ಯಶಾಹಿಗಳು ಇನ್ನೂ ರಾಷ್ಟ್ರೀಯ ಸಭೆಯ ಮೇಲಿನ ಹಗೆ ತೊರೆದಿಲ್ಲ ಅಲ್ಪರು ರಾಷ್ಟ್ರೀಯ ಸಭೆಯ ಮೇಲೆ ಟೀಕೆ ಮಾಡಿದಾಗಲ್ಲೆ ಮುಂಬಯಿ 'ಟೈಮ್ಸ್' ಪತ್ರಿಕೆಯು ಅವರ ಉಲ್ಲೇಖವನ್ನು ಪ್ರಾಮುಖ್ಯವಾಗಿ ಮಾಡಿ ಅವರಿಗೆ ಪ್ರೋತ್ಸಾಹಿಸುವ ನಮೂನೆಯ ನ್ನು ವಿಚಾರವಂತರು ಆಭ್ಯಾಸ ಮಾಡತಕ್ಕ ವಿಷಯ ಶ್ರೀ|| ಸುಭಾಷಚಂದ್ರ ಬೋಸರಂಥ ಸಾಮ್ರಾಜ್ಯಶಾಹಿಯ ವಿರೋಧರವರು ಇದನ್ನು ಗ್ರಹಿಸಿ ಪದ್ಧೋಧಿ ಪಡೆಯ ಬೇಕಾಗಿ ನಾವು ಸೂಚಿಸುತ್ತೇವೆ

---

೪ ಪಂಡಿತ ಜವಾಹರಲಾಲರು ಮುಡಿದಂತೆ, ದೇಶ-ವಿದೇಶಗಳಲ್ಲಿ ಈವಾಗ ಕರಿಣ ಪರಿಸ್ಥಿತಿಯುಂಟಾಗಿದೆ ಸಂಘಟ್ಟಿತವಾದ ರಾಷ್ಟ್ರೀಯ ಸಭೆಯ ಪ್ರಾಬಲ್ಯದ ಮೇಲೆಯೇ ನವ್ಯ ಉದ್ಧಾರ ಅವಲಂಬಿಸಿರೆಂಬುದಿ ರಿಷ್ಟ್ರೀಯ ಸಭೆಯು ಸಾಮರ್ಥ್ಯವಂತ ವೆಂದು ಲೋಕಕ್ಕೆ ಮನಗಾಣಿಸಿದರೆ ಹಿಂದುಸ್ಥಾನಕ್ಕೆ ರಾಜ್ಯಾಧಿಕಾರ ದೊರೆಯುವ ಸಂಭವವುಂಟು ಮುಂಭಾಗದ ಪಂಗಡವು ಎಷ್ಟೂ ದೊಡ್ಡದಾದ್ದಾಗ್ಯೂ ಅದಕ್ಕೆ ರಾಷ್ಟ್ರೀಯ ಸಭೆಯ ಪ್ರತಿಪ್ಪೆಯಾಗಲಿ ಸಾಧ್ಯವಾಗಲಿ ಎನ್ನಕ್ಕೂ ಪ್ರಾಪ್ತವಾಗುವಂತಿಲ್ಲ ರಾಷ್ಟ್ರೀಯ ಸಭೆಯಕಕ್ಷೆಯನ್ನು ರಾಷ್ಟ್ರೀಯಸಭೆಯವರೇ ಉಳಿಸಿದ ಅಪವಾದ ಬರುವಂತಿದೆ ಶ್ರೀ|| ಸುಭಾಷಚಂದ್ರ ಬೋಸರು ಅಜ್ಜರೆಲ್ಲ, ಪ್ರಾಜ್ಞರಿದ್ದಾರೆ, ಸೂಜ್ಞರಿದ್ದಾರೆ ಅವರು ಮುಂಭಾಗ ಪಕ್ಷದ ಜಟುವಟಿಕೆಗಳಿಂದುಂಟಾದ ಪರಿಣಾಮಗಳನ್ನು ಸಮಾಲೋಚಿಸಿಯುಕ್ತ ಕಂಡ ಸೆ-ಧಾರಣಗಳನ್ನು ನಡಿಸುವರಂಗಿ ನಾವು ಕೋರುತ್ತೇವೆ. ನಾವೇನೇ ಉಪಾಯ ಮಾಡಬಹುದು, ರಾಷ್ಟ್ರಸಭೆಯ ಗೌರವಹಾನಿಯಾಗುವಂಥ ಪ್ರಚಾರವನ್ನು ಶ್ರೀ|| ಸುಭಾಷಚಂದ್ರರು ನಡಿಸಲಾರದು. ಒಂಗಾಲ ಪ್ರಾಂತಿಕ ಕೊಂಗ್ರೆಸ ಕಮಿಟಿಯ ಅಧ್ಯಕ್ಷರಾಗಿರುವದರಿಂದ ಶ್ರೀ|| ಸುಭಾಷಚಂದ್ರಬೋಸರ ವರ್ತನೆಕ್ಕೆ ದೊಂಬಿಯ ರೂಪ ಬರುತ್ತದೆ ಸಂ|| ಜವಾಹರಲಾಲರು ಈ ಸಂಗತಿಯನ್ನು ಶ್ರೀ|| ಸುಭಾಷರಿಗೆ ತಿಳಿಸಿ ಅ ಭಾ ಕೊಂ. ಕ ಯ ವಿರುದ್ಧ ಪ್ರಚಾರ ಮಾಡುವದಿದ್ದರೆ ಅಧಿಕಾರತ್ಯಾಗ ಮಾಡಿರೆಂದು ಸೂಚಿಸಿದ್ದಾರೆಂದು ತಿಳಿಯುತ್ತದೆ ಶ್ರೀ|| ಸುಭಾಷಚಂದ್ರ ಬೋಸರು ಪಂ|| ಜವಾಹರಲಾಲರ ಸೂಚನೆಯನ್ನು ಮನ್ನಿಸಬಹುದಾಗಿ ನಮ್ಮ ಅಪೇಕ್ಷೆ

---

೫ ಮುಂಬಯಿ ಗವ್ಹರ್ನರಾದ ಸರ್ ರೋಜರ ಲಮ್ಮೋಯವರಿಗೆ ನಾಂವು ಮನಃಪೂರ್ವಕವಾಗಿ ಅಭಿನಂದಿಸುತ್ತೇವೆ. ಮುಂಬಯಿ ಸರಕಾರವ ಮದ್ಯ ಪಾನೋತ್ಪಾಟಣ ನಿಯವ ಗಳು ತಮ್ಮ ಅಧಿಮನೆಯಲ್ಲಿ ಫಡೆಯುವ ಸಮಾರಂಭಗಳಲ್ಲೂ ಅನ್ವಯಿಸುತ್ತವೆಂಬ ಭಾವನೆಯಿಂದ ಗವ್ಹರ್ನರರು ನೆತ ಕೊಳ್ಳುವ ನಿರ್ಧಾರ ಮಾಡಿರುತ್ತಾರೆ. ಅಧಿಮನೆಯಲ್ಲಿ ನಡೆಯುವ ಸಾರ್ವಜನಿಕ ಸತ್ಕಾರ ಸಮಾರಂಭಗಳಲ್ಲಿ ಮದ್ಯಸೇವನೆ ಎಂದಿಗೂ ಪಡೆಯದು ಕುದುರೆ-ಪಕ್ಷವಿಲ್ಲದವರಿಗೆ ಏನಿಂಶ್ರಣವಿದ್ದ ಸಮಾರಂಭಗಳಲ್ಲಿ ಕುದುರೆ-ಪಕ್ಷವಿದ್ದವರಿಗೆ ಸಹ ಮದ್ಯ ಸಿಗದು. ಗವ್ಹರ್ನರರ ಈ ದೋರಣದಿಂದ ಮುಂಬಯಿಯೊಳಗೆ ಬಹುಜನ ಸಮಾಜದ ನೋಲೆ ಒಳ್ಳೇ ಪರಿಣಾಮವಾಗಿದೆ ಮುಂಬಯಿ ಸರಕಾರದೊಡನೆ ಗವ್ಹರ್ನರರು ಅಂತಃಕರಣಪೂರ್ವಕ ಸಹಕಾರ ಮಾಡಿದ ಬಗ್ಗೆ ನಾವು ಮನಃಪೂರ್ವಕವಾಗಿ ಗವ್ಹರ್ನರರಿಗೆ ಅಭಿನಂದಿಸುತ್ತೇವೆ ಇದೇ ಪ್ರಕಾರ ಗವ್ಹರ್ನರರು ಪ್ರತಿಯೊಂದು ಸಂಗತಿಯಲ್ಲಿಯೂ ಪ್ರಧಾನ ಮಂತ್ರಿಗಳೊಡನೆ ಸಹಕಾರ ಮಾಡಿ, ಪ್ರಧಾನ ಮಂತ್ರಿಗಳ ಕೈಕೊಂಡ ಲೋಕೋದ್ಧಾರ ಕಾರ್ಯಕ್ಕೆ ಆಶ್ರಯ ಕೊಡುವರೆಂದು ನಾವು ನೆರೆ ನಂಬಿದ್ದೇವೆ.

ಲಿವ್ವರ್ ಮತ್ತು ಪ್ಲೀಹೆಗೆಳ ವಿಕಾರ, ಮಲಬದ್ಧತೆ, ಅತಿಸಾರ, ಕೆಸರು-ಮಣ್ಣಿನ ಬಣ್ಣದ ಮಲೋತ್ಸರ್ಗ, ಅಗ್ನಿಮಾಂದ್ಯ, ನಿರುತ್ಸಾಹ ಮುಖಜಯ, ಕೃಶ ಕರೀರ, ಜ್ವರ ಮೊದಲಾದ ಬೇನೆಗಳು ಬಾಧಿಸುತ್ತಿದ್ದರೆ—

ಲಿವ್ವರ್‌ಕ್ಯೂರ್

ಉಪಯೋಗಿಸಿರಿ !

ಆದರಿಂದ ಖಂಡಿತ ಗುಣವಾಗುತ್ತದೆ

ಸಾದಾ ಮತ್ತು ಮಿಶ್ರಿತ

ಹೀಗೆ ಎರಡು ಬಗೆಯ ಲಿವ್ವರ್ ಕ್ಯುರ್ ಔಷಧಗಳವೆ!

ಜಮ್ಮಿ ವೆಂಕಟೇರಮಣಯ್ಯ ಎಂಡ್ ಸನ್ಸ

ಲಿವ್ವರ ಮತ್ತು ಸ್ಪ್ಲೀನ ಸ್ಪೆಶಲಿಸ್ಟ್ಸ,

೮, ಸಲಾಯಿ ಸ್ಟ್ರೀಟ, ನ್ಯೂಲಾಪುರ-ಮಾವಿಸ

ನೋಟೀಸಿಗೆ ಜವಾಬು.

ಹಂ ವೆಂಕಪ್ಪ ಶೆಟ್ಟಿ ಸಾ|| ಕೆ.ಮಟೂ ತಾಲೂಕು ಹಳೇಹೆರವಟ್ಟು ಇವನು ಈ ಮೂಲಕ ಯಾವತ್ತೂ ಜನರಿಗೆ ತಿಳಿಯಪಡಿಸುವದೇನಂದರೆ —

ತಾ. ೧೦-೭ ೧೯೩೯ ' ಕಾನಡಾ ವೃತ್ತ ' ದಲ್ಲಿ ನನ್ನ ಮೊನ್ನಗ ಕೇಶವನು ಕೊಟ್ಟ ನೋಟೀಸು ಸಂಪೂರ್ಣ ಸುಳ್ಳು ಮಜಕೂರಿನದು ಇರುತ್ತದೆ. ನಾನು ವೃದ್ಧನಿದ್ದಾಗ್ಯೂ ಭೂಮಿಷ್ಟನಾಗಿರುವದಲ್ಲ ನನ್ನ ಒದ್ದಿ ಸರಿಯಾಗಿದೆ ನನಗೆ ಪಿತ್ರಾರ್ಜಿತ ಆಸ್ತಿಯೇನೂ ಕಿಶ್ಚಿದ್ದಿಲ್ಲಾ. ನನ್ನ ಹೆಸರಿನಲ್ಲಿರುವ ಯಾವತ್ತೂ ಆಸ್ತಿಯು ಪ ನನ್ನ ವಾಸ್ತುವ್ಯದ ಮನೆ ಹಾಗೂ ಇತರ ಕಟ್ಟೋಣ ಕೂಡಾ ನನ್ನ ಸ್ವಂತ ಸಂಪಾದನೆಯ ಅಸಿ ಯಿಂದಾಗಿರುತ್ತಿದ್ದು, ಬೇಕಾದಂತೆ ಅದರ ವ್ಯವಸ್ಥೆ ಮಾಡಲಿಕ್ಕೆ ನನಗೆ ಕಾಯದೆಯಂತೆ ಸಂಪೂರ್ಣ ಹಕ್ಕಿದೆ ಮನೆಯ ಸಂಸಾರದ ಬಗ್ಗೂ ಕೇಶವನ ಲಗ್ನ-ಕಾರ್ಯದ ಬಗ್ಗೂ ಕೂಡಾ ನಾನು ಸಾಲ ಮಾಡಿರುತ್ತಿದ್ದು ಆ ಸಾಲದ ಸಿಕಾಲೆಯ ಬಗ್ಗೆ, ನನ್ನನ್ನು ಅವಲಂಬಿಸಿರುವ ಜನರ ಚರಿತಾರ್ಥದ ವ್ಯವಸ್ಥೆ ಮಾಡುವ ಬಗ್ಗೆ ಯಾ ಪಾರಲೌಕಿಕ ಸುಖಸಾಧನೆಯ ಬಗ್ಗೆ ನನ್ನ ಆಸ್ತಿಯ ವಿಷಯೋಗ ಮಾಡಲಿಕ್ಕೆ ನಾನು ಪೂರ್ಣ ಮುಖತ್ಯಾರ ನಿದ್ದೇನೆ. ಹೀಗೆ ಮಾಡುವಲ್ಲಿ ಅಡ್ಡಿ ಮಾಡಲಿಕ್ಕೆ ಕೇಶವನಿಗೆ ಏನೊಂದೂ ಹಕ್ಕಿಲ್ಲಾ. ಆತನಿಗೆ ನನ್ನ ಆಸ್ತಿಯಲ್ಲಿ ಯಾವದೇ ತರದ ಕ್ಯಾದೇರೀ ಹಕ ಸಂಬಂಧವಿರುವದಿಲ್ಲ ಇತರ ಮಾಹಿತಿ ಬಗ್ಗೆ ಈ ಸಂಗತಿಯನ್ನು "ಕಾನಡಾ ವೃತ್ತ" ದ ದ್ವಾರಾ ಜಾಹೀರಪಡಿಸುತ್ತೇನೆ

ಕುಮಟಾ, ತಾ. ೧೪—೭—೧೯೩೯.

ಹಂ ವೆಂಕಪ್ಪ ಶೆಟ್ಟಿ

ಭಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ನಂಜನಗೂಡು ಟೂತ್ ಪೌಡರ್. (ರಿಜಿಸ್ಟರ್ಡ)

ಹಲ್ಲುಗಳನ್ನು ಶುಭ್ರವಾಗಿಡುವದರಲ್ಲೂ, ಗಟ್ಟಿಪಡಿಸುವದರಲ್ಲೂ ಜಗತ್ಪ್ರಸಿದ್ಧವಾಗಿದೆ

ಶ್ರೀಕರ ಕಸ್ತೂರೀ ಮಾತ್ರೆ. [ಪೊಟ್ಟಣಕ್ಕೆ 0-1-0

ಸುವಾಸನೆಯುಳ್ಳ ಈ ಮಾತ್ರೆಗಳು ಮಕ್ಕಳ ಮತ್ತು ದೊಡ್ಡವರ ನೆಗಡಿ, ಕೆಮ್ಮು, ಅಜೀರ್ಣ, ಜ್ವರ ಮುಂತಾದವುಕ್ಕೆ ಸಿದ್ಧೌಷಧವಾಗಿವೆ. ಬೆಲೆ 0—4—0, 0—2—0

ಶ್ರೀಕರ ಬಾಲಸಂಜೀವಿನಿ.

ಚಿಕ್ಕ ಮಕ್ಕಳ ಮಂದಜ್ವರ, ಶೀತಜ್ವರ, ಎಳವು ಇತ್ಯಾದಿ ರೋಗಗಳಿಗೆ ಸಂಜೀವನಿ. ಬೆಲೆ 0—4—0.

ದೊರೆಯುವ ಸ್ಥಳ- ಹೊನ್ನಾವರ- ಕಲ್ಯಾಣಪುರ ಬ್ರದರ್ಸ ಕಾನಟಾ.- ದೇವಪ್ಪಾ ಆಯ್ಯ ನಾಯ್ಕ, ದಿ ನ್ಯೂ ಸಜ್ಜಾಯ ವಿಜನ್ಸ್, ದಿ ಸ್ವದೇಶಿಕ ಫಾರ್ಮಸಿ.

ನಂಜನಗೂಡು ಸದ್ವೈದ್ಯಶಾಲಾ, ಬ್ರಾಂಚ್. ರಥಬೀದಿ, ನುಂಗೆಳೂರು.

ಶ್ರೀ ಷಣ್ಮುಖ ಆಯುರ್ವೇದ ಚಿಕಿತ್ಸಾಲಯ.

ಕ್ಷಯ, ಅಪಸ್ಮಾರ, ಕುಷ್ಠ, ಪ್ರಮೇಹ, ಮಹಾವಾತ ಇತ್ಯಾದಿ ಸಣ್ಣಾ-ದೊಡ್ಡ ಯಾವತ್ತೂ ರೋಗಿಗಳಿಗೆ ಔಷಧಗಳನ್ನು ಕೊಟ್ಟು ರೋಗಮುಕ್ತರನ್ನಾಗಿ ಮಾಡುವೆವು ಇದಲ್ಲದೆ ಆಯುರ್ವೇದೋಕ್ತ ಅನೇಕ ತೈಲ್ಯ, ಘೃತ, ಲೇಪ, ಭಸ್ಮಾದಿಗಳು ಸಾಂಚಾಟಕ್ಕೂ ಸಿದ್ಧವಾಗಿರುವವು

☞ ಪ್ರತ್ಯೇಕವಾಗಿ ಆರ್ಡರ ಮಾಡಿದರೆ ಆಯಾ ಔಷಧಗಳನ್ನು ತಯಾರ ಮಾಡಿ ಕೊಡುವೆವು

ಮಾಲಕ :- ಕೇ. ರಾಮು ಪಂಡಿತ, ಪೋ ಕುಮಟಾ. ಜಿ ಉ ಕಾನಡಾ

ಕಾನಡಾವೃತ್ತ.

ಮಿತಿ ಪ್ರಮಥಿ ಸಂವತ್ಸರ ಆಧಿಕ ಶ್ರಾವಣ ಶು ೧೫ ಸೋಮವಾರ

ಸಂಸ್ಥಾನಿಕರು ಮುಂಜಾಗ್ರತೆ ಪಡೆಯಬೇಕು!

ಈಗಿನ ರಾಜಕಾರಣದಲ್ಲಿ ಇತ್ತಲಾಗಿ ಸಂಸ್ಥಾನಿಕರ ವಿಷಯವೇ ಹೆಚ್ಚಿಗ್ಯಾಗಿ ತಲೆದೋರುತ್ತಿದೆ. ಹಿಂದುಸ್ಥಾನದ ರಾಜ್ಯಪಿಟ್ಟನೆಯಲ್ಲಿ ಸಂಸ್ಥಾನಿಕರ ಸ್ಥಾನವೇನು? ಸಂಸ್ಥಾನಿಕರ ನಷಾವಳಿಯೇನು? ಸಂಸ್ಥಾನಿಕರ ಅಧಿಕಾರವಚ್ಚಾಸ್ಥಿಯೆಷ್ಟು? ಇವೇ ಮೊದಲಾದ ವಿಷಯಗಳು ಚರ್ಚೆಗಿಟ್ಟುಕೊಂಡಿವೆ ಸಂಸ್ಥಾನಗಳಲ್ಲಿ ರಾಜ್ಯೀಯ ಸಭೆಯ ಸಂಗತಿಯಿಂದಿನಿಂದ ಈ ಜಂಜೆಗೆ ಒಳ್ಳೇ ಕಳೆಯೆರಿದೆ ಅದರಿಂದ ಸಂಸ್ಥಾನಿಕರಿಗೆ ರಾಜ್ಯೀಯ ಸಭೆಯ ಮೇಲೆ ಕಡು ಕೋಪ, ರಾಜ್ಯೀಯ ಸಭೆಯವರೇ ತಮ್ಮ ನಿರಂಕುಶ ಪ್ರಭುತ್ವಕ್ಕೆ ಆಡ್ಡ ಬರುತ್ತಾರೆಂದು ಸಂಸ್ಥಾನಿಕರು ಘಂಟಾಘೋಷ ರಾಜ್ಯೀಯ ಸಭೆಯವರನ್ನು ದನಿಸುತ್ತಿದ್ದಾರೆ ದೀರ್ಘ ವಿಚಾರವಿಲ್ಲದ ಬಡ ಪ್ರಜೆಗಳಗೆ ದುರುಪದೇಶ ಮಾಡಿ ರಾಜ್ಯೀಯ ಸಭೆಯನ್ನು ನಿರೋಧಿಸಹತ್ನಿಸುತ್ತಾರೆ ರಾಜಕೋಟೆದಲ್ಲಿ ಪ್ರಜಾ ಪರಿಷತ್ತಿಗ ವಿರೋಧ ಮಾಡಲು ಹಿಂತಾಸಿ ಮೊದಲಾದ ಬೇರೆ ಬೇರೆ ಜಾತಿಯವರಿಗೆ ಒಟ್ಟುಗೂಡಿಸಿ ಸಂಸ್ಥಾನಿಕರು ನಡಿಸಿದ ಅನಿಸ್ಟ ಅಸಭ್ಯ ಪ್ರಕಾರಗಳನ್ನು ನಾವಿ ಬಲ್ಲಾದ ವಿಷಯ ಮೈಸೂರಿನ ರಾಷ್ಟ್ರೀಯ ಸಭೆಯ ಅಧ್ಯಕ್ಷರಾದ ಶ್ರೀ|| ದಾಸಪ್ಪನವರು ದಿವಾಣರಾದ ಸರ್ ಮಿರ್ಜಾ ಇಸ್ಮಾಯಿಲ್‌ರವರ ಸಂದರ್ಶನ ಮಾಡಲಯಸಿದ್ದರು ವಿಜಾಂವಿನಿಮಯದಿಂದ ವಿವಾದ ವಿಷಯಗಳನ್ನು ಪರಿಹರಿಸಿಕೊಳ್ಳಬೇಕಾಗಿಯೂ ಶ್ರೀ|| ದಾಸಪ್ಪನವರು ದಿವಾಣರ ಕಡೆ ಕಳಿಕೊಂಡಿದ್ದರು ಸಂದರ್ಶನ ಕೊಡಬರುವ ದಿಲ್ಲವಾಗಿ ದಿವಾಣರು ಉತ್ತರಕೊಟ್ಟಿದ್ದಾರೆ ಪುನ ವಿಂಲೋಚಿಸಿಸಬೇಕಾಗಿ ಶ್ರೀ|| ದಾಸಪ್ಪನವರು ಪುನ ಕೇಳಿಕೊಂಡಾಗ್ಯೂ ದಿವಾಣರು ಈ ಮುಂಚೆ ಕೊಟ್ಟ ಉತ್ತರವೇ ಕೊನೆಯ ಉತ್ತರವೆಂದು ತಿಳಿದ್ದಾರೆ ಇದನ್ನು ಕೇಳಿ ನವಗೆ ತುಂಬಾ ವ್ಯಸನವಾಗಿದೆ ದಿವಾಣರಾದ ಸರ್ ವಿ ರ್ಯಾ ಇಸ್ಮಾಯಿಲ್‌ರವರು ವಿಚಾರವಂತರೆಂದೂ ಪ್ರಜಾನುರಂಜಕರೆಂದೂ ಎಲ್ಲರೂ ಹೊಗಳುತ್ತಾರೆ ಆವರೇಕೆ ಇಷ್ಟು ನಿಸ್ಕಾರಾದರೆಂದು ನಮಗೆ ತಿಳಿಯದ ಮಾತು

ಆದರೆ ಒಂದು ಮಾತನ್ನು ನಾವು ಸಂಸ್ಥಾನಿಕರಿಗ ಹೇಳಬಯಸುತ್ತೇವೆ ಈಗಿನ ಕಾಲಮಾನ ತಿರಿ ಬದಲಿದೆ ಸಂಸ್ಥಾನಿಕರು ಪೂರ್ವಕಾಲದಂತೆ ದೊಡ್ಡಿನ್ನ ವನ್ನು ಮೇರುವ ಪರಿಸ್ಥಿತಿ ಈಗ ಇರುವದಿಲ್ಲ ಕಂಲಮುಮೆ ಹೇಳಿರಿ, ಮಹಾಸ್ಥರ ಪುಣ್ಯಪ್ರಭಾವ ಹೆ ೬ರಿ, ನಿ ಶಕ್ತ-ಅಸಹಾಯ ಪ್ರಜೆಗಳು ಹೀನರೆಂದು ತಾತ್ಸಾರ ಮಾಡಲ್ಪಡ ವರು ಈಗ ದಿಟ್ಟರಾಗಿದ್ದಾರೆ, ಸಮರ್ಥವಂತರಾಗಿದ್ದಾರೆ ಸಂಸ್ಥಾನಿಕರಿಗೆ ಕಣ್ಣಚ್ಚಿ ವಿಧೇಯರಂಗಿ ನಡಕೊಳ್ಳುವ ಕಂಲ ಈಗ ಹಿಂದಂಗಿ ಹೋಯಿತು, ಅದು ಪುನ ಹಿಂತಿರುಗಿ ಬರುವ ಲಕ್ಷಣಗಳಿಲ್ಲ ಸಂಸ್ಥಾನಿಕರು ಕಾಲ ಪ್ರವಹದ ಮರ್ಮವನ್ನು ತಿಳಿದು ವರ್ತಿಸದಿದ್ದರೆ ಮುಂದೆ ಪಶ್ಚಾತ್ತಾಪಪಡುವ ಕಂಲ ಬಂದೀತು ಮಹಾತ್ಮರು ಹರಿಜನರ ದಲ್ಲಿ ಬರೆದಂತೆ ಸಂಸ್ಥಾನಿಕರು ಪ್ರಜೆಗಳಿಗೆ ನಾಗರಿಕ ಸ್ವಾತಂತ್ರ್ಯ ಸಂಘಸ್ಥಾಪನ ಸ್ವಾತಂತ್ರ್ಯ ಪತ್ರಿಕಾ ಸ್ವಾತಂತ್ರ್ಯ ಪರ್ತಮಾನಪತ್ರ ಸಾತಂತ್ರ್ಯಗಳನ್ನು ತವ ಕೊಡುವದು ತೀರ ಉಚಿತ ಎಂದು ನನ್ನ ಅಭಿಪ್ರಾಯ ಅಂತೆಯೇ ತವ ಪ್ರಸಂಜ ಜರ್ಚನ್ನು ಅವರು ಇಳಿಸಿಕೊಳ್ಳಬೇಕು ಸಂಸ್ಥಾನದ ವ್ಯಕ್ತಿ ಸಂಸ್ಥಾನದ ವ್ಯಸ್ತಿ ಎಷ್ಟೂ ದೊಡ್ಡದಿದ್ದಾಗ್ಯೂ ಸಂಸ್ಥಾನಿಕರು ಪರ್ವತನ ಪಿಲ್ಲಿಕ್ಕೆ ಪಿಲ್ಲಿ ಎಂಬ ಜರ್ಜು ನಾಡಬಹುದು ಸಮಾಸ್ಯೆಯಾಗಿ ಇದು ವಿಶೇಷ ಉತ್ಪತ್ತಿಯಿದ್ದ ಸಂಸ್ಥಾನಿಕರ ಪರನಾವಧಿ ಜರ್ಚನ ಸೀವೆ ಕಡಿಮೆ ಉತ್ಪತ್ತಿಯಿದ್ದ ಸಂಸ್ಥಾನಿಕರು ತಮ್ಮ ಉತ್ಪನ್ನದ ದಶಾಂಶಕ್ಕೆ ಮಿಕ್ಕಿ ಜರ್ಚು ಮಾಡಬಾರದು ನ್ಯಾಯ ಇಂಬೆ ಸ್ವತಂತ್ರವ ಗಿರಬೇಕು ನ್ಯಾಯಾಧೀಶರು ಸಂಸ್ಥಾನಿಕರ ಮರ್ಜಿ ಸಂಪಾದಿಸುವದಕ್ಕಾಗಿ ನ್ಯಾಯದ ಮಾಡಲಾಗದು ನಿಸ್ಪೃಹತನದಿಂದ, ನ್ಯಾಯ ಹಿಡಿದು ನ್ಯಾಯಾಧಿಕಾರ ನಡಿಸತಕ್ಕದ್ದು ಸ ನ್ಮಾನಗಳಿಗಾಗಿ ನ್ಯಾಯ ಮೂಲ್ಯಜಾರದ ಅಧಿಕಾರ ನಮ್ಮ ಹೃದಯ ಟ್ಟಗಳಿರಬೇಕು ಮಹಾತ್ಮರು ನುಡಿದಂತೆ ದೊಡ್ಡ ದೊಡ್ಡ ೧ ಜಕಾರಣಕ್ಕೆ ಸಂಬಂಧಿಸುವ ಪ್ರಕರಣ ನಡೆದಾಗ ಶಿಕ್ಷೆ ನ್ಯಾಯ ದಾನದ ನಮೂನಗಳನ್ನು ಅಲಜ್ಜೆ ನೂಡಿದರೆ, ಬ್ರಿಟಿಶ ಯುಕ್ತಕೋಟು ಗಳು ಒಂದೇ ನ್ಯಾಯದೃಷ್ಟಿಯ ಂದಲೇ ತಮ್ಮ ಕೆಲಸ ನಡಿಸುತ್ತವೆಂದು ಯಾರೂ ಒಪ್ಪಕ್ಕಂಥ ಮಾತು ಹೈಕೋರ್ಟ್‌ಗಳಿಗೆ ಸಂಸ್ಥಾನಗಳೊಳಗಿನ ಕೋರ್ಟುಗಳು ಅಧೀನವಾಗಿದ್ದರೆ ಸಂಸ್ಥಾನ ಕೋರ್ಟ್‌ಗಳಲ್ಲಿ ನಿರ್ಮಲ ನ್ಯಾಯದಾನದ ಹೊಣೆಗಾರಿಕೆಯುಂಟಾಗಿ ಜನರ ದೊಳಗೆ ಒಂದು ಪ್ರಕಾರದ ಸುರಕ್ಷಿತತೆ ನಲೆಗೊಳ್ಳುವದಂಬದರಲ್ಲಿ ಸಂದೇಹವಿಲ್ಲ ಆವಾಗ ಸಂಸ್ಥಾನಗಳಿಗಿನ ನ್ಯಾಯದಾನದ ವಿಚಾರ ಮಾಡಿದರೆ ವನಸ್ಸು ಬೆಸರಗೊಳ್ಳುತ್ತದೆ ನಿಜ ಮರಾಜ್ಯದಲ್ಲಿಯೂ, ಕೊಲ್ಹಾಪುರದಲ್ಲಿಯೂ, ೧ ಜ ಕೋಟಿ ಜಯಪುರಗಳೊಳಗಿನ ನ್ಯಾಯಸ್ಥಾನಗಳನ್ನ ನ್ಯಾಯಸ್ಥಾನಗಳ ಮೂಲಕ ನಡೆಯುವ ಅನ್ಯಾಯಗಳನ್ನೂ ಅವುಗಳ ಮೂಲಕ ನಿಸ್ಪಕ್ಷಪಾತ ನಿರನಂಧಿ ಪ್ರಜೆಗಳಿಗೆ ಒದಗುವ ಉಪದ್ರವಗಳನ್ನೂ ಪರ್ಯಾಲೋಚಿಸಿದರೆ ಮನಸ್ಸು ಹೇಸುತ್ತದೆ. ಇಂಥ ಪ್ರಕಂಗಳಿಂದಲೆ ಸಂಸ್ಥಾನಿಕರು ಲೋಕಪ್ರಭೇಗಿ ಕಾರಣರಾಗಿದ್ದಾರೆ ನ್ಯಾಯದ ನಿಷ್ಪಕ್ಷಪಾತ ಪ್ರಭುತ್ವವಿರುತ್ತವಾಗಿ ಜನರ ಭ ವನೆಯು ದರೆ ಅಷ್ಟರ ಮಟ್ಟಿಗೆ ಜನರು ಸ ರಕ್ಷಿತರಾಗಿರುತ್ತಾರೆ ಸಂಸ್ಥಾನಿಕರು ಅಷ್ಟರಮಟ್ಟಿಗೆ ಪ್ರಜೆಗಳಲ್ಲಿ ಗೌರವ ಪಡೆಯುತ್ತಾರೆ ಮಹಾತ್ಮರು ಸೂಚಿಸಿದ ಸೂಚನೆಯನ್ನು ಸಂಸ್ಥಾನಿಕರೂ ಬ್ರಿಟಿಶ ಸರಕಾರವೂ ದೀರ್ಘವಾಗಿ ಸಮಾಲೋಚಿಸಿ ಸಂಸ್ಥಾನಿಕರೊಡನೆ ಮುಂಡಿಕೊಂಡ ಒಡಂಬಡಿಕೆಯ ಪತ್ರಗಳಲ್ಲಿ ತಕ್ಕ ಏರ್ಪಾಟುಗಳನ್ನು ಒದಗಿಸಿ ಶರುವಂಗಿ ನವ್ಯ ಕೋರಿಕೆ

ರಾಷ್ಟ್ರೀಯ ಸಭೆಯನ್ನು ಸಂಸ್ಥಾನಿಕರು ದುರ್ಲಕ್ಷಿಸುವ ದುಷ್ಟಟ ತೀರ ಗರ್ಹಣೀಯವಾದುದು ಸಂಸ್ಥಾನಗಳಲ್ಲಿ ರಾಷ್ಟ್ರೀಯ ಸಭೆಯವರಿಗೆ ತಾಳ್ಮೆಯಿಂದ ವರ್ತಿಸಬೇಕಾಗಿ ರಾಷ್ಟ್ರೀಯ ಸಭೆಯು ವಿಧಿಸಿದ ಅಪ್ಪಣೆಯನ್ನು ಸಂಸ್ಥಾನಿಕರು ಅನ್ವಧಾ ಎಣಿಸಿ ರಾಷ್ಟ್ರೀಯ ಸಭೆಯ ತಾತ್ಸಾರ ಮಾಡುತ್ತಾರೆಂದು ತಿಳಿದಂ ನಮಗೆ ವ್ಯಸನವ ಗುತ್ತದೆ ಸಂಸ್ಥಾನಗಳೊಳಗಿನ ರಾಷ್ಟ್ರೀಯ ಸಂಸ್ಥೆಗಳು ನಿರ್ಬಲವಾದವೆಂದು ಸಂಸ್ಥಾನಿಕರು ಎಣಿಸಿದರೆ ವಸ್ತುಸ್ಥಿತಿಯ ವಿಪರ್ಯಾಸವ ದೀತು ಒಬ್ಬಿಪ್ಪರ್ವಕವಂಗಿ ಸಶಕ್ತರೀಲ ರಂಗುವ ಪ್ರವೃತ್ತಿ ಬೇರೆ, ನಿರ್ಬಲತೆಯಂದ ಕಾರ್ಯ ಶೂನ್ಯತೆ ಹೊಂದುವ ಲಕ್ಷಣ ಬೇರೆ

ಪಿಟಾರವಂತ ಸಂಸ್ಥಾನಿಕರು ಇವುಗಳೊಳಗಿನ ಭೇದ ತಳಕೊಂಡು ವರ್ತಿಸದಿದ್ದರೆ ಅತ್ಯೇಮವಾಗಿನ ಭೀತಿಯುಂಟು ರಾಷ್ಟ್ರೀಯ ಸಭೆಯವರು ವಿಧಿಸಿದ ತಂಳ್ಮೆಯ ಆಜ್ಞೆಯನ್ನು ಸಂಸ್ಥಾನಗಳೊಳಗಿನ ರಾಷ್ಟ್ರೀಯ ಸಭೆಯವರು. ನಿರಂತಾಂಯಿಂದ ಪಾಲಿಸುತ್ತಿದ್ದಾರೆ ಮುಂದಿನ ಸಂಗ್ರಾಮದ ತಯಾರಿಯೆಂದೆಣಿಸಿ ವಾಲಿಶತಕ್ಕೆದ್ದಿಂದು ಆ| ಭಾ| ಸಂಸ್ಥಾನ ಪ್ರಜಾಪರಿಷತ್ತಿನ ಅಧ್ಯಕ್ಷರಾದ ಪಂ|| ಜವಾಹರ್‌ಲಾಲರವರು ಅಪ್ಪಣೆ ನೂಡಿದ್ದಾರೆ ಮಹಾ ಕಾರ್ಯಕ್ಕಾಗಿ ಬಹಳ ತಯಾರಿ ನಡಿಸತಬೇಕೆಂದು ಪಂ|| ಜವ ಹರಲಾಲರು ಸದ್ಯೋಭೆ ಮಾಡತ್ತಾರೆ ಸಂಸ್ಥಾನಿಕರು ಇದಿಗಲೇ ಎಚ್ಚರಿಕೆ ಪಡೆಯಬೇಕು ಪ್ರಜೆಗಳ ಸ್ವಾತಂತ್ರ್ಯಸಂರಾಣ ದಕಾಂಕ್ಷೆ ಅಳದುಹೋಯಿತೆಂದು ಸಂಸ್ಥಾನಿಕರು ಎಂದಿಗೂ ಎಣಿಸಲಾಗದು ಹಿಂದು ಸ್ಥಾನದ ರಾಜಕ ರಣದಲ್ಲಿ ರಾಷ್ಟ್ರೀಯ ಸಭೆಯನ್ನು ಗಣಿಸಬಾರದೆಂದು ಸಂಸ್ಥಾನಿಕರ ಭ ವನೆಯಾದರೆ ಅದು ತೀರ ತಪ್ಪು ೧ ರ್ಷೀಯ ಸಭೆಯು ಇನ್ನೂ ಸ ಮರ್ಥವಂತ ಸಂಸ್ಥೆಯಾಗಿರುವದಾಗಿಯೂ ಅದನ್ನೆ ಪಾರಿಯೇ ಗಣಿಸಿ ಸಂಸ್ಥಾನಿಕರು ತಮ್ಮ ನಡಾವಳಿಯನ್ನು ತಿದ್ದಿಕೊಳ್ಳತಕ್ಕದ್ದಾಗಿಯೂ ಮಹಾತ್ಮರು ಸಂಸ್ಥಾನಿಕರ ಕಡೆ ಅಂಗಲ ಚಿ ನ್ಯಾಧಿಸಿಕೊಳ್ಳುತ್ತಿದ್ದಾರೆ ಅಹಿಂಸೆಯ ವ್ಯವ ರಗಳಿಂದ ನಿರ್ಬಲತೆಯ ತರ್ಕಗಳನ್ನು ಹೊರಡಿಸಿ ಪ್ರಜೆಗಳಗೆ ಕಾಂಡಿದರೆ ನ್ಯಾಯದಂತೆ ಪ್ರಜೆಗಳಗೆ ಸಿಗಬೇಕಾದ ಪೂಜ ಧಿಕಾರಗಳನ್ನು ಅಲ್ಲಗಳೆದಿದೆ ಅನರ್ಥಪ್ರಾಪ್ತಿಗುವದಾಗಿ ಮಹಾತ್ಮರು ಎಚ್ಚರಿಕೆ ಕೊಡುತ್ತಾರೆ ಸಂಸ್ಥಾನಿಕರು ದುಂಡಂಗ ಬಲಿಬೇಕಲ್ಲಾಗದು ನಿರಂಕುಶ ಪ್ರಭುತ್ವವನ್ನು ದೈವಪಡಿಸಿಕೊಳ್ಳುವದಕ್ಕಾಗಿ ಸಾನ್ಯಾಧ್ಯಾಪಿಂಡಿನಿಂದ ಆಶ್ರತ್ವ ಬೇಸುವ ಗೊಡವೆಗೆ ಹೋಗಕಾಡದು ಆರಿಯದ ಪ್ರಜೆಗಳ ದುರುಪದೇಶ ಮಾಡಿ, ಸಭೆಯರು ತಿಪ್ಪರು ಸಡಿಸುವ ಲೋಕಾಭಿಕಾರ ಅಂಗೂಲನಕ್ಕೆ ನಿರ್ಬಂಧಗಳನ್ನ್ಯೊಡ್ಡಿಕೂಡದು ಇದರಿಂದ ತಂತ್ಕಾರ್ತಿಕವಾಗಿ ಲ ಭ ಕಂಡರೂ ಅಂತ್ಯಕ್ಕೆ ಸ್ಥೈರ್ಯವಿಲ್ಲ ಗುತಾಕಂದರೆ ಈಗಿನ ವ ವ್ಯಂತರವೇ ಪ್ರಜಾ ಪ್ರಭುತ್ವದ ಮನ್ವಂತರ ಧರ್ಮಕ್ಕೆ ವಿರುದ್ಧವಾಗಿ ವರ್ತಿಸಿ ಯಾರಿಗೆ ನರೂ ಕ್ಷೇಮವಾದದ್ದುಂಟೇ?

ಜರ್ಮನಿಯಲ್ಲಿ ವಿಶ್ರಾಂತಿಕಾಲ ಇದೀಗ!

[ನಿರೀಕ್ಷಕನು ಬರೆದದ್ದು]

ನನಗೊಳ್ಳೇ ವಿನೋದವೆನಿಸುತ್ತಿರೆ ಜರ್ಮನಿಯೆಗೆ ಈವಾಗ ಎಲ್ಲರೂ ವಿಶ್ರಾಂತಿ ಪಡೆಯುತ್ತಿದ್ದಾರೆ ರಾಜಕೀಯ ಅಧಿಕಾರಿಗಳೂ ಸೈನ್ಯಾಧಿಕಾರಿಗಳೂ ಒಮ್ಮೆಲೇ ವಿಶ್ರಾಂತಿ ಪಡೆಯಹೋಗಿದ್ದಾರೆ ಹಿಟ್ಲರನು ಬರ್ಚ್‌ಟ್ಸ್‌ಗಾ ಗ್ರಾಮಕ್ಕೆ ಹೋದನು ಅಲ್ಲಿ ಆತನು ಸ್ಕೈರೇಬರ್ಗ, ಟನಂಎಗ ಸಭೆಗಳಲ್ಲಿ ಮಾತಾಡಕ್ಕ ಭಾಷಣಗಳನ್ನು ತಯಾರಿಸುವನಂತೆ ಸೇನಾಪತಿ ಬ್ರುಚ್ಟೆಸ್‌ಗಾರವರೂ ಹಿಟ್ಲರನ ಪ್ರತಿನಿಧಿಗಳಾದ ರಿಬೆನ್‌ಟ್ರೊಪ್ಪರವರೂ ವಿಶ್ರಾಂತಿ ಪಡೆಯಹೋಗಿದ್ದಾರೆ ಇತರ ಪ್ರಧಾನರೂ ಸೈನ್ಯಾಧಿಕಾರಿಗಳೂ ರಜೆ ಕೊಂಡು ಹೋಗಿದ್ದಾರೆ ಬರ್ಲಿನ್‌ದೊಗಿನ ವಿಲ್ಹೇಮ್ ಜರ್ಮನ ಪ್ರಧಾನನ ಎಂಥ ಕಡೆಂಗಾ ಮುಚ್ಚಿಕೊಂಡೀ ಎದೇನು ಚಮತ್ಕಾರವೆಂದು ನನಗೆ ತಿಳಿಯದ ಮಾತು ಬ್ರಿಟನ್, ಫ್ರಾನ್ಸ್, ಪೋಲಂಡ ಸರಕಾರಗಳಂತು ಆಚೆ ಈಚೆ, ಸುತ್ತುಮುತ್ತು ಯುದ್ಧ ತಯಾರಿಯಲ್ಲಿ ತೊಡಗಿದುವಾಗ ಹಿಟ್ಲರು ವಿಶ್ರಾಂತಿ ಪಡೆಯುವ ನೋಟ ನಿಜವಾಗಿ ಚಮತ್ಕಾರಿಕ ವಾದುದು! ಡೆಂಝಿಗದೊಳಗಂತು ಭಯಂಕರ ಗಡಿಬಿಡಿ ಡೆಂಝಿಗವು ಬ್ರಿಟಿಷ್ ಸಾಮ್ರಾಜ್ಯದಲ್ಲಿ ಸೇರಲೇ ಬೇಕೆಂದೂ, ಅಲ್ಲಿಯ ಯೋಧರು ನಿರ್ನಾಮ ಹೊಂದಬೇಕೆಂದೂ ಡೆಂಝಿಗದೊಳಗಿನ ಜರ್ಮನ್ ಪ್ರಮುಖರಾದ ಫ್ರೌಶ್ಚರರವರು ಒಳ್ಳೇ ಆನೇಶದಿಂದ್ ಕಳೆದ ರವಿವಾರ ತಾರೀಖಿಗೆ ಭಾಷಣ ಮಾಡಿದ್ದಾರೆ ಬ್ರಿಟಿಷ ಪತ್ರಿಕೆಯವರು ಸುಳ್ಳು ವಿಧಾನಗಳನ್ನ ಮಾಡಿ ತಮ್ಮ ವಿರುದ್ಧ ಆಪಪ್ರಚಾರ ಮಾಡುತ್ತಾರಂಗಿಯೂ ನಿನಾದರೂ ಸತ್ಯಪ್ರಚಾರ ಮಾಡಲೆಂತಲೂ ಸೈನಿಕನೊಬ್ಬನು ಬ್ರಿಟಿಷ ಪತ್ರಿಕಾಪ್ರತಿನಿಧಿಯ ಮೇಲೆ ಹೌಹಾರಿ ಉದ್ಗರಿಸಿದನಂತೆ! ಡೆಂಝಿಗದ ಮೇಲೆ ದಾಳಮಾಡುವದಕ್ಕಾಗಿ ಜರ್ಮನರು ಬಳಯಲ್ಲಿರುವ ಬೆಟ್ಟಿದ ಮೇಲೆ ತಯಾರಿ ನಡಿಸುತ್ತಿದ್ದಾರೆ. ಅಲ್ಲಿ ಯಾರಿಗೂ ಸುಳಿಯಗೊಡುವದಿಲ್ಲ ವಿಚಾರಿಸಲು, ಮಕ್ಕಳಿಗಾಗಿ ಆಟದ ಬೈಲು ಕಟ್ಟಿಸುತ್ತೀವಾಗಿ ಹೇಳಿದರು! ಇದರಿಂದ ರೈಟರ ವರ್ತಾನ್-ಹೆಕರಿಗೆ ಸಮಾಧಾನವಾಗಲಿಲ್ಲ ಆವರು ಹೋಗಿ ನೋಡಲು, ಅಲ್ಲಿ ಕೋಟೆ ಕೊತ್ತಲಗಳು ಕಟ್ಟಲ್ಪಡುತ್ತಿದ್ದವು ತೋಪು-ಬಾಚಿಕೆಗಳು ವಿರಿಸಲ್ಪಡುತ್ತಿದ್ದವು ಮುಳ್ಳುಬೇಲಿ ಕಟ್ಟಲ್ಪಡುತ್ತಿತ್ತು. ಕಂದಕಗಳು ಅಲ್ಲಲ್ಲಿ ತೋಡಲ್ಪಟ್ಟಿವೆ ಭಾವಚಿತ್ರ ಕೊಳ್ಳಹೋದ ಇಬ್ಬರ ಕೆಮರಾ ಕನ್ನಡಿಯನ್ನು ಕಾವಲುಗಾರರು ಒಡೆದು ಚೂರು ಮಾಡಿದರು ಸುದ್ದಿಗಾರರು ಹೊರಬಿದ್ದು ನೋಡ ನೋಡುತ್ತಾ ಜಮು ನ್ ಸೈನ್ಯ ಇಲಾಖೆಯ ಗಂಭೀರ ನೋಟುಗಾರರು 'ಆಟದ ಬೈಲಿ' ಕೂಡು ಮಾಡಿದವು ಇಲ್ಲಿ ಗಡಿಯಾರಗಳ ಮರೆಗೆ ಅಡಿಗೆ ಮನೆಗಳು ಕಟ್ಟಲ್ಪಟ್ಟಿವೆ ಸೈನಿಕರಿಗೆ ಯುದ್ಧಕಾಲದಲ್ಲಿ ಇಲ್ಲಿಂದಲೇ ಆಹಾರ ಪೂರೈಸಲ್ಪಡುವದು ಡೆಂಝಿಗಿನ ಮೇಲೆ ಜರ್ಮನಿಯು ದಂಳ ಮಾಡಿದರೆ ಅದಕ್ಕೆ ತಾವು ನೆರವಾಗುವದು ಖಂಡಿತ ಮಾತೆಂದು ಬ್ರಿಟಿಷ ಮುಖ್ಯ ಪ್ರಧಾನಂದ ಚೆಂಬರಲೇನರವರು ಸೋಮವಾರ ಪಾರ್ಲಿಮೆಂಟಿನಲ್ಲಿ ನುಡಿದು ಬ್ರಿಟಿಷ ರಾಷ್ಟ್ರದ ನಿರ್ಧಾರವನ್ನು ಸ್ಪುಟಗೊಳಿಸಿದ್ದಾರೆ ಡೆಂಝಿಗಿನ ಮೇಲೆ ಹಿಟ್ಲರನು ಪಾಗಿ ಬಂದರೆ ಏನಾಗುಗನ್ನು ತಾವು ಕಳುಹುವ ವಿವರವು ಮಾಡಿರುವೆವೆಂದಿಯೂ ಜೆಂಬರ್ಲೇನ್ನರು ನುಡಿಯುತ್ತಾರೆ ಕಳೆದವಾರ ಪಾರ್ಲಿಮೆಂಟಿನಲ್ಲಿ ವಿಮಾನಗಳಗ, ಹಡಗುಪಡೆಗಳ ಸೈನಿಕರ ಕವಾಯತು ನಡೆಯಿತು ಈ ಕವಾಯಿತಿನಲ್ಲಿ ಬ್ರಿಟಿಶರು ಸೇರಿದ್ದರು ಮಹಾಯುದ್ಧದ ತರುವಾಯ ಬ್ರಿಟಿಷ ಫ್ರೆಂಚರು ಸೇರಿ ಸೈನ್ಯ ಕವಾಯಿತು ನಡಿಸಿದ್ದು ಇದೇ ಮೊದಲನೇ ಸಲವೆಂದು ಸುದ್ದಿಗಾರರು ಈ ಸಂಬ್ರಮವನ್ನ ವರ್ಣಿಸುತ್ತಾರೆ ಈ ಕವಾಯತಿಗಾಗಿ ಲಂಡನ್ನಿಂದ ನಿಮಾನುಗಳು ಹಾರಿ ಬಂದು ನೆಲಕ್ಕಿಳಿಯದೆ ಕವಾಯತು ನಡಿಸಿ ಹಾಗೆಯೇ ಮರಳಿ ಲಂಡನ್ನಿಗೆ ಹಾಂದವು ವಿಮಾನಿಗಳ ಶಕ್ತಿ ಪ್ರದರ್ಶನವಾದದ್ದು ಜರ್ಮನರು 'ಗಾ' ಡೆಂಝಿಗದ ಮೇಲೆ ಡಾಳಯಾದರೆ ಇಂದ ವಿಮಾನಿಗಳೇ ಲಂಡನ್ನಿನಿಂದ ಹಾರಿ ಹೋಗುವವಾಗಿ ಬ್ರಿಟಿಶರು ಪ್ರತ್ಯಕ್ಷ ತೋರಿಸಿದರು ಇದರಿಂದ ಜರ್ಮನ್ ಪತ್ರಿಕೆಗಳು ಕೊಲಾಹಲವನ್ನೆಬ್ಬಿಸಿವೆ ನೇರವಾಗಿ ಲಂಡನ್ನಿನಿಂದ ಡೆಂಝಿಗದ ಕಡೆಗೆ ವಿಮಾನುಗಳು ಹಾರಿಹೋಗುವಾಗ ತಟಸ್ಥ ಪ್ರದೇಶಗಳು ಹತ್ತುತ್ತಾವಾಗಿಯೂ, ಆ ಪ್ರಕಾರ ಹಾರಿಹೋದಲ್ಲಿ ತಟಸ್ಥರ ತಟಸ್ಥತ್ವಕ್ಕೆ ನ್ಯೂನ್ಯತೆಯಾಗುತ್ತದಾಗಿಯೂ, ಇದು ಒಲಾತಾತ್ಯರಪೆಂದೂ ಜರ್ಮನ್ ಪತ್ರಿಕೆಗಳು ಇದಿಗಲೇ ಸಂತಪ್ತವಾಗಿ ಬಲಿಯತೊಡಗಿವೆ ಯುದ್ಧಾರಂಭದಲ್ಲಿ ಮೂರು ತಿಂಗಳ ಅನ್ನಸಾಮಗ್ರಿಯ ಪುರವರೆ ತವ್ಮ ಕಡೆ ಇರುವದೆಂಗಿಯೂ ಈ ಪುರವರೆಯನ್ನು ೫ ತಿಂಗಳ ತನಕ ಬೆಳಸುವಂತೆ ಯೋಜನೆಯಾಗುತ್ತಿದಾಗಿಯೂ ಬುಧವಾರ ಪಾರ್ಲಿಮೆಂಟಿನ ಸಭೆಯಲ್ಲಿ ಮಿ|| ಮೊರಿಸನ್‌ರವರು ಉದ್ಗರಿಸಿದರು ಏನೋ ಅವದು ಮಾಡಿದೆ ತಾವು ಇಷ್ಟು ಕಾಲ ಕಳೆಯಬಲ್ಲವಾಗಿ ಅವರು ತಿಳಿಸುತ್ತಾರೆ ಬುಧವಾರದ ಪಾರ್ಲಿಮೆಂಟಿನ ಸಭೆಯಲ್ಲಿ ೬೯೦ ಲಕ್ಷ ಪವನು ಗಳನ್ನು ಸೈನ್ಯ ಇಲಾಖೆಗೆ ಖರ್ಚು ಮಾಡಬೇಕೆಂದಿಗೊತ್ತಾಗಿದೆ ಸೈನಿಕರ ಸಂಖ್ಯೆ ೧೪೫ ಕೋಟೆ ತನಕ ಬೆಳಸುವ ತಯಾರಿ ನಡೆದಿದೆ ಇವಲ್ಲದೆ ಪೋಲಂಡ್, ತುರ್ಕಸ್ತಾನ, ರುಮೇನಿಯಾ, ಗ್ರೀಸ ಈ ನಾಲ್ಕು ದೇಶಗಳಿಗೆ ಯುದ್ಧಸಾಹಿತ್ಯ ಪೂರೈಸಿ ಕೊಳ್ಳುವದಕ್ಕಾಗಿ ಬ್ರಿಟಿಷ ಸರಕಾರವು ೬ ಕೋಟಿ ಪವನು ಪ್ರತ್ಯೇಕವಾಗಿ ತೆಗೆದಿಟ್ಟಿದೆ ಇದರಿಂದಲಾಗಿ ಸುಮಾರು ೨|| ಕೋಟಿ ಪವನು ಪೋಲಂಡಿಗೂ ಇತರ ರಕ್ಕಮು ಇತರ ಮೂರು ದೇಶಗಳಿಗೂ ಸಿಗುವದಿದೆ ಜರ್ಮನಿಯೊಳಗೂ ಇದೇ ಪ ಕಾರದ ತಯಾರಿ ನಡೆಯುತ್ತಿದೆ ಈಗ ಜರ್ಮನಿಯಲ್ಲಿ ಬೇಸಗೆ ಕಾಲ ಜರ್ಮನ್ ಎಕ್ಸಿನಿಯಾಲಯಗಳಲ್ಲಿ ರಜೆ ಕೊಲೆಜು ವಿದ್ಯಾರ್ಥಿಗಳೆಲ್ಲರೂ ಗ್ರಾಮಗಳಿಗೆ ಹೋಗಿ ಒಕ್ಕಲಿಗರಿಗೆ ಬೆಳೆ ಬೆಳಸಲು ನೆರವಾಗಬೇಕೆಂದು ವಿಧಿಸಲಾಗಿದೆ ಆ ಪ್ರಕಾರ ೩೦ ಸಾವಿರ ವಿದ್ಯಾರ್ಥಿಗಳು ಹಳ್ಳಿಗಳಿಗೆ ಹೋಗಿದ್ದಾರೆ ಎಲ್ಲರೂ ಬೇಸಾಯವನ್ನು ಬೆಳಿ ಅನ್ನಸಾಮಗ್ರಿಗಳನ್ನು ಪೂರೈಸಿಕೊಳ್ಳಲು ಪ್ರಯತ್ನಿಸುವರು ಯುದ್ಧಕಾಲದಲ್ಲಿ ಗಂಡಸರು ಯುದ್ಧ ಕೆಲಸದೊಳಗೆ ಮನ್ನಿಂಗುವದರಿಂದ ಸ್ತ್ರೀಯರಿಗೆ ಗಂಡಸರ ಕೆಲಸ ಮಾಡುವಂತೆ ಈವಾಗ ಜರ್ಮನಿಯೊಳಗೆ ಕಲಿಸುತ್ತಿದ್ದಾರೆ. ಪ್ರೌಢದೇವದಲ್ಲಿ ಸ್ತ್ರೀಯರಿಗೆ ಟ್ರೈನಿಂಗ್ ನಡಿಸಲು ಕಲಿಸುತ್ತಿದ್ದಾರೆ ಮಹಾಯುದ್ಧ ಕಾಲದಲ್ಲಿ ಈ ಪ್ರಕಾರ ವರ್ತಿಸಿದ್ದಾಗಿತ್ತು

ಮ್ಯೂನಿಕ್‌ದಲ್ಲಿ ಜರ್ಮನ್ ಸರಕಾರದ ಅಪ್ಪಣೆ ಮೇರೆಗೆ 'International Bibel Searchers' ಸಂಸ್ಥೆಯ ಸಭಾಸದರ ಮೇಲೆ ಖಟ್ಲೆ ನಡೆದಿದೆ ಈ ಸಂಸದರು ಬ್ಯಾಬಲ್ ಗ್ರೆಂಥ ಪ್ರಚಾರಿಸಿ 'ಶಕಲರಾಷ್ಟ್ರಗಳಲ್ಲಿ ಕಾಂತಿ ಸಂದೇಶ ಬೀರುತ್ತಾರೆ ಇವರ ಪ್ರಚಾರದಿಂದ ಯುದ್ಧಪ್ರವೃತ್ತಿ ಕುಂದುತ್ತದೆಂತಲೂ ಕಾಂತಪ್ರವೃತ್ತಿ ಜರ್ಮನ್ ರಾಷ್ಟ್ರಕ್ಕೆ ವಿಘಾತಕವೆಂತಲೂ ಜರ್ಮನ್ ಸರಕಾರದ ಅಭಿಪ್ರಾಯವಾಗಿ ಈ ಸಂಘದವರ ಮೇಲೆ ಖಟ್ಲೆ ಮಾಡೋಣಾಗಿದೆ ಇದಲ್ಲಿ 'Speed Troops' ವೇಗವುಳ್ಳ ಸೈನ್ಯ ಪಥಕಗಳು ಎಂಬ ಹೆಸರಿನಿಂದ ಹೊಸ ಸೈನ್ಯಪಥಕಗಳು ಸಂಘಟಿಸಲ್ಪಟ್ಟಿವೆ. ಗುರವಾರ ಹಿಟ್ಲರರಿಗೂ ಡೆಂಝಿಗ್‌ದೊಳಗಿನ ಜರ್ಮನ್ ಪ್ರಮುಖರಾದ ಹರ್ ಫ್ರೌಶ್ಚರ, ಹರ್‌ಬೂಸ್ಟಿ ಇವರಿಗೂ ತ|| ತಾಸುಗಳ ತನಕ ಡೆಂಝಿಗಿನ ಪರಿಸ್ಥಿತಿಯ ಕುರಿತು ದೀರ್ಘ ಚರ್ಚೆಯಾಯಿತು ಡೆಂಝಿಗ್‌ದಲ್ಲಿ ಜರ್ಮನ್ ಸ್ವಾನಿಯ ಒಕ್ಕಿ ಸಕಲ ತಯಾರಿಯನ್ನಿಡಬೇಕಾಗಿ ಹಿಟ್ಲರನು ತಿಳಿಸಿದ್ದಾನಾ ಗಿ ಪ್ರಕಟವಾಗಿದೆ

ಹಿಂದುಸ್ಥಾನದಲ್ಲಿಯೂ ಒಳ್ಳೇ ತಯಾರಿ ನಡೆದಿದೆ ವ್ಯಂತಕ ಸರಕಾರಗಳೂ ಹಿಂದುಸ್ಥಾನ ಸರಕಾರಗಳೂ ಒತ್ತಟ್ಟಿಗೆ ಸೇರಿ ಅಲೋಚನೆ ಮಾಡಿ ಯುದ್ಧವಾದ್ದಲ್ಲಿ ಹೇಗೆ ದೇಶರಕ್ಷಣೆ ಮಾಡಿಕೊಳ್ಳ ಬೇಕೆಂಬದರ ಕುರಿತು ಯೋಜನೆ ತಯಾರಾಗಿದೆ ಹಿಂದುಸ್ಥಾನದೊಳಗೆ 'ನಾಸಿಸುವ ವಿದೇಶಿಯರ ಗಣನೆ ಮಾಡಲ್ಪಡುತ್ತಿದೆ ಮುಂಬಯಿಯೊಳಗೆ ವೈಮಾನಿಕ ಹಲ್ಲೆಗಳಾದಲ್ಲಿ ಮುಂಜಾಗ್ರತೆ ಕೊಳ್ಳುವದಕ್ಕಾಗಿ ವೈಮಾನಿಕ ಹಲ್ಲೆದಿಂದಾಗುವ ನೇಮಿಸಲ್ಪಟ್ಟಿರು ಮುಂಬಯಿ ಸರಕಾರವು ಮುಂಬಯಿ ನಗರ ರಕ್ಷಣೆಗೆಂಗಿ ಒಂದು ಯೋಜನೆ ತಯಾರಿದೆ ಇದಕ್ಕೆ ಹಿಂದುಸ್ಥಾನ ಸರಕಾರವು ಸಮ್ಮತಿಯನ್ನಿತ್ತಿದೆ ಹಿಂದುಸ್ಥಾನ ಸರಕಾರವು ಇಡೀ ಹಿಂದುಸ್ಥಾನದ ಸಂರಕ್ಷಣೆ ಬಗ್ಗೆ ದೇಶರಕ್ಷಣೆಯ ಹುದ್ದೇದಾರರನ್ನು ನೇಮಿಸಿ ಇಂಗ್ಲಂಡಕ್ಕೆ ರವಾನೆ ಮಾಡಿದೆ ಅವರು ಅಲ್ಲಿ ಶಿಕ್ಷಣ ಪಡೆದು ಇಲ್ಲಿಕ್ಕೆ ಒರುವ ವರಿದ್ದಾರೆ ಮುಂಬಯಿಯೊಳಗೆ ಸರ್ ಕಾವಜಿ ಜಹಾಂಗೀರ, ಮಿ|| ನವಶೇರ ಭರೂಚಾರವರು ನಾಗರಿಕರಿಗೆ ಧೂಮ್ರಕವಚಗಳನ್ನು ಪೂರೈಸುವ ವಿಚಾರವು ನಡಾಡೆಯಾಗಿದೆ ಇವನ್ನು ಉಪಯೋಗಿಸುವ ಶ್ರಮವನ್ನು ಕಲಿಸುವ ಕೇಂದ್ರಗಳನ್ನು ತೆರೆದಿದ್ದಾರೆ ವಂಬಯಿಯ ಬಳಯಲ್ಲಿರುವ ಗ್ರಾಮಗಳಲ್ಲಿ ಕಂದಕಗಳನ್ನು ಕಡಿಯುವ ಅಲೋಚನೆಯಲ್ಲಿದ್ದಾರೆ ಸೆಂಟ್ ಜ್ಹೋನ್ ಶ ಸ್ರಾವಾ ಪ್ರಧಾನರವರು ವೈಮಾನಿಕ ಹಲ್ಲೆಗಳ ಸಮಯ ಜನರು ವರ್ತಿಸಬೇಕಾದ ಕ್ರಮು ತಿಳಿಸಿಹೇಳುವ ಜನರನ್ನು ತಯಾರಿಸಿಕಟ್ಟಿದ್ದಾರೆ ಉಗಾಂಡಿಯೆನರೂ, ಆಸ್ಟ್ರೇಲಿಯ

(೧೦ನೇ ಪಾನಿನ ಮೇಲೆ ಮುಂದರಿಸಿದೆ)

ಸ್ಥಾನಿಕ ವೃತ್ತಾಂತ.

ಕುಮಟಾ— ದಿನಾಲೂ ಮಳೆ ಬೀಳುತ್ತಿದೆ ಅದರೆ ಪುನರ್ವಸು ನಕ್ಷತ್ರಕ್ಕೆ ಬೀಳಬೇಕಾದಷ್ಟು ಮಳೆ ಬೀಳಲಿಲ್ಲ ನೆಂದು ಹೇಳಿದರೆ ತಪ್ಪಾಗದು ಈಗ ೪ ದಿನಗ್ಗಿಂದ ಮಳೆ ತೀರ ಕಡಿಮೆಯೇ ಕಳೆದ ಸಾರ ೮-೩೬ ಇಂಚು ಮಳೆಯಾಗಿದೆ ಮಳೆಗಾಲಕ್ಕೆ ಪ್ರಾರಂಭವಾದಂದಿನಿಂದ ಈ ತನಕ ೬೪-೬೦ ಇಂಚು ಮಳೆಯಾದಂತಾಯಿತು ನೆಟ್ಟಿಯ ಕೆಲಸ ಅರ್ಧಮರ್ಧವಾಗಿದೆ

ಈ ವರ್ಷ ಇದ್ದಿಲು ಸರ್ಪ್ಲಿಯಿಚ್ಚಿನ್ ಕಚೇರಿಯಲ್ಲಿ ದಸ್ತು ನೋಂದಣಿಯ ಕೆಲಸ ರೂಪಾಯಿಗೆ ಎಂಟಾಣೆಯಷ್ಟು ಕಡಿಮೆಯಾಗಿರುವದರಿಂದ ಸರ್ಪ್-ರಕಸ್ವಾರರ ಕಾರಕೂನರ ಸ್ಥಳವನ್ನು ತಾತ್ಕೂತಿಕವಾಗಿ ಕಡಿಮೆ ಮಾಡಲಾಗಿದೆ

ಮುರೋರ ಶಾಲೆಯೊಳಗಿನ ಹುಡುಗರಿಗೆ ತಿರುತಿರುಗಿ ಚಳಿಜ್ವರದಿ ಬಾಧೆಯಾಗುತ್ತಿರುವದರಿಂದ ವೈದ್ಯ ರಾಜಿ ಗಣೇಶ ಭಟ್ಟರು ತಾವು ಸ್ವತಃ ತಯಾರಿಸಿದ "ಮಲೇರಿಯಾ ಹಾರಿಕೇ" ಎಂಬ ಔಷಧವನ್ನು ಹುಡುಗರಿಗೆ ೩ ತಿಂಗಳು ಸಾಲುವಷ್ಟು ಶಾಲಾಧಿಕಾರಿಗಳಿಗೆ ಧರ್ಮಾರ್ಥ ಕೊಟ್ಟು ಬಗ್ಗಿ ಆ ಶಾಲೆಯ ಮುಖ್ಯೋಧ್ಯಾಪಕರು ಶಾಲೆಯ ವತಿಯಿಂದ ಸದರಿ ವೈದ್ಯರ ಆಭಾರ ಮನ್ನಿಸುತ್ತಾರೆ

ರಾ|| ಶಿವಪ್ಪ ಚಿಲಮಾ ಜಮಗಾರ ಇವರ ಅಂಗಡಿಯಲ್ಲಿ ಗೋವೆ ಸಂತಾಯು ಎರಡು ಬಾಟ್ಲಿಗಳು ಸಿಕ್ಕಿದ್ದರಿಂದ ಅವಾಗಾ ಇನ್ಸಪೆಕ್ಟರರು ಅವರ ಮೇಲೂ ಅವರ ತಮ್ಮ ಮಂಜಪ್ಪನ ಮೇಲೂ ಖಿಟ್ಟಿ ಮಾಡಿ ಕೊಟ್ಟಿದ್ದರಷ್ಟೇ ಕಳೆದ ಮಂಗಳವಾರ ಮಜಿಸ್ಟ್ರೇಟರು ತಮ್ಮ ತೀರ್ಪು ಕೊಟ್ಟು ಅಂಗಡಿಯ ಕಬಜಿದಾರನು ಮಂಜಾಧರನಾದ್ದರಿಂದ ಸರಾಯಿ ಬಾಟ್ಲಿಗಳು ಅವನ ಕಬಜೆಯಲ್ಲಿ ಸಿಕ್ಕವೆಂತ ತಿಳಿಯಬೇಕಾಗುತ್ತದೆಂತಲೂ ಇವರ ಕಬಜೆಯು ಪುರಾವೆಯಂದ ಸಿದ್ಧವಾಗಿರಬಹುದಿಲ್ಲವೆಂತಲೂ ನಿರ್ಣಯಿಸಿ, ರಾ|| ಚಮಗಾರರಿಗೆ ಬಿಟ್ಟುಕೊಟ್ಟರು, ಮತ್ತು ಮಂಜನಾಥನಿಗೆ ರೂ ೩೦ ದಂಡ ವಿಧಿಸಿದರು

ಬಂಗಾಲದೊಳಗಿನ ಕ್ರಾಂತಿಕಾರಕ ಪಕ್ಷದವರಿ ಸೇರಿ ೨೫ ವರ್ಷ ಸೆರೆಮನೆವಾಸದ ಶಿಕ್ಷೆ ವಿಧಿಸಲ್ಪಟ್ಟ ಬಾಬು ರಾಖಲ ಚಂದ್ರ ಡೇ ಎಂಬ ತರುಣರು ಕೆಲವು ದಿನಗಳಾಚೆ ಸೆರೆಮನೆಯಿಂದ ಬಿಡುಗಡೆ ಮಾಡಲ್ಪಟ್ಟರು ೧೯೩೦-೩೧-೩೨ನೇ ಇಸವಿಗಳ ಸತ್ಯಾಗ್ರಹ ಸಮರದ ಕಾಲಕ್ಕೆ ಅವರು ಕಾರವಾರ ಜೈಲಿನಲ್ಲಿದ್ದರು ಆಗ ಕಾರವಾರದಲ್ಲಿ ಸಿವ್ಹಿಲ್ ಸರ್ಜನರೂ ಜೈಲ ಸುಪರಿಂಟೆಂಡೆಂಟರೂ ಆಗಿದ್ದ ರಾ|| ಕಲ್ಲೇಶ್ವರಿಯವರೂ ದೇಯವರಿಗೂ ಪರಿಚಯವಾಗಿತ್ತು. ಈ ಜಿಲ್ಲೆಯ ಸತ್ಯಾಗ್ರಹಿಗಳಿಂದಿಗೆ ಬಿಡುಗಡೆಯಾದೊಡನೆ ರಾ|| ಕಲ್ಲೇಶ್ವರಿಯವರಿಗೆ ಭೆಟ್ಟಿಯಾಗಲು ದೇಯವರು ಅವರ ಮನೆಗೆ ಹೋದಾಗ ಅವರು ಸುಮ್ಮನಿರಲಿಲ್ಲ ಸೆರೆಮನೆಯಿಂದ

ಈ ಸಂಗಳು ಸಹ ಇಲ್ಲ! ಹಿಲ್ಲಾ ದೋರ್ಡಿನವರು ಬೆಟ್ಟ ಕಾಳಿ ಊರವರ ಕಡೆ ಇಷ್ಟು ಕಾಸ್ಸಾರೆ ಮಾಡಬಹುದೇ ?" ಇತ್ಯಾದಿ

ಹೊನ್ನಾವರ— ನಮಳೆ ಚೆನ್ನಾಗಿ ಬೀಳುತ್ತಿದೆ

ಕಸದಾ ಕನ್ನಡ ಶಾಲೆಯಲ್ಲಿ ಶಾಲೆಯ ಹುಡುಗನೇ ಒಬ್ಬನು ಕಿಡಿಕಿಯೊಳಗಿಂದ ಒಳಹೊಕ್ಕು ನಕಾಶೆ ಮುಂತಾದ ಸಾಮಾನುಗಳನ್ನು ಕದ್ದನೆಂದು ಸುದ್ದಿಯಿದೆ ಶಾಲಾಧಿಕಾರಿಗಳು ಒಬ್ಬ ಹುಡುಗನಿಗೆ ಪೋಲೀಸರ ವಶಕ್ಕೆ ಕೊಟ್ಟಿದ್ದಾರೆ ತಪಾಸಣೆ ನಡೆದಿದೆ.

ಇಲ್ಲಿಯ ಅರ್ಬನ್ ಬೇಂಕಿನ ಅಧ್ಯಕ್ಷರ ಹಾಗೂ ಕಾರ್ಯವಾಹಕರ ಚುನಾವಣೆಯು. ಹೊಸ ಗುಸ್ತ-ಮತದಾನ ಪದ್ಧತಿಯಿಂದ ನಡೆಯಲಿರುವದು. ಅಧ್ಯಕ್ಷಸ್ಥಾನಕ್ಕೂ ಕಾರ್ಯವಾಹಕ ಸ್ಥಾನಗಳಿಗೂ ಚುನಾವಣೆಗೆ ನಿಲ್ಲಬಯಸುವವರ ತಿಳುವಳಿಕೆಗಾಗಿ ಈಮೇರವಾರೆಲ್ಲರಿಗೆಬೇಕಾದ ಪತ್ರಿಕೆಗಳ ನಮೂನೆಗಳನ್ನು ಬೇಂಕಿನವರು ಪ್ರಕಟಿಸಿದ್ದಾರೆ. ಈ ಬೇಂಕು ಸ್ಥಾಪನೆಯಾಗಿ ಈಗ ಹೆಚ್ಚು ಕಡಿಮೆ ೩೦ ವರ್ಷಗಳಾದವು. ೧೯೧೯ನೇ ಇಸವಿಯಲ್ಲಿ ಅಧಿಕಾರಾರೂಢರಿಂದ ಕಾರ್ಯವಾಹಕ ಅಧಿಕಾರಿಗಳೇ ಈ ತನಕ ಅಧಿಕಾರ ನಡಿಸುತ್ತ ಬಂದಿದ್ದಾರೆ. ಇನ್ನೂ ಅಧಿಕಾರ ನಡಿಸಬೇಕೆಂಬು ಹೆಬ್ಬಾಸೆ ಅವರಿಗಿದೆ! ಬೇಂಕಿನ ಸದಸ್ಯರು ಯಾತ ಭಿಡಿಗೂ ಬಲಿಯಾಗದೆ ಬೇಂಕಿನ ಕಾರ್ಯವಾಹಕ ಸ್ಥಾನಗಳಿಗೆ ಚುನಾವಣೆಗೆ ನಿಲ್ಲಬಯಸುವವರಲ್ಲಿ ಅಧಿಕಾರಕ್ಕೆ ಬರಲಿಕ್ಕೆ ಅನುರೂಪವಾಗಿ ಹಾಗೂ ಸಾಲಗಾರ ಜನರಿಗೂ ಸದಸ್ಯರಿಗೂ ಹಿತವಾಗುವಂತೆ ಮಾರ್ಪಡಿಸಲು ಸಮರ್ಥರಿರುವ ಸಾರ್ವಾರ್ಥ ಹೊಸಬರನ್ನೇ ಕಾರ್ಯವಾಹಕ ಮಂಡಳಿಕೆ ಆರಿಸಿಕೊಡುವದು ಅವಶ್ಯಕವೆಂದು ಸದಸ್ಯರೋರ್ವರು ಸೂಚಿಸುತ್ತಾರೆ

ಹೊನ್ನಾವರದ ನಾಗರಿಕರೊಬ್ಬರು ಬರೆಯುತ್ತಾರೆ — "ನಗರ ಸಭೆಯ ದೀಪಗಳ ವ್ಯವಸ್ಥೆ ಸಮಾಧಾನಕರವಾಗಿರುವದಿಲ್ಲ. ತೆಲವು ಕಡೆ ದೀಪ ಹಚ್ಚಲೇಕಾದರೆ ೮-೮೫-ಬದಿ ಯುತ್ತದೆ, ತೆಲವು ಕಡೆ ದೀಪಗಳೇ ಕಿಳಗುವದಿಲ್ಲ! ನಗರ ಸಭೆಯವರು ಅತ್ತ ಲಕ್ಷ ಕೊಡಬೇಕು. ಇತ್ತೆಕಿಗೆ ಬಂದರೆ ದ ಮೇಲೆ ಮಿನಾ-ಬ್ಯಾಪಾರಕ್ಕೆ ಪ್ರಾರಂಭವಾಗಿದೆ. ಮಿನಾ ಗಾರರು ಮಿನಾಜೇಬಿಗೆ ಹೋಗುವವರ ಬದಲು ಧಕ್ಕೆಯ ಬಳಿಯಲ್ಲೇ ದೋಣಿಗಳನ್ನು ಇಟ್ಟು ಮಿನು ಮಾರುತ್ತಾರೆ ನಗರ ಸಭೆಯವರೂ ಕಸ್ಟಮ್ಸು ಅಧಿಕಾರಿಗಳೂ ಇದನ್ನು ಪ್ರತಿಬಂಧಿಸುವದೊತಾ ನಮ್ಮೂರಲ್ಲಿ ನಗರ ಸಭೆಯ ಮೋರ್ಟಲು ಇರುವದಿಲ್ಲ ಮೋರ್ಟಲು ಕಟ್ಟಿಸಬೇಕಾಗಿ ಎಷ್ಟು ಸೂಚಿಸಿದರೂ ನಗರ ಸಭೆಯವರು ಲಕ್ಷ ಕೊಡುವ ದಿಲ್ಲ ಮೋರ್ಟಲು ಇಲ್ಲದ್ದರಿಂದ ವ್ಯಾಪಾರಿಗಳಿಗೆ ಅನುವ ತೊಂದರೆಗಳು ಅಕ್ಷಿಪ್ತವಲ್ಲ! ಮಳೆಗಾಲದಲ್ಲಿ ಮಳೆಯ ಏಡಿ' ಬೇಸಿಗೆಯಲ್ಲಿ ದಿಣಿಸಿನ ತಾಲ! ನಗರ ಸಭೆಯವರು ಇನ್ನಾದರೂ ಒಂದು ಸಣ್ಣ ಮೋರ್ಟಲು ಕಟ್ಟಿಸುವ ಆಲೋಚನೆ ಮಾಡಬಾರದೇ ?" ಇತ್ಯಾದಿ

ಹೊನ್ನಾವರದ ಗ್ರಾಮದೇವತೆಯಾದ ಶ್ರೀ ದುರ್ಗಮ್ಮ ದೇವರ ಗುಡಿಯ ಸಾರಧಾರದಲ್ಲಿ ಬಹಳ ಅವ್ಯವಸ್ಥೆಯುಂಟಾ ಗಿರುತ್ತದೆಂದು ಭಕ್ತರೋರ್ವರು ಬರೆಯುತ್ತಾರೆ ಹಿಂದೆ ಮೊಕ್ತೇಸರರು ಪ್ರತಿ ವರ್ಷ ಭಜರು ಸಭೆ ನೇರಿಸಿ ಲೆಕ್ಕವ ನ್ನೂ ಆಭಾವೆಯನ್ನೂ ಓದಿ ಹೇಳುತ್ತಿದ್ದರು. ಈಗ ೮ ೧೦ ವರ್ಷಗಳಿಂದ ಈ ಪದಾರ ನಿಂತುಹೋಗಿದೆ! ಈಗ ವರ್ಷದಲ್ಲಿ ಉತ್ಸವ್ಸನೆವಷ್ಟಾಯಿತು, ಪರ್ವಸ್ಥಾಯಿತು ಎಂದು ತಿಳಿಯುವ ಮಾರ್ಗವೇ ಇಲ್ಲ! ಹಿಂದಿನ ಮೋಹರಬಂದ ನಾಣದ ದೇವರ ದಬ್ಬಿಯು ತುಂದಿಹೋಗಿರುತ್ತದೆಂದು ಹೊಸದೊಂದು ದಬ್ಬಿ ಮಾಡಿದ್ದಾರೆ! ದೇವಾಲಯ ಕಮಾ ಟಿಯವರು ಈ ಅವ್ಯವಸ್ಥೆಯನ್ನು ದೂರಪಡಿಸಲಾರರೇ?

ಮಂಕಿ— (ತಾ ೧೫-೭-೩೯) ಈ ವಾರ ಮಳೆ ಬಹಳ ಸುರಿಯುತ ಈಗ ಬಿರುಗಾಳಿ ಬೀಸುತ್ತಿದೆ ಗದ್ದೆ ನೆಟ್ಟಿಯ ಕೆಲಸ ಇನ್ನೂ ಮುಗಿದಿರುವದಿಲ್ಲ ಈರ್ಲ್ಲಿ ಜ್ವರ ಮುಂತಾದ ಬೇನೆಗಳು ಮೊದಲೇ ಇದ್ದವು ಈಗ ಬಪ್ಪೇ ಹೊರಕಡೆ ಬಂದು ಸೇರಿದೆ ಜನರು ಜಾಗ್ರತೆಯಿಂದ ಇರುವದೊಳಿತು.

ಸಣ್ಣಗುಂದ ಹೊಳೆಗೆ ಒಂದು ಸಂಕ ಬೇಕೆಂದು ಎಷ್ಟು ಮೊರೆಹೊಂದರೂ ಅಧಿಕಾರಿಗಳು ಕಿವಿಗೆಡುವದಿಲ್ಲ! ಜನರ ದುರ್ದೈವ ಶರಲಿಲ್ಲಿಂದೇ ಹೇಳಬೇಕು! ಮಳೆ ಭೀಳು ನಾಗ, ಹೊಳೆಗೆ ನೀರು ತುಂಬಿದಾಗ ಅಧಿಕಾರಿಗಳು ಒಂದೆ ರಡು ದಿನ ಇಲ್ಲಿ ಬಂದು ಪ್ರತ್ಯಕ್ಷ ಪರಿಶ್ಕೀಕೆ ನೋಡಿಕೊಂಡರೆ ಜನರಿಗಾಗುವ ಕಷ್ಟಗಳು ಅವರಿಗೆ ಕಣ್ಣಾರೆ ಕಾಣುತ್ತಿದ್ದವು ಅಧಿಕಾರಿಗಳು ಈ ಮೂತಿನ ಕಡೆಗಾದರೂ ಲಕ್ಷಕೊಡುವರೇ?

ಭಟ್ಕಳ— ಇಲ್ಲಿಯ ತಾಲೂಕಾ ಕನ್ನಡ ಶಾಲೆಯಲ್ಲಿ ಒಬ್ಬನೂ ಶಿಪಾಯಿಯಿಲ್ಲ! ಕಚೇರಿಯಿಂದ ಹಣ ವಗೈರೆ ತರಲಿಕ್ಕೆ ತಾಲೂಕ ಹೆಡ್ ಮಾಸ್ತರರೇ ಹೋಗಬೇಕು! ಮತ್ತು ಅಲ್ಲಿ ತಾಸುಗಟ್ಟಲೆ ಕಾಯುತ್ತ ಕೂಡ್ರಬೇಕು! ಶಿಪಾಯಿ ಇಲ್ಲಾದ್ದರಿಂದ ತಾಲೂಕ ಮಾಸ್ತರರ ಅಧೀನದಲ್ಲಿ ದ್ದ ಶಾಲೆಗಳ ಶಿಕ್ಷಕರಿಗೆ ಹೊತ್ತಿಗೆ ಸರಿಯಾಗಿ ಸಂಬಳವ ಬಟವಡೆಯಾಗುವದಿಲ್ಲೆಂಬಲೂ, ಟಪಾಲಿನ ತರ-ಬರ್ಕೋ ಣದ ಕೆಲಸವನ್ನು ಸ್ವತಃ ಶಿಕ್ಷಕರೇ ಮಾಡಬೇಕಾಗುತ್ತ ದೆಂತಲೂ ದೂರು ಶೇಖರುತ್ತಿದೆ ಶಾಲಾ ದೋರ್ಡಿನವ ರೇನೋ ಇಲ್ಲೊಬ್ಬ ಶಿಪಾಯಿಯನ್ನು ನೇಮಿಸಬೇಕೆಂದು ಠರಾವು ಮಾಡಿದ್ದಾರಂತೆ. ಠರಾವಾಗಿ ೩ ತಿಂಗಳಾಗುತ್ತ ಬಂದಿವೆಯಂತೆ! ಆದರೆ ಇನ್ನೂ ಶಿಪಾಯಿಯ ನೇಮಣೂ ಕಯಿಲ್ಲ! ಏ ಓ ಠರಾಗೆ ಶಿಪಾಯಿಯಾಗಲು ಯೋಗ್ಯ ತೆಯು ದೊರೆಯಲಿಲ್ಲವೇನೇ ?

ಸಿದ್ದಾಪುರ— ಈ ತಿಂಗಳ ಪ್ರಾರಂಭಕ್ಕೆ ಶಿಕ್ಷೀಯಲ್ಲಿ ಕೂಡಿದ ಶಿಕ್ಷೀ-ಸಿದ್ದಾಪುರ ಯಲ್ಲಾಪುರ ತಾಲೂಕುಗಳ ರೈತ ರ ಮಹಾ ಸಭೆಯಲ್ಲಿ, ಕೊಳೆ ರೋಗಕ್ಕೆ ಬೋರ್ಡೋ ಮಿಶ್ರಣ ಉಪಯೋಗಿಸುವದರಿಂದ ಕೆಲವೆಡೆ ಅಡಿಕೆ ಮರಗಳು ಕ್ರಮೇ ಣ ಸುಟ್ಟುಹೋಗುತ್ತವೆಯೆಂದೂ ಬೆಡೋರ್ಡೋ ಮಿಶ್ರಣದ ಉಳಿದಾರ ಸಮರ್ಪಕವಿರುವೆಲ್ಲೆಂತಲೂ ಒಂದು ಗೊತ್ತು

ದಿ ವೆಸ್ಟರ್ನ ಪ್ರೊವಿಡೆಂಟ
&
* ಜನರಲ್ ಎಶ್ಯೂರನ್ಸ ಕಂಪನಿ, ಲಿಮಿಟೆಡ್. *

ಹೆಡ್ ಆಫೀಸು:- ರಹಿಮತುಲ್ಲಾ ಹೌಸ, ಹೋಮಜಿ ಸ್ಟ್ರೀಟ್,

ಸರ್ ಫೆರೋಜಶಹಾ ಮೇಥಾ ರೋಡ, ಫೋರ್ಟ್, ಮುಂಬಯಿ.

ಸರ್ವ ವಿಧದ ವಿಮಾ-ಸೌಕರ್ಯಗಳುಳ್ಳ, ರೂ. ೧೦೦ ರಿಂದ ೫೦೦೦ ವರೆಗಿನ ಜೀವವಿಮೆ ಇಳಿಸುವ

ಭದ್ರ ಆಡಳಿತದ ಪ್ರಗತಿಪರ ವಿಮಾ ಕಂಪನಿ.

ಏಜನ್ಸಿ ಆರ್ಗನ್ಯಾಯ್ಸುರೆರುಃ— ಎಚ್. ಆರ್. ಪ್ರಭು, ಕುಮಟಾ.

ಕಾನಡಾ ಜಿಲ್ಲೆಯೊಳಗಿನ ಏಜಂಟರುಃ-

ಕುಮಟಾಃ-
ಎಮ್. ಆರ್ ಪ್ರಭು
ಎಸ್ ಎಲ್. ವೆರ್ಣೇಕರ.
ಎಸ್ ಎಲ್. ಶಾನಭಾಗ.

ಹೊನ್ನಾವರ.-
ಹೊನ್ನಾವರ ಬುಕ್ ಡಿಪೋ
ಎಸ್. ಕೆ. ಕಾಮತ.

ಮುಡೇಶ್ವರಃ-
ಡಿ ಆರ್. ಕಾಮತ.

ಅಂಕೋಲಾ.-
ಪಿ ಎಸ್ ಶೇಲಂಗ
ಟಿ ಎಮ್. ಹಿಕ್ಕಳೇ

ಬಿಣಗಿಃ-
ಆರ್ ಪಿ ಕಾಮತ

ಶಿರಿಃ-
ಎಮ್. ಏ ನಾಯಕ.
ಎನ್ ಕೇ ಭಗತ

ಕರ್ನಾಟಕದ ಪ್ರಮುಖ ಸ್ಥಳಗಳಲ್ಲೆಲ್ಲ ಪ್ರತಿನಿಧಿಗಳಿದ್ದಾರೆ!

ವಳಯಾಗಿದೆಯಷ್ಟೆ. ಮೇಲಿನ ಗೊತ್ತುವಳಿಗೆ ಪ್ರತ್ಯುತ್ತರ ವೆಂದು ನಿನ್ನಾಪುರದಿಂದ ರಾ| ಎಸ್ ಎಸ್ ನಾಗರಾಜ ದೀಕ್ಷೇತವಾದ ಟೀಕಾತ್ಮಕ ಲೇಖನವನ್ನು ಬರೆದು ಕಳಿಸಿರು ತ್ತಾರೆ. ಬೋರ್ಡೋ ಮಿಶ್ರಣದ ಉಸಾರ ರ ಪದ್ಧತಿಯನ್ನು ಮೊದಲು ಮೈಸೂರ ಸರಕಾರದವರು ಅಮಲಿನಲ್ಲಿ ತಂದ ರೆಂತಿಲ್ಲ, ಅವನ್ನೇ ನಮ್ಮ ಬೇಸಾಯ ಇಲಖೆಯ ಅಧಿ ಕಾರಿಗಳು ಆಮಸರಿಸುತ್ತಾರೆಂತಲೂ ಅವರು ಬರೆಯುತ್ತಾ ರೆ ಈ ಮಿಶ್ರಣದ ಪ್ರಯೋಗದಿಂದ ಆಡಿಕೆಮರಗಳು ಸುಟ್ಟು ಹೋಗುತ್ತವೆಂಬುದು ಸುಳ್ಳೆಂದು ಅವರೆ ಪ್ರತಿಪಾದಿ ಸಿ ಈ ಮಿಶ್ರಣವನ್ನು ಬೇರೆ ದೇಶಗಳಲ್ಲಿ ದ್ರಾಕ್ಷೆಯ ಬಳ್ಳಿ ಗಳ ಮೇಲೂ ಕೋಮಲವಾದ ಎಲೆ ಬಳ್ಳಿಗಳ ಮೇಲೂ ಬಾರಿಸಿ ಪರಿಣಾಕಾರಿಗಳು ಉಪಯೋಗಿಸುತ್ತ ಬಂದಿರುತ್ತ ರೆಂತಲೂ ಎಲ್ಲೂ ಅಪಾಯವೆಂದ ವಾರ್ತೆ ಕೇಳಿಬರಿಲ್ಲ ವೆಂತಲೂ ಅವರ ಅಂಬೋಣವಿದೆ ಈ ಜಿಲ್ಲೆಯಲ್ಲಿಯೂ ಕೂಡ ಮಿಶ್ರಣದ ಉಪಯೋಗವಾಗುವ ತೋಟಗಳಲ್ಲಿರುವ ಮೊಸಿನ ಬಳ್ಳಿಗಳಿಗೆ ಅಪಾಯವಾದದ್ದೂ ಕೇರುವದಿಲ್ಲ ವೆಂತ ಅದಕಾರಣ ಮಿಶ್ರಣದ ಉಪಯೋಗದಿಂದ ಅಡಿಕೆ ಮರಗಳು ಕ್ರಮವೇ ಸುಟ್ಟುಹೋಗುತ್ತವೆಯೆಂಬ ಮಾತಿ ಲ್ಲಿ ಹುರುಳ್ಳಿಲ್ಲವಾಗಿ ಅವರು ಪ್ರತಿಪಾದಿಸುತ್ತಾರೆ ಈ ಮಿಶ್ರಣ ನನ್ನು ತುತ್ತು ಮಾಡಿ ಸುಣ್ಣ ಸರಿಸ್ಪರ್ಧಾಯಾಗಿದ್ದಲ್ಲಿ ಕೂಡಿಸಿ ತಯಾರಿಸತಕ್ಕದ್ದೆಂತಲೂ, ಈ ಪ್ರಮಾಣ ಹೆಚ್ಚು ಕಡಿಮೆ ಯಾದ್ದಿರಂದ ಇಲ್ಲವೆ ನೀರಿನ ಪ್ರಮಾಣ ಕಡಿಮೆ ಯಾದ್ದರಿಂದ ಎಲ್ಲಾದರೂ ಅಪಾಯವಾಗಿರಬಹುದೆಂತಲೂ ಅವರು ಬರೆಯುತ್ತಾರೆ ಮಿಶ್ರಣದ ಉಪಚಾರದಿಂದ ಅಪಾ ಯವಾಗುತ್ತಿದ್ದಲ್ಲಿ, ಆ ಅಪಾಯವು ಉಪಚಾರದ ಹಿಂಗಾಮಿ ನಲ್ಲೇ ಆಗದೆ ೮ ೧೦ ವರ್ಷಗಳ ಮೇಲೆ ಆಗುತ್ತದೆಂದು ಕೇಳಿ ಅವರಿಗೆ ಸೋಜಿಗವಾಗುತ್ತಿದೆಯಂತೆ!! ಕೊನೆಗೆ ಲೇಖಕರು ಬೇಸಾಯ ಖಾತೆಗೆ ಒಂದು ಸೂಚನೆ ಮಾಡಿ ದ್ದಾರೆ ಉಚಳ ವರ್ಷಗಳಿಂದ ಮಿಶ್ರಣದ ಉಪಯೋಗ ಮಾಡಿರೂ ಹಾಗಾಗದೆ ತೋಟಗಳನ್ನು ಅವಕಾರಿಗಳು ಪ್ರಯಾಸು ತೋಟಿಗರಿಗೆ ತೋರಿಸಿಕೊಡಬೇಕೆಂತಲೂ, ಮಿಶ್ರ ಣವನ್ನು ಸ್ವತಃ ತಯಾರಿಸಿ ಕೊಡಬೇಕೆಂತಲೂ ಅವರು ಸೂಚಿಸುತ್ತಾರೆ

ಕಾರವಾರ— ಕಳೆದ ತಾ ಲನೆಗೆ ಮದ್ಯ ಸಾರಿಕ ಕೃತಬಂಧಕ ಸಮಿತಿಯ ಸಭೆಯಾಗಿ ಅಧಿಕಾರಿಸ್ಥರ ಹಾಗೂ ಕಾರ್ಯಕಾರಿ ಸಮಿತಿಯ ಚುನಾವಣೆಯಾಯಿತು ರಾ| ಸಿ| ತೇಲಂಗೆರವರು ಅಧ್ಯಕ್ಷರಾಗಿಯೂ, ರಾ| ಜಿ ಎಸ್ ಹೆ ಕೋಪಿಲೇಲರವರು ಉಪಾಧ್ಯಕ್ಷರಾಗಿಯೂ, ರಾ| ಬಾಸಿ ನಕುನ್ಹ ಪಕೀಲರು ಕಾರ್ಯದರ್ಶಿಗಳಾಗಿಯೂ, ರಾ| ಪದ್ಮನಾಭ ಕಾಮತ ವಕೀಲರು ಜತೆಕಾರ್ಯದರ್ಶಿ ಮತ್ತು ಕೋಷಾಧ್ಯಕ್ಷರಾಗಿಯೂ ಆರಿಸ್ಪಟ್ಟಿರುತ್ತಾರೆ ಈ ಅಧಿಕಾ ರಸ್ಥರ ಸಿನಿಸ ಕಾರ್ಯಕಾರಿ ಸಮಿತಿಗೆ ಬೇರೆ ಬೇರೆ ಜಾತಿ-ವರ್ಗಗಳ ೧೧ ಮಂದಿ ಸದಸ್ಯರು ಆರಿಸಲ್ಪಟ್ಟಿದ್ದಾರೆ ಜಿಲ್ಲಾ ಕಮಿಟಿಯು ತಯಾರಿಸಿದ ಫಲಿತೆಯು ಅವಶ್ಯವುಳ್ಳ ತಿದ್ದುಪಾಟಿಗಳ ಸಹಿತ ಸಭೆಯಲ್ಲಿ ಮಂಜೂರ ಮಾಡಲ್ಪಟ್ಟಿತು ಕಮಿಟಿಯು ಕೇಸಿಸ್ಟ್ ಅವಶ್ಯವುಳ್ಳ ಪಥಿಯನ್ನು ಸಂಗ್ರಹಿಸಬೇಕಾಗಿಯೂ ಗೊತ್ತು ವಳಿಯಾಗಿದೆ

ರಾ| ಕಿ ಧೀ ನಾಯಕ ವಗೈರೆ ಜಿಲ್ಲಾ ಮದ್ಯ-ಮಾದಕ ವ್ಯಸನಬಂಧಕ ಕಮಿಟಿಯ ಕಾರ್ಯಕರ್ತರು ಕಳೆದ ತಿಂಗಳ ಕೊನೆಯ ವಾರದಲ್ಲಿ ಈ ತಾಲೂಕಿನ ಬೇರೆ ಬೇರೆ ಹಳ್ಳಿಗಳಲ್ಲಿ ಸಂಚಾರ ಮಾಡಿ, ಇದೇ ಬರುವ ಸೆಪ್ಟಂಬರ ನಿಗೇ ತೀರಿಕ್ಷಾಂದ ಆಜ ಲಿನಲ್ಲಿ ಒರಲಿರುವ ಸರಕಾರಿ ನಿರ್ಣಾದೇಶ ಯೋಜನೆಯ ಉರಿತು ಜನರಲ್ಲಿ ಜಾಗೃತಿಯನ್ನುಂಟುಮಾಡಿದರು ರಾ| ಸುಬ್ರಾಯ ಹುಡೇದಿಪ್ಪರವರು, ರಾ| ಮಾಧವ ಶಾಸ್ತಿಭಾಗ ವಕೀ ಜಿಲ್ಲಾ ಬೋರ್ಡಿನ ಹೊಸ ಅಧ್ಯಕ್ಷರಾದ ರಾ| ಶರಿ ವೈ ಮತ್ತು ಅಬಕಾರಿ ಇನ್ಸ್ ಕ್ಟೆಕ್ಟರ ರಾ| ಪುಟೇಲ ಇವರೂ ಕಾರ್ಯಕರ್ತರ ಸಂಗಡ ಕಾರ್ಯಾಚರಿಸಿದ್ದರಿಂದ ಪ್ರಚಾರ ಕಾರ್ಯಕ್ಕೆ ತುಂಬ ಸಹಾಯ ವಾಯಿತು ಎಲ್ಲಿ ಜಾತಿಯವರು ನಿರ್ಮಾದಕ ಯೋಜನೆಗೆ ಮನಃಪೂರ್ವಕ ಬೆಂಬಲ ಕೊಡುತ್ತಿದ್ದರು ಈ ಸಂಬಾರದ ಲ್ಲಿ ಕಂಡುಬಂತು ಜೊಗೆ, ಸದಾಶಿವಗಡ ಮೊದಲಾದ ಕಡೆ ಯ ಕೈಸ್ತ ಬಾಂಧವರೂ ಕೂಡ ನಿರ್ಮಾದಕ ಯೋಜನೆಯನ್ನು ಉತ್ಸಾಹದಿಂದ ಸ್ವಾಗತಿಸುತ್ತಿದ್ದಾರೆ

ಕೊಂಗ್ರೆಸ ಸದಸ್ಯರಾಲಯವರು ಕಾರವಾರದಲ್ಲಿ ಸತ್ಯಾಗ್ರಹ ಭವನದ ಮೆ ಅಟ್ಟದ ಮೇಲಿರುವ ರಾ| ಕೊಂಗಿ ಕಮಿಟಿಯ ಆಫೀಸಿಗೆ ಮುಂಬಾಗಿ ಅರಿಂದ ೧೦ ಇಜ್ಜಿನೆ ಸಂಜೆ ಳಿಂದ ಒಳಗೆ ಬಂದು ಸದಸ್ಯತ್ವಾಗವಾಗಿ ತಾ| ಕೊಂ| ಕಮಿಟಿಯ ಕಾರ್ಯದರ್ಶಿಗಳು ತಿಳಿಸುತ್ತಾರೆ

ಮುಂಬಯಿ ವಿಶ್ವವಿದ್ಯಾಲಯದ ಎಲ್ಎಲ್ ಎಮ್ ಪರೀಕ್ಷೆಯಲ್ಲಿ ಈ ಸರ್ತಿ ಮೂವರು ತೇರ್ಗಡೆಯಾಗಿದ್ದಾರ ಅವರಲ್ಲಿ ರಾ| ಪಿಷ್ಟು ರಾಮಕೃಷ್ಣ ಭಟ್ಟ ಮತ್ತು ರಾ| ವಿಠ್ಠ ಲ ಗೋಪಾಲಿಂದ ವಾಗಳೇ ಇವರಿಬ್ಬರು ನಮ್ಮ ಜಿಲ್ಲೆಯವ ರೆಂದು ನಮೂದಿಸಲ ಅನಂದವೆನಿಸುತ್ತದೆ

ಕಳೆದ ವಾರ ಜರುಗಿದ ಮೊದಲನೇ ಕೊಂಕಣಿ ಪರಿಷತ್ತಿ ನಲ್ಲಿ ಈ ಕೆಳಗಿನವರ ಗೊತ್ತು ವಳಿಗಳಾದವು – (೧) ಯಾವ ತ್ತೂ ಕೊಂಕಣಿ ಮಾತಾಡುವ ಜನರು ತಮ್ಮ ಪತ್ರವ್ಯವಹಾರ, ಕಾಗದ-ಪತ್ರ ಮತ್ತು ಲೆಕ್ಕ ಪತ್ರ ಮೊದಲಾದ ಬಾಸಿಗ ವ್ಯವಹಾರಗಳಲ್ಲಿ ಪಾತ್ರವಿದ್ಯಾಲಯವನ್ನೇ ಉಪಯೋಗಿಸ ಬೇಕಾಗಿ ವಿನಂತಿ (೨) ಕೊಂಕಣಿ ಮಾತಾಡುವ ಪ್ರಾಯಸ್ಥ ಜನರಿಗೆ ದೇವನಾಗರಿ ಲಿಪಿಯ ದ್ವಾರಾ ಕೊಂಕಣಿ ಭಾಷೆಯ ನ್ನು ಕಲಿಸುವ ವರ್ಗಾದಿ ಮಾಡಬೇಕಾಗಿ ಸರಕಾರಕ್ಕೆ ವಿನಂತಿ (೩) ಮಾತೃಭಾಷೆಯ ದ್ವಾರಾ ಶಿಕ್ಷಣ ಕೊಟ್ಟಿಲ್ಲದ ಆದು ತರ್ಯವೇ ಪರಿಣಾಮಕಾರಿಯಾಗುತ್ತಿದ್ದದ್ದರಿಂದ, ಪ್ರೌಢ ಶಿಕ್ಷಣದ ಪುಸ್ತಕಾವಲಿಯನ್ನು ತಯಾರಿಸುವಂಗ ಕೊಂಕಣಿ ಜನರ ಉಪಯೋಗಕ್ಕೆ ಕೊಂಕಣಿ ಪುಸ್ತಕಗಳನ್ನು ರಚಿಸುವ ವ್ಯವಸ್ಥೆ ಮಾಡಬೇಕಾಗಿ ಸರಕಾರಕ್ಕೆ ವಿನಂತಿ (೪) ಮುಂಬಯಿ ಪ್ರಾಂತೀಯಮಾತಾಡುವ ಜನರ ಸಂಖ್ಯೆಯನ್ನು ಪ್ರತ್ಯೇಕವಾಗಿ ತೋರಿ ಸುವ ಪರಿಪಾಠವನ್ನು ಮುಂದುವರಿಸಬೇಕಾಗಿ ಸರಕ ರಕ್ಕೆ ವಿನಂತಿ (೫) ಕೊಂಕಣ ಜನರ ಉಪಯೋಗಕ್ಕಾಗಿ ಹೊಸ ಬೇರುವ ಪುಸ್ತಕಗಳು, ವಾರಪತ್ರಿಕೆಗಳು, ಮಾಸಿಕಗಳು ಮುಂತಾ ತ್ಪಾದಿಸುವಂತೆ ಕೊಂಕಣಿ ಮುಂಬಾಯಿವುಗಳಲ್ಲಿ ಕೊಂಕಣಿ ಭಾಷೆಯನ್ನೇ ಉಪಯೋಗಿಸಬೇಕಾಗಿ ಬೇರೆ ಬೇರೆ ಕೊಂಕ ಣಿ ಜನರ ಸಂಸ್ಥೆಗಳಿಗೆ ಸೂಚನೆ ಬರುವಂತೆ, ಕೊಂಕಣಿ ಭಾಷೆ ಗಳಿಗೆ ಸಾಮಾನ್ಯವಾದ ದೇವನಾಗರಿ ಲಿಪಿಯಿಂದಲೇ ಬರೆ ಯತಕ್ಕದ್ದಾಗಿ ನಿರ್ಣಯ (೧೦) ಕೊಂಕಣ ಜನರು ಬಹು ಸಂಖ್ಯಾಪ್ರಕಾರಿಯವರಾಗಿ ಉದುರುಗಲ್ಲಿ ಕೊಂಕಣಿ ಮಾತಾಡುವ ಮಕ್ಕಳಿಗೆ ಕೊಂಕಣಿಯಿಂದಲೇ ಪ್ರಾಥಮಿಕ ಶಿಕ್ಷಣ ಕೊಡು ವ ವ್ಯವಸ್ಥೆ ಮಾಡಬೇಕಾಗಿಯೂ, ಆ ವ್ಯವಸ್ಥೆಯಾಗುವ ತನಕ, ಹಿಂದೀ ರೊಮನಲಾದ ವಿಧಗಳಲ್ಲಾದರೂ ಕೊಂಕಣಿಯ ದ್ವಾರಾ ಕಲಿಸುವ ವ್ಯವಸ್ಥೆ ಮಾಡಬೇಕಾಗಿಯೂ ಸರಕಾರ ಕ್ಕೆ ವಿನಂತಿ (೮) ಕೊಂಕಣಿ ಮಾತಾಡುವ ಹುಡುಗರು ಕಿರುಸಂಖ್ಯಾಕರಿರುವ ಶಾಲೆಗಳಲ್ಲಿ ಕೊಂಕಣಿ ಮಾತೃಭಾಷೆ ಯ ಶಿಕ್ಷಕರನ್ನೇ ನೇಮಿಸಬೇಕಾಗಿ ವಿನ್ಹಸ (೯) ಸರಕಾರ ದಿಂದ ನೇಮಿಸಲ್ಪಟ್ಟ ಪಠ್ಯ ಪುಸ್ತಕ ಕಮಿಟಿಯವರು ಈ ವರೆಗೆ ಪ್ರಕಟವಾದ ಕೊಂಕಣಿ ಪುಸ್ತಕಗಳೊಳಗಿಂದ ಯೋಗ್ಯ ಪುಸ್ತಕಗಳನ್ನು ಆರಿಸಿ ಅವುಗಳ ಯಾದಿಯೊಂದ ನ್ನು ತಯಾರಿಸಬೇಕಾಗಿ ಸೂಚನೆ ಹೊಸ ಪಠ್ಯ-ಪುಸ್ತಕಗಳ ನಿರ್ಮಾಣಕ್ಕಾಗಿ ನೇಮಿಸಲ್ಪಟ್ಟ ಕಮಿಟಿಯ ಮೇಲೆ ಕೊಂಕಣಿ ಬಲ್ಲ ಗೃಹಸ್ಥರೊಬ್ಬರನ್ನು ನೇಮಿಸಲು ಸರಕಾರಕ್ಕೆ ವಿನಂತಿ (೧೧) ಈ ರಂಥವುಗಳನ್ನು ಸಂಬಂಧ ಪಟ್ಟ ಆಯಾ ಅಧಿಕಾರಿಗಳಿಗೆ ಯಾ ಸಂಸ್ಥೆಗಳಿಗೆ ಕಳುಹಿ ಸಿಕೊಡಲು ಕಾರ್ಯದರ್ಶಿಗಳಿಗೆ ಅಧಿಕಾರ ಕೊಡಿಸೋಣಾಗಿದೆ

ಜರ್ಮನಿಯಲ್ಲಿ ವಿಶ್ರಾಂತಿಕಾಲ ಇದೀಗ!

(೭ನೇ ಪುಟದಿಂದ ಮುಂದರಿಸಿದ್ದು)

ವರು, ಟ್ರಿಯು ಕಂಪನಿಯವರೂ ಇದೇ ಪ್ರಕಾರ ತಮ್ಮ ತಮ್ಮ ತಯಾರಿಯನ್ನು ನಡಿಸಿ ತ್ತಿದ್ದಾರೆ ಹಿಂದುಸ್ತಾನದ ಮೇಲೆ ವಿಶೇಷ ದೃಷ್ಟಿಯಿಡಲಾ ಗುವದಾಗಿ ಫೈನ್ಯೆ ಇಲಾಖೆಯ ವ್ಯಾಜ್ಯದ ಎಜೆಸುವವಿಲ್ಲನಂತೆ ಡೆಂಬ್ಲಿಯಿನ ಪ್ರತ್ಯೆಯ ಮೇಲೆ ಯದ್ಧವಾಗಲಿಕ್ಕಿಲ್ಲವಾಗಿ ಲಂಡನಿನ 'ನ್ಯೂಸ ಕ್ರೊನಿಕಲ್' ಪತ್ರಿಕೆಯ ರಾಜಕೀಯ ಸುದ್ದಿ ಗಾರರಾದ ವಿ|| ವರ್ನನ್ ಬಾರ್ಟಲೆಟ್‌ರವರು ಅಭಿ ಪ್ರಾಯಪಡುತ್ತಾರೆ. ಬಳ್ಳಾರಿಯಲ್ಲಿ ಮೊನ್ನೆ ಗುರುವಾ ರ ರಿ|| ಸಿ. ಬಿ ಹರ್ಡ, ಎಮ್ ಎ ರವರ ಒಂದು ಭಾಷಣವಾಯಿತು ಡೆಂಬ್ಲಿಗು ಪ್ರೋಲಂಡ ದೇಶದ ಮರ್ಮಸ್ಥಾನವೆಂದೂ ಅದು ಹಿಟ್ಲರನ ವಶವಾದರೆ ಇಡೀ ಪ್ರೋಲಂಡ ದೇಶ ಪರತಂತ್ರವಾದಂತೆಯೇ ಸೈ ಎಂದೂ ರಿ|| ಹರ್ಡರವರು ಉದ್ಗರಿಸಿ ಯುದ್ಧ ತೀರ ಸಮಿಸಿಸಿ ಬಂತೆಂದು ಅಭಿಪ್ರಾಯಪಟ್ಟರು

ಜರ್ಮನಿಯ ವಿಶ್ರಾಂತಿಕಾಲವು ಯುದ್ಧಪೂರ್ವ ಸ್ಥಿತಿಯೆಂದು ಟೀಕಾಕಾರರು ಟೀಕಿಸುತ್ತಾರೆ. ವಿಶ್ರಾಂತಿ ಕೊಂಡ ಹಾಗೆ ಮಾಡಿ ಅಲಿಸ್ತ್ರತೆ ಪ್ರದರ್ಶಿಸಿ ಪ್ರತ್ಯನೆ ದಾಳ ಮಾಡಿ ಸ್ವಾಪಾ ಮಾಡುವದು ಹಿಟ್ಲರ ಕಾರಸ್ಥಾನದ ಮುಖ್ಯ ಸ್ವರೂಪವೆಂದು ಒಪ್ಪವರು ಎನೆಸಿ ಈಗ ಜರ್ಮನಿಯೊಳಗೆ ಕಾಣುವ ದೊಡ್ಡ ದೊಡ್ಡ ಲೋಕಪ್ರಭುಗಳ ವಿಶ್ರಾಂತಿ ಭಯಶೂಚಕ ವೆಂದು ಎಣಿಸುತ್ತಾರೆ. ನನಗೇನೂ ಇದರರ್ಥವೇ ಹೊಳೆಯದು ಗುರುವಾರ ಕನಡಾ ದೇಶದ ಒಂಟಿರಿ ಯೋದಲ್ಲಿ ಅಂತರಿಕ್ಷದೊಳಗೆ ನಕ್ಷತ್ರ ವಾತಾವಿಯಾ ತೆಂದೂ, ಅದು ಬೀಳುವಾಗ ಸುತ್ತು ಮುತ್ತು ಬಹಳ ವೈಲುಗಳ ವರೆಗೆ ಪ್ರಕಾಶಜ್ಯೋತಿ ಬೆಳಗಿ ತೆಂದೂ, ನಕ್ಷತ್ರ ಬಿದ್ದೊಡನೆ ಪ್ರಚಂಡ ಹೊಗೆ ಉಂ ಟಾಯಿತೆಂದೂ ಒಂಟಿರಿಯೋದಿಂದ ವಾರ್ತೆ ಬಂದಿತೆ. ಇದು ಶುಭವೋ ಅಶುಭವೋ ನಾನರಿಯೆ! ತಿಳಿದ ಸಂಗತಿಯನ್ನು ತಿಳಿಸುವದಷ್ಟು ನನ್ನ ಕರ್ತವ್ಯ

ಯುದ್ಧ ತಪ್ಪಿಸಿಕೊಳ್ಳುವ ಬಗೆ ಹೇಗೆ? ಎಂಬದೇ ಇವೀಗ ವಿಚಾರ-ವಿಷಯವಾಗಿದೆ. ಡೆಂಯಿಗನ್ನು ಸ್ವಾಧೀನವಡಿಸಿಕೊಳ್ಳುವ ಕುರಿತು ಹಿಟ್ಲರನು ಕುಟಿತೊಟ್ಟಿದ್ದಾನೆಸ್ಸೋನೆ ನಿಜ, ಆದರೆ ಅದಕ್ಕಾಗಿ ಆತ್ಮ ಯುದ್ಧ ಹೂಡಲಿಕ್ಕೆ ಸಿದ್ಧನಿಲ್ಲ ಆದರೆ ಡೆಂಯಿಗನ್ನು ಕೈವಶ ಮಾಡಿಕೊಂಡನಕ ಆತನು ಬಿಡುವವನಲ್ಲ. ಜರ್ಮನಿಯಲ್ಲಿ ಈ ಧೋರಣದಿಂದಲೇ ಯಾವತ್ತೂ ವ್ಯವಹಾರಗಳು ನಡೆಯುತ್ತಿವೆ. ಡೆಂಯಿಗಿದ ಮೇಲೆ ಸಾಗಿಹೋಗಲು ಯಾವತ್ತೂ ತಯಾರಿ ಅಂತರಂಗದಿಂದ ನಡಿಸಲ್ಪಡುತ್ತಿದೆ ಮುಖ್ಯ ಸೇನಾಪತಿಗಳಾದ ಫ್ಲೋಂ ಬ್ರೌಚಿಟ್ಸಿರವರು ಗುರುವಾರ ಹಿಂದನ್‌ಬರ್ಗ ಸ್ಮಾರಕ ಸಭೆಯಲ್ಲಿ "We do not seek a conflict, but fear it still less" ನಾವು ಯುದ್ಧಕ್ಕಾಗಿ ಹಾತೊರೆಯುವವರಲ್ಲ; ಆದರೆ ಅದಕ್ಕೆ ಅಂಜುವವರೂ ಅಲ್ಲ! ಎಂಬ ಎರಡು ನಿಷೇಧಾರ್ಥದ ವಾಕ್ಯಗಳಂದ ಜರ್ಮನಿಯೋಗಿನ ಮನೋರಥಗಳನ್ನು ಸ್ಪುಟಗೊಳಿಸಿದ್ದಾರೆ ಡೆಂಯಿಗದಲ್ಲಿ ಈಗ ಯಾರಿಗೂ ಸುರಕ್ಷಿತತೆಯಿಲ್ಲ ಪ್ರತಿಯೊಬ್ಬರೂ ಆತ್ಮರಕ್ಷಣೆಯ ಚಿಂತೆಯಲ್ಲಿದ್ದಾರೆ. ಡೆಂಯಿಗ ಪಟ್ಟಿಣದ ರಕ್ಷಣೆಗಾಗಿ ಪೋಲೀಸ ದಳ ಬೆಳಿಸಲ್ಪಟ್ಟಿದೆ ಪೋಲಂಡ ಸರಕಾರವು ಗಡಿನಾಡಿನ ಮೇಲೆ ಭಯಂಕರ ಭನ್ನ ಕಾವಲಿಟ್ಟಿದೆ, ಗುರುವಾರ ಒಬ್ಬ ಜರ್ಮನ್ನರು ಪೋಲಿಶ್ ಕಸ್ಟಮ್ಸ ಅಧಿಕಾರಿಗೆ ಪಕ್ಕನೆ ಗುಂಡು ಹಾಕಿ ಕೊಂದುಬಿಟ್ಟನು ! ಅದರಿಂದ ಪೋಲಂಡ ಸರಕಾರವು ತೀರ ಪ್ರಕ್ಷುಬ್ಧವಾಗಿದೆ. ಡೆಂಯಿಗದೊಳಗಿನ ಸರ್ವಾಧಿಕಾರ ಬ್ರಿಟಕ-ಫ್ರೆಂಚರು. ಡೆಂಯಿಗಿನ ಅಧಿಕಾರಿಗಳು ಜರ್ಮನ್ ಪಕ್ಷನಾಯಕರಿಗಿಂತ ಹಿಟ್ಲರನ ಒಳಸಂಚಿಗೆ ಸೊರಿ ಪೋಲಂಡ ಸರಕಾರದ ಅಪಮಾನ ಮಾಡುತ್ತಾರೆಂದು ಪೋಲಂಡ ಸರಕಾರದ ಮನೋನಿಶ್ಚಯವಾಗಿದೆ. ಆದರಿಂದ ಆಕ್ರಮಿಯೆ-ಲ್ಲದೆ ಡೆಂಯಿಗನವರು ಪೋಲಂಡ ಸರಕಾರದ ಗಡಿ ಸೆರಬಾರದಾಗಿಯೂ ಆ ಪ್ರಕಾರ ಸೆರಿದರೆ ಏನೊಂದೂ ವಿಚಾರ ಮಾಡದೆ ಒಮ್ಮಲೇ ಗುಂಡು ಹಾರಿಸಿ ಕೊಲ್ಲಬೇಕಾಗಿಯೂ, ಪೋಲಂಡ ಸರಕಾರವು ಕಟ್ಟುನಿಟ್ಟಿನ ಹೊಸ ಡಿಸಿದೆ. ಬ್ರಿಟಿಕ-ಫ್ರೆಂಚರು ಪೋಲಂಡ ಸರಕಾರಕ್ಕೆ ಬೆಂಬಲ ಕೊಡುವ ಮನೋನಿರ್ಧಾರ ಮಾಡಿದ್ದಾರೆ. ಆದರೆ ಯಾವ ರೀತಿಯ ಸಹಾಯವೆಂದು ನಾನೇನು ಹೇಳಲಾರೆ. ಸೈನ್ಯ ಕಳುಹಿ ಸಹಾಯ ಮಾಡುವಿದೇನೆಂದು ಫಾರಿನ್‌ಮಿಂಟ್ರಿಸ್ಟರ್ ಒಂದು ಪ್ರಶ್ನೆ ಕೇಳಲು, ನಿಷೇಧವಾಚಕ ಉತ್ತರ ದೊರೆಯಿತು. ಯಾವ ರೀತಿಯ ಸಹಾಯವಾಗುವದೆಂಬ ವಿವರ ತಿಳಿಸಲ್ಪಡಲಿಲ್ಲ ಪೋಲಂಡ ದೇಶದ ಆಕ್ರಮಣವಾಯಿತೆಂದು ಬ್ರಿಟಿಕ ಫ್ರೆಂಚರ ನಿರ್ಧಾರವಾದರೆ ಆಗ, – ಆಗ ಮಾತ್ರ – ಬ್ರಿಟಿಕ – ಫ್ರೆಂಚರು ಪೋಲಂಡ ದೇಶಕ್ಕೆ ನೆರವಾಗುವರು. ಮತ್ತು ಆಕ್ರಮಣ ಮಾಡುವ ಪುಂಡರಿಗೆ ನಿರ್ದಾಕ್ಷಿಣ್ಯದಿಂದ ಶಾಸನ ಮಾಡುವರು ಆದರೆ ಡೆಂಯಿಗನ್ನು ಹಿಟ್ಲರನು ವಶ ಮಾಡಿಕೊಂಡರೆ ಆಕ್ರಮಣವಾಗಬಲ್ಲದೋ ಹೇಗೆ ? ಆಕ್ರಮಣದ ವ್ಯಾಖ್ಯೆಯೇನು ? ಲೂಟಾಪರೆನು ? ಆಕ್ರಮಿಸುವ ವ್ಯಾಖ್ಯೆಯೆಸ್ಸು ? ಎಂಬ ಸಂಗತಿಗಳನ್ನು ನಿರ್ದೇಶಿಸುವ ಇನ್ನೂ ಇಷ್ಟೆಲ್ಲ ಆಗಿಲ್ಲ. ಡೆಂಯಿಗದಲ್ಲಿ ಬ್ರಿಟಿಕ-ಫ್ರೆಂಚರ ಸುರಕ್ಷಿತತೆಗೆ ಬಾಧೆ ಬರದಿದ್ದರೆ ಅದು ಆಕ್ರಮಣ ವ್ಯಾಖ್ಯೆಯನ್ನಿ ಸೇರಿಲಿಕ್ಕಿಲ್ಲ. ಈ ಪ್ರಕಾರ ಬ್ರಿಟಿಕರು ಅನುಮಾನ ಪಡಲು ಕಾರಣವುಂಟು. ಯುದ್ಧವಾದರೆ ಅತ್ತ ಇತ್ತಾಲಿ, ಇತ್ತ ಸ್ಪೇನ್ ದೇಶಗಳು ಒತ್ತಟ್ಟಾಗಿ ಭೂಮಧ್ಯ ಸಮುದ್ರದೊಳಗಿಂದ ವ್ಯವಹರಿಸಲು ಬ್ರಿಟಿಕರಿಗೆ ತೊಂದರೆಯಾಗುತ್ತದೆ. ಭೂಮಧ್ಯ ಸಮುದ್ರವನ್ನು ಸಂರಕ್ಷಿಸುವದಕ್ಕಾಗಿ ಫ್ರೆಂಚರ ಕಡೆಯಿಂದ ಅಲೆಕ್ಸ್‌ಂಡ್ರಿಯಾ ಬಂದರ ತುರ್ಕರಿಗೆ ಒಪ್ಪಿಸೋಣಾಯಿತು. ಫ್ರೆಂಚರೂ ತುರ್ಕರೂ ಯುದ್ಧ ಪ್ರಸಂಗದಲ್ಲಿ ಸಹಕಾರದಿಂದ ಭೂಮಧ್ಯ ಸಮುದ್ರದ ರಕ್ಷಣೆ ಮಾಡುವಂತೆ ಉಪಾಯ ಯೋಜಿಸಲು ಫ್ರೆಂಚ್ ಸೈನ್ಯಾಧಿಕಾರಿಗಳು ಈಗ ತುರ್ಕರ ರಾಜಧಾನಿಯಾದ ಅಂಕಾರ ಪಟ್ಟಣಕ್ಕೆ ಹೋಗಿದ್ದಾರೆ. ಮೂಲ್ಯದಲ್ಲಿ ಸಂರಕ್ಷಣೆ ಮಾಡುವದಕ್ಕಾಗಿ ಸಕಲ ತಯಾರಿ ಇಡೋಣಾಗಿದೆ. ಬಧವಾರ ವಿಮಾನ ಮಾರ್ಗವಾಗಿ ಫ್ರೆಂಚ್ ನೌಕಾಧಿಕಾರಿಗಳೂ, ವೈಮಾನಿಕ ಅಧಿಕಾರಿಗಳೂ, ಮಾಲ್ಟಾಕ್ಕೆ ಹೋಗಿರುತ್ತಾರೆ. ಇಜಿಪ್ತ ದೇಶದೊಳಗೆ ಬ್ರಿಟಿಕ ಸರಕಾರವು ಸಕಲ ತಯಾರಿಯನ್ನಿಟ್ಟಿದೆ. ಆಕ್ಟೋಬರ-ನವಂಬರ ತಿಂಗಳಲ್ಲಿ ಯುದ್ಧವಾಗುವ ಸಂಭವವಿದೆಯೆಂದೂ, ಅದಕ್ಕಾಗಿ ಸಕಲ ತಯಾರಿಯಿಡಬೇಕೆಂದು ಬರೆದುಬಂದಿದೆ ಯಾಗಿಯೂ ಕೈರೋದ 'ಅಬೇರಸಾ' ಪತ್ರಿಕೆ ಬರೆಯುತ್ತಿದೆ. ಯುರೋಪದೊಳಗಿನ ಸ್ಥಿತಿ ಭಯಂಕರ ವಾಗಿರುವದಾಗಿಯೂ ಪ್ರತಿಯೊಬ್ಬರೂ ಧೂಮ್ರಕವಚವನ್ನು ಸಂಗ್ರಹಿಸಿಕೊಳ್ಳಬೇಕಾಗಿಯೂ ಇಜಿಪ್ತ ಸರಕಾರವು ಪ್ರಕಟನೆಯನ್ನು ಹೊರಡಿಸಿದ ಸೈನಿಕರ್ಯಾರೂ ಮದ್ಯಪಾನ ಮಾಡಬಾರದಾಗಿ ಸೇನಾ ಪತಿಗಳ ಕಟ್ಟಪ್ಪಣೆ ಹೊರಟಿದೆ. ಮದ್ಯಪಾನ ಮಾಡುವದು ಧರ್ಮವಿರುದ್ಧವಾದದ್ದೆಂದೂ ಮಾಡುವದು ಅನಿಷ್ಟವಾದದ್ದೆಂದೂ ಸೇನಾಪತಿಗಳು ತಮ್ಮ ಆಜ್ಞೆಯಲ್ಲಿ ನಮೂದಿಸುತ್ತಾರೆ. ಬ್ರಿಟಿಶ ಸೈನ್ಯ ಇಲಾಖೆಯ ಸರ್ ಎಡ್ಮಂಡ ಆರ್ಮ್‌ಸ್ಟಾಯ್ಟ್ರಂಗರು ಸೋಮವಾರ ತಾ. ೧೬ನೇಗೆ ವಾರ್ಸಾಕ್ಕೆ ವಿಮಾನ ಮಾರ್ಗವಾಗಿ ಹಾರಿಹೋಗಿ ಪೋಲಂಡ ಸರಕಾರದ ಸೈನ್ಯಾಧಿಕಾರಿಗಳೊಡನೆ ಆಲೋಚನೆ ಮಾಡುತ್ತಿದ್ದಾರೆ ಯುದ್ಧಕಾಲದಲ್ಲಿ ತಮಗೆ ಕಲ್ಪಿದ್ದ ಲಿಯ. ಕೊರತೆಯಾಗದಾಗಿರಬೇಕೆಂದು ಒತ್ತಿನಿಸಲ್ಪಟ್ಟ ಈಗ ನಿಂದಲೇ ಕಲ್ಪಿದ್ದಲಿಯನ್ನು ಮಿತವ್ಯಯದಿಂದ ಉಪಯೋಗಿಸಬೇಕೆಂದು ಹುಕುಮುಗಳು ಹೊರ ಟ್ಟುವವಾಗಿ ವಾರ್ಲಿಮೆಂಟಿನ ಸಭೆಯಲ್ಲಿ ಸೋಮವಾರ ಹೇಳೋಣಾಯಿತು. ಹಿಂದುಸ್ಥಾನದಲ್ಲಿ ಯ್ಯೂ ಇದೇ ಪ್ರಕಾರ ತಯಾರಿ ನಡೆಯುತ್ತಿದೆ. ಜಪಾನ ದೇಶದ ಪಾರ್ಲ್ಯಾಮಿಂದ ಹಿಂದುಸ್ಥಾನದ ಮೇಲೆ ಜಪಾನ ದೇಶಗೊಳಗೆ ಒಳ್ಳನನ್ನು ಸಾಧಿಸುವದಕ್ಕಾಗಿ ಜಪಾನ ಸರಕಾರವು ಜಾಹೀರಪಡಿಸಿದೆ. ಜರ್ಮನಿ-ಜಪಾನ ಸರಕಾರದ ಯುದ್ಧಮಂಡಳದ ಸಭಾಸದರಾದ ನೌಕಾಧಿಪತಿ ತೆರೌಚಿ ಒಳುಮಿರೋ ಇವರು ಹಿಟ್ಲರನ ನಿಮಂತ್ರಣೆಯ ಮೇರೆಗೆ ನ್ಯೂರೆಂಬರ್ಗಕ್ಕೆ ಹೊರಟಿದ್ದಾರೆ ಅದರಿಂದ ಹಿಂದುಸ್ಥಾನದ ಮೇಲಿನ ದಾಳಗೆ ಇವರಾಗುವದಕ್ಕಾಗಿ ಹಿಂದುಸ್ಥಾನದ

(ಪುರವಣಿ ನೋಡಿರಿ)

ಸ್ಥಾನಿಕ ವೃತ್ತಾಂತ.

ಕುಮಟಾ— ಮಳೆ ಮೊಸ ಮಾಡುತ್ತಿದೆ! ಮಳೆಗಾಲದ ಈ ಮಧ್ಯಕಾಲದಲ್ಲಿ, ಪುನರ್ವಸು-ಪುಷ್ಯ ನಕ್ಷತ್ರಗಳ ಸಂಧಿಕಾಲದಲ್ಲಿ ಒಂದು ಇಡೀ ವಾರದೊಳಗೆ ೩-೪ ಇಂಚು ಮಳೆಯಂದರೇನು! ಮೇಲಿಂದ ಮೇಲೆ ಮೋಡಗಳು ಮುಸುಕುತ್ತಿದ್ದಾಗ್ಯೂ ಮಳೆ ತೀರ ಕಡಿಮೆಯಾಗಿದೆ. ಒಮ್ಮೊಮ್ಮೆ ಬಿಸಿಲೋ ಬಿಸಿ ಸಹ ಆಗುತ್ತಿದೆ ಹೀಗೆ ಹವೆಯಲ್ಲಿ ವಿಲಕ್ಷಣ ಬದಲಾವಣೆಗಳಾಗಿರುವದರಿಂದ ಊರಲ್ಲಿ ಚಿಕ್ಕ-ಪುಟ್ಟ ಬೇನೆ-ಬೇಸರಿಕೆಗಳಿಗೆ ಪ್ರಾರಂಭವಾಗಿದೆ ಈ ವರೆಗೆ ದಿದ್ದ ಮಳೆ ೬೮-೪೬ ಇಂಚು ಆಗಿರುತ್ತದೆ

ಗಾಂಧಿ ಇನ್ಷೂರನ್ಸ್ ಒಪ್ಪಂದದಂತೆ ಸಮುದ್ರ ದಂಡೆ ಗುಂಟ ಇರುವ ಹಾಗೂ ಉಪ್ಪು ಬೆಳಸಬಹುದಾದ ಹಳ್ಳಗಳ ಜನರಿಗೆ ದೊರೆತಿರುವ ಉಪ್ಪಿನ ಸವಲತ್ತುಗಳ ದುರುಪಯೋಗ ಕುರಿತು ಕೆಲವು ಇಲ್ಲಿ ಆಗಾಗಾಲೂ ಕಮಿಟಿಯವರಿಗೆ ಮತ್ತು ಸರಕಾರಕ್ಕೆ ಅರ್ಜಿಗಳು ಬಂದಿದ್ದವು. ಈ ಸಂಬಂಧವಾಗಿ ಕಮಿಟಿಯ ಕಛೇರಿಯಲ್ಲಿ ದೂರುಗಳು ಕೇಳಿ ಬಂದಿವೆ ಯಂತೆ ಅದ್ದರಿಂದ ಯಾವದೇ ಹಳ್ಳಯ ಜನರು ಸದರಿ ಒಪ್ಪಂದದೊಳಗೆ ಅಡಕವಾಗಿರುವ ಶರ್ತುಗಳಿಗೆ ಇಲ್ಲವೆ ನಿಯಮಗಳಿಗೆ ವಿರುದ್ಧವಾಗಿ ನಡೆಯುವದರಿಂದಲೂ ನಡೆದರೆ ಇಡೀ ಹಳ್ಳಿಯ ಜನರು ಉಪ್ಪಿನ ಸವಲತ್ತುಗಳನ್ನು ಕಳಕೊಳ್ಳಬೇಕಾದ ಪ್ರಸಂಗ ಬರಬಹುದೆಂತಲೂ ಸದರಿ ಕಛೇರಿಯವರು ಎಚ್ಚರಿಕೆ ಕೊಟ್ಟಿರುತ್ತಾರೆ "ಅಯಾ ಹಳ್ಳಿಯ ಜನರು ತಮ್ಮ ತಮ್ಮ ಸ್ವಂತ ಉಪಯೋಗಕ್ಕೆ ಇಲ್ಲವೆ ಕೆಲವು ತಮ್ಮ ಹಳ್ಳಿಯಲ್ಲೇ ಬರೇ ತಲೆ ಹೊರೆಯಿಂದ ಒಯ್ಯುವದಕ್ಕೆ ಮಾತ್ರವಿದೆ ಒಯ್ಯುವದಕ್ಕೆ ಬಂಡಿ ಮೊದಲಾದವುಗಳನ್ನು ಉಪಯೋಗಿಸಬಾರದು. ಹಾಗೆ ಮಾಡುವದರಿಂದ ಸರಕಾರಕ್ಕೆ ಸಲ್ಲತಕ್ಕ ಸುಂಕದ ಹಣಕ್ಕೆ ಕುತ್ತು ಬರುವ

ಯುತ್ತಾರೆ - "ನೆರೆ ಹಾವಳಿಯಲ್ಲಿ ಹಾನಿಗೀಡಾದವರಿಗೆ ನೆರೆ ನಿವಾರಣಾ ಸಹಾಯಕ ಮಂಡಳಿಯವರು ಸಹಾಯವನ್ನು ಹಂಚುವ ವ್ಯವಸ್ಥೆ ಮಾಡಿರುತ್ತಿದ್ದ ಸಂಗತಿ ಸಾರ್ವಜನಿಕರಿಗೆ ಗೊತ್ತಿದೆಯಷ್ಟೇ. ಹಾನಿಗೀಡಾದವರ ಯಾದಿಯನ್ನು ಅವರಿಗಾದ ನಷ್ಟದ ಯಾದಿಯನ್ನೂ ಕಯಾರಿಸಲು ಮಂಡಳಿಯವರು ರಾ| ಎಮ್. ಕೆ. ಜೋಶಿ ಎಂಬುವರಿಗೆ ನೇಮಿಸಿದ್ದರು ಊರವರಿಗೆ ಯಾರಿಗಾದರೂ ನೇಮಿಸಿದರೆ ಪಕ್ಷಪಾತ ಇಲ್ಲಿನೆ ಸ್ವಾರ್ಥಸಾಧನೆ ಮಾಡ್ಯಾರೆಂಬ ಧೋಷಣೆಯಿಂದ ಮಂಡಳಿಯವರು ಈ ನಿಸ್ಸ್ವಾರ್ಥಿ (!) ಪರಸ್ಥಳದವರಿಗೆ ನೇಮಿಸಿದ್ದರಂತೆ! ರಾ| ಜೋಶಿಯವರು ಜೈಲುವಾಸ ಅನುಭವಿಸಿದ ಕೊಂಗ್ರೆಸ ಲೆಜಿಸಗಾರರಿಂತ್ತಾರೆಂದು ಹೇಳುತ್ತಾರೆ ಮೇಲೆ ಹೇಳಿದ ಕೆಲಸವನ್ನು ಮಾಡುವ ಬಗ್ಗೆ ಮಂಡಳಿಯವರು ಜೋಶಿಯವರಿಗೆ ತಿಂಗಳೊಂದರ ರೂ ೧೫೦ರಂತೆ ಸಂಬಳ ಕೊಡುತ್ತಿದ್ದಾರೆ ರಾ| ಜೋಶಿಯವರ ನಿಃಸ್ವಾರ್ಥಿತನವು ಸ್ಪಷ್ಟವಾಗಿರುತ್ತಿತ್ತು ಅಲ್ಲವೆ? ಬೇರೆ ಜಾತಿಯವರಾದ ನಷ್ಟದ ವಿಲಿಯನ್ನು ಮಾತ್ರ ನೋರಕ್ಕೆ ೧೦-೨೦ ಇಷ್ಟಾಗೆ ೪೦ ೪೦ ರೆಂದಾಯಿಸಿದ್ದಾರೆ! ಜೋಶಿಯವರೆ ಜಾತಿ ...ಬ್ಬರ ಮನೆಯ ಗೋಡೆಗೆ ನೆರೆಯ ನೀರು ತಾಗಿ ಸ್ವಲ್ಪ ನಷ್ಟವಾಗಿತ್ತು ನಷ್ಟದ ಬೆಲೆ ಹೆಚ್ಚೆಂದರೆ ೨೦ ರೂ ಆದೀತು ಮೇಲಾಗಿ ಮನೆಯ ಮಾಲಿಕರು ಸಾಧಾರಣ ಸ್ಥಿತಿವಂತರಿದ್ದಾರೆ ನಿರಾಶ್ರಿತ ಸಹಾಯಕ ಸಥಿಯೊಳಗಿಂದ ಪರಿಹಾರ ಪಡೆಯಬೇಕಾದವು ನಿರ್ಗತಿಕರಲ್ಲ' ಅವರೆ ರಾ| ಜೋಶಿಯವರು ಸದರಿ ಯವರ ಮನೆಯೇ ನೆರೆ-ನೀರಿನಲ್ಲಿ ಕುಸಿದು ಹೋದ ಹಾಗೆ ಅವರಿಗೆ ರೂ ೫೦ ನಷ್ಟ ಕೊಡಬೇಕೆಂದು ಶಿಫಾರಸು ಮಾಡಿದ್ದಾರೆ! ಸಹಾಯದನೆ ಹಂಚಹೋದ ಮಹಾಲಕ್ಷಿ ಸಾಹೆಬರಿಗೂ ಬೇರೆ ಗೃಹಸ್ಥರಿಗೂ ಈ ವಿಷಯ ನೋಡಿ ಬಹಳ ಬೇಸರವಾಯಿತು' ಇದೇ ಜೋಶಿಯವರು ನೂರಾರು ರೂಪಾಯಿಗಳ ನಷ್ಟಕ್ಕೀಡಾದ ಬೇರೆ ಜಾತಿಯವರಿಗೆ (ಅ), (ಬ) ವರ್ಗಗಳಲ್ಲಿ ಸ್ಂರಿ ಬರೇ ರೂ. ೨೦ ರಾ ರೂ ೨೫ ಕೊಡಬೇಕೆಂದು ಶಿಫಾರಸು ಮಾಡಿದ್ದಾರೆ! ಹೀಗೇನು ಮಾಡಿರಿ ಎಂದು ರಾ| ಜೋಶಿಯನರಿಗೆ ಕೆಲವರು ಕೇಳಲಾಗಿ, 'ನಾನೇನು ಮನೆ ಮನೆ ತಿರುಗಾಡಿದ್ದೇನೋ? ಕೂತಲ್ಲಿ ನಿಕ್ಕ ಮಾಹಿತಿಯ ಮೇರಿಂದ ಯಾದಿಗಳನ್ನು ತಯಾರಿಸಿದ್ದೇನೆ," ಎಂದು ಕ್ಷತ್ರಿಯ ಅವರ ಬಾಯಿಂದ ಹೊರಬಿತ್ತು! ರಾ| ಕೃಷ್ಣಾ ಯಾಜಿಯವರು ರಾ| ಜೋಶಿಯವರ ಕಾರ್ಯಾಸಕ್ತಿಗೆ ಬ್ಬಾಬಲೆಯಲು ಆಗ ಎಷ್ಟು ಪ್ರಯತ್ನಪಟ್ಟರೂ ಅದು ಸಾಧ್ಯವಾಗಲಿಲ್ಲ' ಒಮ್ಮೆ ರೆಟ್ಟಿದ ಗುಟ್ಟು ಅಡಗಿಸಬಂದೀತೇ? ಈಗ ಈ ಕಾರ್ಯಾನೆಗಳೆಲ್ಲ ಊರಕಂಬ ಜನಪ್ರತಿನಿಧಿಗಳಿಗೂ ದೂರು ಕಳಿಸಿದ್ದಾರೆ ನೆರೆ-ನಿರಾಶ್ರಿತ ಸಹಾಯಕ ಮಂಡಳಿಯವರು ಬೇಗನೇ ಈ ಹೊಲಸು ಕೊಳೆಯನ್ನು ತೊಳೆದೊಗೆಯುವರೆಂದು ಪ್ರಾ" ಇಷ್ಟಾಯಿ

ಇಲ್ಲಿಯ ರೇಂಜರ್ ರಾ| ಕಲಭಾಗರವರಿಗೆ ವರ್ಗವಾಗಿ ಪ್ರಾ| ಫನ ಂಡೀಸರವರಿಗೆ ಇಲ್ಲಿ ನೇಮಿಸಲಾಗಿದೆ. ಕೇಕೆ ಯವನಿಗೆ ಫರ್ನಾಂಡಿಸರವರು ಬೇಡ ಅದ್ದರಿಂದ ನಾಗರಿಕರು ಜಿಲ್ಲಾಧಿಪತಿಗಳೂ ವನ ಇಲಾಖೆಯ ಮಂತ್ರಿಗಳೂ ತಂತ್ರ ಮಾಡಿ, ನೆರಿಹಾವಳಿಯ ಕಾಲದಲ್ಲಿ ಜನರಿಗೆ ನೆರವಾದ ರಾ| ಕಲಭಾಗರವರನ್ನೇ ಇನ್ನೂ ಕೆಲ ಕಾಲ ಇಲ್ಲಡಬೇಕಾಗಿ ಬೇಡಿಕೊಂಡಿದ್ದಾರೆ

ಅವುಸರ್— (ತಾ ೧೮-೮-೬೯) ಹುರಿ ಹಾವಳಿ ಬಹಳವಾಗಿದೆ. ಕಳೆದ ೧೦-೧ ತಿಂಗಳಲ್ಲಿ ಸಕಲ ಬೇಣ ಪೊಂದೇ ಗ್ರಾಮದಲ್ಲಿ ೩ ಆಳಉಗಳು, ೩ ಎತ್ತುಗಳು, ೨ ಎಮ್ಮೆಗಳು ಮತ್ತು ೧ ಆಕಳ ಕರ ಹುರಿಗೆ ಜನಾವರ ಗಳು ಹುಲಿ ಬಾಯಿಗೆ ಬಿದ್ದಿವೆ! ಹಟ್ಟಿಕೇರಿಯೊಳಗೆ ೪-೫ ಜನಾವರಗಳುದಪ್ಪ ಹುಲಿಯಾನೆ ಜಾಗಾಗಿವೆ! ಅಧಿಕಾರಿಗಳು ಹುಲಿ ಬೇಟೆಯ ವ್ಯವಸ್ಥೆ ಮಾಡಬಾರದೇ?

ಹಳ್ಳಿಗಳಲ್ಲಿ ಚಿಕಿತ್ಸಾಲಯಗಳನ್ನು ಸ್ಥಾಪಿಸುವ ಸರಕಾರಿ ಸಂಕಲ್ಪ ಪ್ರಾಶಂಕರ ಅಮೊಡಸೆ ಈ ಊರವರೂ ತಮ್ಮಲ್ಲೊಂದು ಚಿಕಿತ್ಸಾಲಯ ಬೇಕೆಂದು ಅರ್ಜಿ ಮಾಡಿದ್ದರು. ಅದರೆ ಅಂಕೋಲಾ ತಾಲೂಕಿನಲ್ಲಿ ಎರೆಡೇ ಚಿಕಿತ್ಸಾಲಯಗಳು ತೆರೆಯಲ್ಪಡುವವೆಂಬಲ್ಲಿ ಅವು ಈ ತಾಲೂಕಿನ ಬೇರೆ ಊರುಗಳಿಗೆ ಕೊಟ್ಟುಹೋಗಿವೆಯೆಂಬಲ್ಲಿ ಈ ತ್ತ ರ ನಿಕ್ಕಿ ಹು. ಅಂಕೋಲೆ ಯ ವಿನವ ಇನ್ನು ಳಿದ ತಾಲೂಕುಗಳಿಗೆ ೩-೪ ಚಿಕಿತ್ಸಾಲಯಗಳು ಸಿಕ್ಕಿರಬಹುದೆ! ಹಾಗಾದರೆ ಅಂಕೋಲಾ ತಾಲೂಕಿಗೆ ಮಾತ್ರ ಎರಡೇ ಚಿಕಿತ್ಸಾಲಯಗಳೇಕೆ? ಅಂಕೋಲೆಯವರು ಏನು ಪಾಪ ಮಾಡಿದ್ದಾರೆ? ಅವರೇಯಲ್ಲಿ ೪೦೦೦ ಜನಸಂಖ್ಯೆಯಿದೆ, ಸುತ್ತಲೂ ಹಳ್ಳಿಗಳಿವೆ, ಅವುಗಳ ಜನ ಸಂಖ್ಯೆ ೪೦೦೦ಕ್ಕೆ ಮಿಕ್ಕಬಹುದು, ಮೇಲಾಗಿ ಜನರು ಬಹಳ ಬಡವರು ಬೇನೆಯಾದರೆ ಅಂಕೋಲೆಯಂತಾಗಲಿ ಅಥವಾ ದಿಂದಾಗಲಿ ಡಾಕ್ಟರ್-ನ್ಯೆದ್ಯಂಗೆ ತರುವ ಸಾಮರ್ಥ್ಯ ಅವರಿಗಿಲ್ಲ ಮೊನ್ನೆಯೇ ಭೆಟಿಸಿದ ಎರಡು ಅಧಾಪರಣೆ ಗಳನ್ನು ನೋಡಬಹುದು ಕೋಮಾರಪಂಕ ಜಾತಿಯ ಒಂದು ಮನೆಯಲ್ಲಿ ಇಬ್ಬರು ಆಣ್ಣಾತ್ಮಂಂದಿರು, ಒಂದು ತಾಯಿ, ಒಂದು ಅಕ್ಕಾನ ತಂಗಿ, ಒಬ್ಬನ ಹೆಂಡತಿ, ಹೀಗೆ ೫ ಜನರಿದ್ದರು. ಮನೆಯಲ್ಲಿ ಒಬ್ಬರಿಂದೊಬ್ಬರು ಬೇಸೆ ಬಿದ್ದರು! ತರುಣಾ ಉಪಚಾರ ಮಾಡಲಾಗಲಿಲ್ಲ! ತತ್ಪರಿಣಾಮವಾಗಿ ಅಪ್ತಾಯಸ್ಥ ಹುಡುಗಿಯ ವಿನಹ ಉಳಿದವರೆಲ್ಲ ರೂ ಪಟಿ ಪಟಿ ತೀರಿಕೊಂಡರು! ಹುಡುಗಿಯೊಬ್ಬಳು ಅನಾಥಳಾಗಿ ಆಲಿದಾಡುತ್ತಿದ್ದಾಳೆ ಅದೇ ಜಾತಿಯ ಇನ್ನೊಂದು ಮನೆಯಲ್ಲಿ ಇಬ್ಬರು ಗಂಡಹೆಂಡರೂ ಒಂದು ಚಿಕ್ಕ ಮಗುವೂ ಇರುತ್ತಿದ್ದರು ಮೊದಲು ಹೆಂಡತಿ ಬೇನೆ ಬಿದ್ದಳು, ಕೆಲವು ದಿನಗಳಲ್ಲಿ ಗಂಡನೂ ಬಿದ್ದನು' ೪-೦೦ ದಿನಗಳಲ್ಲಿ ಬರೇ ಎರಡು ತಾಸು ಅಂತರದಿಂದ, ಇಬ್ಬರೂ ಈ ಲೋಕ ಬಿಟ್ಟು ನಡೆದರು' ಅವರ ಮಗುವೊಂದು ಅನಾಥವಾಗಿ ಉಳಿದಿದೆ ಇಂತಹ ಉದಾಹರಣೆಗಳನ್ನು ಬೇಕಷ್ಟು ಕೊಡಬಹುದು ಅಧ್ಯಾಯ ಸರಕಾರದವರೂ ಲೋಪದ್ಯಮುಖರೂ ಈ ಭಾಗದ ಪರಿಸ್ಥಿತಿಯನ್ನು ದಯಾರ್ದ್ರತೆಭರಿತ ದಿಂದ ಪರಿಶೀಲಿಸಿ ಅವಶ್ಯಕತೆಯುಳ್ಳಾಗೆ ಹಟ್ಟಿಕೇರಿಯಲ್ಲಾಗಲಿ ಒಂದು ಚಿಕಿತ್ಸಾಲಯವನ್ನು ತೆರೆಯುವ ವ್ಯವಸ್ಥೆಯನ್ನು ಶೀಘ್ರದಲ್ಲಿಯೇ ಮಾಡಬೇಕಾಗಿ ಆಗ್ರಹವ ವಿವಂಕಿಯದೆ

ಹಳಿಯಾಳ— (ತಾ ೨೦-೮-೬೯) ಈ ವರ್ಷದ ಮಳೆ ಬಹಳ ವಿಚಿತ್ರ! ಒಂದು ಕಡೆ ಮಳೆ ಬಿದ್ದರೆ, ಇನ್ನೊಂದು ಕಡೆ ಮಳೆಯ ಹನಿಯಲ್ಲ! ಕೆಲವು ಹೊಲಗಳಲ್ಲಿ ಬಿತ್ತಿದ ಬೀಜವೇ ಕೊಳೆತು ಹೋಯಿತು! ಈಗ ನೆಟ್ಟು ಮಾಡಬೇಕಾಗಿದೆ ಕೆಲವು ಕಡೆ ಹೊಡ್ತಾಗಿದೆ. ನೀರಿಲ್ಲದ್ದರಿಂದ ಹೊಡ್ತವಾದ ಗದ್ದೆಗಳಲ್ಲಿ ಹುಲ್ಲು ಬೆಳೆದು ಭತ್ತದ ಸಸಿಗಳೇ ಕಾಣಲಿಲ್ಲವು! ಅಂತು ಈ ವರ್ಷದ ಸ್ಥಿತಿ ತರಾವಾಗುವದೆಂದು ಕಾಣುತ್ತದೆ

ಕನ್ನಡ ಶಾಲೆಯೊಳಗಿನ ಇಂಗ್ಲಿಷ ವರ್ಗಗಳನ್ನು ತಿವಾಚಿ ವಿದ್ಯಾಲಯಕ್ಕೆ ಜೋಡಿಸಬೇಕೆಂದು ನೊನ್ನೆ ತಾಲೂಕ ಳೆಬೇರಿಯಲ್ಲಿ ಕೂಡಿದ ನಾಗರಿಕರ ಸಭೆಯಲ್ಲಿ ಗೊತ್ತುವಳಿ ಯಾಯಿತು ಇದೇ ಬರುವ ಆಗೆೋಸ್ತ ತಾ. ೧೬೦೮ ಈ ವರ್ಗಗಳನ್ನು ಕನ್ನಡ ಶಾಲೆಯಿಂದ ಬೇರ್ಪಡಿಸದೇ ಕಾಗಿ ಗೊತ್ತಾಗಿದೆ ತಿವಾಚಿ ವಿದ್ಯಾಲಯದ ಹೇಳ ಇಮಾರತಿನಲ್ಲಿ ಈ ವರ್ಗಗಳಿಗೆ ಸಾಕಾಗುವಷ್ಟು ಸ್ಥಳವಿದ್ದು ಈ ಅಡಚಣೆಯನ್ನು ಮೂರಡಿಸಲು ರಾ| ಆಡಿವೆಪ್ಪ ತಿಪ್ಪೂರರವರು ರೂ. ೪೦೦೦ ಖರ್ಚು ಮಾಡಿ ಹೊಸ ಇಮಾರತು ಕಟ್ಟಿಸಿಕೊಡುವ ಆಶ್ವಾಸನೆ ಕೊಟ್ಟಿದ್ದಾರೆ. ಈ ಇಮಾರತು ತಯಾರಾಗುವ ವರೆಗೆ ರಾ| ವೆಂಕಟೇಶ ದೇಶಮಾಂಡೇ ಯವರ ಖಾಲಿಯಿದ್ದಿರುವ ಗಿರಿಯವರ ಬಂಗಲೆಯನ್ನು ಭಾಡಿಗೆಗೆ ತಕ್ಕೊಳ್ಳಬೇಕಾಗಿ ಗೊತ್ತಾಗಿದೆ ಶಾಲೆಗೆ ಬೇಕಾಗುವ ಸಾಮಾನು ಕಯಾರಿಸಿಕೊಡಗಿದ್ದಾರೆ. ಕನ್ನಡ ಶಾಲೆಯೊಳಗಿನ ವರ್ಗಗಳನ್ನು ತಿವಾಚಿ ವಿದ್ಯಾಲಯಕ್ಕೆ ಜೋಡಿಸಿದ್ದರಿಂದ ೩-೪ ಹೊಸ ಶಿಕ್ಷಕರನ್ನು ನೇಮಿಸಬೇಕಾಗಿದೆ. ನೇಗಂಶಿಕ್ಷಕ್ಷರು ಈ ಕೆಲಸವನ್ನು ಶಾಲಾ ಕಮಿಟಿಗೆ ಒಪ್ಪಿಸುವುದೇ ತಾವೇ ಸರ್ಕಾರಿಧಾರಿಗಳಾಗಿ ತಾವು ಬಾಲಬಡಿಗರಿಗೆ ನೇಮಿಸಿಕೊಳ್ಳುತ್ತಾರೋ ನೋಡಬೇಕು!

ತಾ ೧೮ನೇಗೆ ಕೊಂಗ್ರೆಸ ಕಮಿಟಿಯ ವಿದ್ಯಮಾನ ನಾಗರಿಕರ ಸಭೆಯಾಗಿ ೩೬ ಜನರ ಮನ್ಸೆ-ಮಾಡಿಕೆ ಪ್ರತಿ ಬಂಧಕ ಸಮಿತಿಯೊಂದು ನೇಮಿಸಲಾಗಿದೆ ರಾ| ರಾಮು ಸಿಂಗರವರು ಅದರ ಅಧ್ಯಕ್ಷರಾಗಿ ನೇಮಿಸಲ್ಪಟ್ಟಿದ್ದಾರೆ

ಈ ವರ್ಷ ಕೊಣೆ ಕೊಂಗ್ರೆಸ ಸದಸ್ಯರನ್ನು ಮಾಡುವ ಕೆಲಸ ಭರದಿಂದ ಪ್ರಾರಂಭವಾಗಿದೆ. ಕಾರ್ಯಕರ್ತರಲ್ಲಿ ನಾ ಹೆಚ್ಚು, ನೀ ಹೆಚ್ಚು ಎಂದು ಸ್ಪರ್ಧೆ ನಡೆದಿದೆ

—ಕನ್ನಡ ವಾಙ್ಮಯದ ಸಂಶೋಧನ ಮಾಡುವ ಬಗ್ಗೆ ಸರ ಕಾರದವರು ನೇಮಿಸಿರುವ ಮಂಡಳದ ಮೊದಲನೇ ಸಭೆ ಳೆಗೆ ತಾ ೧೬ನೇಗೆ ಧಾರವಾಡದಲ್ಲಿ ಕೂಡಿತು. ಡಾ|| ಎಸ್ ಸಿ. ನಂದೀಮಟ (ಬೆಳಗಾಂವಿಯಳಗಿನ ಲಿಂಗರಾಜ ಕಾಲೇಜಿನ ಪ್ರಿನ್ಸಿಪಾಲರು) ಇವರು ಸರ್ಕಾರನುಮತಿಯಿಂದ ಮಂಡಳದ ಅಧ್ಯಕ್ಷರಾಗಿ ಆರಿಸಲ್ಪಟ್ಟರು ಕನ್ನಡ ಸಂಸ್ಕೃತಿ ಸಂಸ್ಥೆಯ ಅಧ್ಯಕ್ಷತಾತೆಯಿಂದ ಪ್ರೊ| ಫೆರ್ನಾಂಡೆಜ ಮಾಡಿರುವ ಅಮೂಲ್ಯ ಸೇವೆಯ ಬಗ್ಗೆ ಅವರ ಅಭಾರ ಮನ್ನಣೆ ವಾಯಿತು ಕನ್ನಡ ಸಂಶೋಧನೆ ಶಿಸ್ತುಬದ್ಧತೆಗಳ ಬಗ್ಗೆ ಆರ್ಜಗಳನ್ನು ಬರಮಾಡಿಕೊಳ್ಳಲು ಕಾರ್ಯದರ್ಶಿಗಳಾಗಿ ಅಧಿಕಾರ ಕೊಡಲಾಯಿತು ಸಂಶೋಧನ ಪುಸ್ತಕಾಲಯದ ಅಭಿವೃದ್ಧಿಯ ಬಗ್ಗೆ ಒಂದು ನಿಯಮಾವಳಿಯನ್ನು ತಯಾರಿಸಲು ಮೂವರಿಯೊಂದು ಉಪಸಂಘಕ್ಕೆ ನೇಮಿಸಲಾಯಿತು ತುರ್ತಕ್ಕೆ ಕಾರ್ಯದರ್ಶಿಗಳು ತಮಗೆ ಯುಕ್ತ ಕಂಡ ಓಪಗರಿಗೆ ಪ್ರವೇಶ ಕೊಡಬಹುದಾಗಿ ನಿರ್ಣಯವಾಗಿದೆ.

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ
ನಂಜನಗೂಡು ಟೂತ್ ಪೌಡರ್. (ರಿಜಿಸ್ಟರ್ಡ)
ಹಲ್ಲುಗಳನ್ನು ಶುಭ್ರವಾಗಿಡುವದರಲ್ಲೂ, ಗಟ್ಟಿಪಡಿಸುವದರಲ್ಲೂ ಜಗತ್ಪ್ರಸಿದ್ಧವಾಗಿದೆ.
ಶ್ರೀಕರ ಕಸ್ತೂರೀ ಮಾತ್ರೆ. [ಪ್ಲೇಗ್ಗೆ ೦ ೧-೦
ಸುವಾಸನೆಯುಳ್ಳ ಈ ಮಾತ್ರೆಗಳು ಮಕ್ಕಳ ಮತ್ತು ದೊಡ್ಡವರ ನೆಗಡಿ, ಕೆಮ್ಮು, ಅಜೀರ್ಣ, ಜ್ವರ ಮುಂತಾದ್ದಕ್ಕೆ ಸಿದ್ಧೌಷಧವಾಗಿದೆ. ಬೆಲೆ ೦—೪—೦, ೦—೨—೦.
ಶ್ರೀಕರ ಬಾಲಸಂಜೀವಿನಿ.
ಚಿಕ್ಕ ಮಕ್ಕಳ ಮಂದಜ್ವರ, ಶೀತಜ್ವರ, ಎಳವು ಇತ್ಯಾದಿ ರೋಗಗಳಿಗೆ ಸಂಜೀವನಿ ಬೆಲೆ ೦—೪—೦
ಮೊರೆಯುವ ಸ್ಥಳ- ಕಲ್ಯಾಣಪುರ ಬ್ರದರ್ಸ ಉಮಟಾ ದೇವಪ್ಪಾ ಆಯ್ಯ ನಾಯ್ಯ, ವಿ ನ್ಯೂ ಸಪ್ಲಾಯ ಏಜನ್ಸಿ, ದಿ ಸ್ವದೇಶಿಕ ಫಾರ್ಮಸಿ.
ವೆಂಜನಗೂಡು ಪಬ್ಲಿಸಿಟಿ ತಾಲಾ, ಬೈಂಜ್: ರಕ್ಷಬೀದಿ, ಬಂಗಳೂರು

ಜಿಲ್ಲಾ ಸ್ಕೂಲು ಬೋರ್ಡ್ ಚುನಾವಣೆ.

ಜಿ. ಲೋ. ಬೋರ್ಡ್ ಕೊಂಗ್ರೆಸ ಪಕ್ಷವೆ ಕೊಂಗ್ರೆಸ ವೇಷ ಇಳಿಯಿತು!

ಸಿವ್ಹಿಕ್ ಬೋರ್ಡಿನವರ ಮಾತಿಗೆ ಈಗ ಬೆಲೆಯಿಲ್ಲ!!

[ನಮ್ಮ ವಿಶೇಷ ಪ್ರತಿನಿಧಿಗಳಿಂದ]

ಶುಕ್ರವಾರ, ತಾ ೨೦—೭—೩೯

ನಿನ್ನೆ ತಾಲೂ ಬೋರ್ಡಿನ ಸದಸ್ಯರ ಚುನಾವಣೆಯಾಯಿತು ಜಿಲ್ಲಾ ಲೋಕಲ್ ಬೋರ್ಡಿನಂತೆ ಶಾಲಾ ಬೋರ್ಡಿನಲ್ಲಿ ಕೊಂಗ್ರೆಸ ಜನರಿಗೇ ಆರಿಸಿಕೊಟ್ಟು ಆ ಬೋರ್ಡನ್ನು ಕೊಂಗ್ರೆಸಮಯ ಮಾಡಬೇಕೆಂದು ಕೊಂಗ್ರೆಸ ಕೆಲಸಗಾರರೂ ಸಿವ್ಹಿಕ್ ಬೋರ್ಡಿನವರೂ ಹವಣಿಸಿದ್ದ ಸಂಗತಿ ಲೋಕಕ್ಕೆ ಪ್ರಸಿದ್ಧವಿದೆ ಜಿಲ್ಲಾ ಲೋಕಲ್ ಬೋರ್ಡಿನ ೩೦ ಮಂದಿ ಸದಸ್ಯರೊಳಗೆ ೧೯ ಜನರು ಬಹುಮತವುಳ್ಳ ಕೊಂಗ್ರೆಸ ಪಕ್ಷವು ಶಿಸ್ತಿನಿಂದಲೂ ಸಂಘಟಿತವಾಗಿಯೂ ವಿಜೆಯತವನಿಂದ ಲೂ ನಡೆದದ್ದಾದರೆ ತಾಲು ಬೋರ್ಡಿನ ೧೩ ಸ್ಥಳಗಳಲ್ಲಿ ಕನಿಷ್ಟ ೧೦ ಸ್ಥಳಗಳನ್ನಾದರೂ ಕೊಂಗ್ರೆಸ ಜನರು ಆಕ್ರಮಿಸಿಕೊಳ್ಳಬಹುದಾಗಿತ್ತು ಮತ್ತು ಜನಸಾಮಾನ್ಯರು ಹಾಗಾಗುವೆಂದೇ ಭಾವಿಸಿದ್ದರು

ಆವರೆ—

ಆದರೆ ನಡುವೆ "ಆವರೆ ಎಂಬ ಶಬ್ದ ಬಂತು! ಸಿವ್ಹಿಕ್ ಬೋರ್ಡಿನವರು ಜಿಲ್ಲಾ ಲೋಕಲ್ ಬೋರ್ಡಿನ ಚುನಾವಣೆಗೆ ನಿಲ್ಲಿಸಲು ಆರಿಸಿದ ಹುರಿಯಾಳುಗಳ ಪುಣ್ಯಾಪರಗಳನ್ನೂ ಆರಿಸಿಬಂದನಂತರ ಕೃಪೃತ್ತಿ-ನಿವೃತ್ತಿಗಳನ್ನೂ ಸೂಕ್ಷ್ಮವಾಗಿ ನೀರೀಕ್ಷಿಸಿದ ಜನರು ಭವಿಷ್ಯ ವರ್ತಿಸಿದಂತೆ ಜಿಲ್ಲಾ ಬೋರ್ಡಿನ ಸದಸ್ಯರಾದ ಪೂರ್ಣ ಕೊಂಗ್ರೆಸ ವೇಷ ಬಿಸಿಕೊಂಡ ಅನೇಕ ಸದಸ್ಯರು ಈಗಾಗಲೇ ತಮ್ಮ ನಿಜ ಸ್ವರೂಪವನ್ನು ಧರಿಸಿದ್ದರಿಂದ ಮತ್ತು ಶಿಸ್ತು ವಿಧೇಯತನ, ಸಂಘಟನೆ, ನಿಷ್ಪಾರ್ಥತೆ ಮೊದಲಾದ ರೂಢ ತತ್ವಗಳ ಬೆನ್ನು ಹಿಡಿದು ಹೋಗಲು ನಿರಾಕರಿಸಿ "ಸ್ವತಂತ್ರ"ರಾದ್ದರಿಂದ ಕೊಂಗ್ರೆಸಳಕ್ಕೆ ಜನಸಾಮಾನ್ಯರ ಅಪೇಕ್ಷೆಗಳೂ ಆಕಾಂಕ್ಷೆಗಳೂ ವಿಫಲವಾಗಿವೆಯೆಂದು ಹೇಳಬೇಕಾಗಿದೆ ಯೇಸಾ ಶಾಲಾ ಬೋರ್ಡಿನಲ್ಲಿ ೯ ಮಂದಿ ಕೊಂಗ್ರೆಸ ಸದಸ್ಯರೂ ೪ ಮಂದಿ ಕೊಂಗ್ರೆಸ್ಸೆ ತರರೂ ಆರಿಸಿ ಬಂದಿದ್ದಾರೆಂದು ಹೇಳುವವರು ಇದ್ದಾರೆ ಆದರೆ ಈ ೯ ಮಂದಿ ಕೊಂಗ್ರೆಸ ಸದಸ್ಯರಿಗೆ ಅರಿತಂದ ಜಿಲ್ಲಾ ಲೋಕಲ್ ಬೋರ್ಡಿನ ಕೊಂಗ್ರೆಸ ಪಕ್ಷದ ಸದಸ್ಯರೇ ಸ್ವತಃ ಕೊಂಗ್ರೆಸ ತತ್ವಗಳಿಗೆ ವಿರಾಂಜಲಿಯನ್ನರ್ಪಿಸಿದ್ದಾರೆಂದು ಸ್ಪಷ್ಟವಾಗಿ ಕಂಡುಬಂದ ದೇಶಲೆ, ಆಂಧ್ರದವರಿಂದ ಆರಿಸಲ್ಪಟ್ಟ ಜನರು ಎಷ್ಟರಮಟ್ಟಿಗೆ ಕೊಂಗ್ರೆಸ ತತ್ವಗಳನ್ನು ಪಾಲಿಸುವರು ? ಇರಲಿ ತಾ ೨೦ ನೇಗಿ ಶಾಲಾ ಬೋರ್ಡಿನ ಸದಸ್ಯರ ಆಯ್ಕೆ ನಡೆಯಲಿತ್ತಿತ್ತಾಗಿ ನಾನು ಮೇಲೆಯೇ ಹೇಳಿದ್ದೇನೆ ಈ ಕುರಿತು ವಿಚಾರ ಮಾಡುವವಕಾಶಾಗಿ ಮುನ್ನಾಣ ದಿನ ಸಂಜೆಗೆ ಕೊಂಗ್ರೆಸ ಪಕ್ಷದ ಸಭೆ ಕರೆಯಲ್ಪಟ್ಟಿತ್ತು ಕೊಂಗ್ರೆಸ ಪಕ್ಷದ ಹತ್ತೊಂಭತ್ತೂ ಸದಸ್ಯರು ಅಂದು ಮಧ್ಯಾಹ್ನವೇ ಇಲ್ಲಿಗೆ ಬಂದು ತಲ್ಪಿದ್ದರು ಶಾಲಾ ಬೋರ್ಡಿನ ಚುನಾವಣೆಗೆ ನಿಂತ ಉಮೇದವಾರರೂ ಬಂದು ಕೇರಿದ್ದರು ಹೊಸ್ಮಾವರದ ರಾ|| ಕರ್ಕಿ, ಉಮಟಿಯ ರಾ|| ಹೆಗಡೆ, ಸಿದ್ದಾಪುರದ ರಾ|| ದೇವ ಈ ಮೂವರು ತಮ್ಮದೊಂದು ಪ್ರತ್ಯೇಕ ಪಕ್ಷ ಮಾಡಲು ಪ್ರಯತ್ನಿಸಿದ್ದುದು ಅವರ ಚಟುವಟಿಕೆಗಳ ಮೇಲಿಂದ ಒಡಮೆ ಕಾಣುತ್ತಿತ್ತು ಬಂದ ಬಂದ ಸದಸ್ಯರಿಗೆ ಅವರು ತಮ್ಮ ಬಲೆಯಲ್ಲಿ ಎಳೆಹೊಳ್ಳುವ ಪ್ರಯತ್ನ ನಡಿಸಿದ್ದರು ' ಇಸಗೆ ರಿ ಜಾತಿಯವರಿಗೆ ೧೩ ಆಸನಗಳನ್ನು ಕೊಡುವ ವಚನ ಕೊಟ್ಟು ರಾ|| ರಾ ಮಾಣಾಜ್ಯರನ್ನೂ ಅವರ ಗೆಳೆಯರನ್ನೂ ಒಳಕೊಂಡು ಒ ಪೆ ಗುಲೆಟ್ಟುವವರ ಹುರಿಯಾಳುದ ರಾ|| ಬಸಪ್ಪಗೌಡರೊಡನೆ ಅವನ ಕೊಡುತ್ತೇವೆಂದು ರಾ|| ಹೆಮಲೆಟ್ಟಿಯವರಿಗೂ, ರಾ|| ಪಾಟೀಲರ ಹುರಿಯಾಳಾದ ರಾ ಕೇಳಕರರಿಗೊಂದು ಅವನ ಕೊಡುತ್ತೇವೆಂದು ರಾ ಪಾಟೀಲರಿಗೂ ತಮ್ಮ ಬಲೆಯಲ್ಲಿ ಸಿಲುಕಿಸಿಕೊಂಡರು ಹೊತ್ತು ಹೋದಂತೆ ಮೂವರ ಕೂಟವು ಪಡಿಮೂವರಿಗೆ ಳುಪಾಯಿತು ಕೊಂಗ್ರೆಸ ಪಕ್ಷದೊಳಗಿನ ೧೩ ಜನರು ಒಂದಾದರು ಈ ಹೊಸ ಕೂಟದವರು ಮಧ್ಯಾಹ್ನವೇ "ಅನಂದಾಶ್ರಮ" ಭೋಜನಾಲಯದ ಆಟ್ಟದ ಮೇಲೆ ಕೂಟ ನಡಿಕೊಂಡರು ಕೊಂಗ್ರೆಸ ಪಕ್ಷದ ಸಭೆಗಳಲ್ಲಿ ಸಿವ್ಹಿಕ್ ಬೋರ್ಡಿನ ಸೂಚನೆಗಳ ಇಲ್ಲವೆ ಆಜ್ಞೆಗಳ ವಿರೆವಾರಿ ಹೇಗೆ ಮಾಡಬೇಕು, ಕೊಂಗ್ರೆಸ ಪಕ್ಷದ ಸೂತ್ರಗಳನ್ನು ತಮ್ಮ ಕೈಯಲ್ಲಿ ಹಿಡಕೊಂಡು ಬೇಗ ಶಾಲಾ ಬೋರ್ಡಿನಲ್ಲಿ ತಮ್ಮ ಉಮೇದ್ವಾರರನ್ನೆ ಆರಿಸತರಬೇಕು? ಇವೇ ಮೊದಲಾದ ಪ್ರಶ್ನೆಗಳ ವಿಚಾರ ನಡಿಸಿದ್ದರು

ಸಾಯಂಕಾಲ ೬ ಘಂಟೆಗೆ ಸತ್ಯಭಾಮಾ ಭುವನದ ಮಾಳಿಗೆಯ ಮೇಲೆ ಕೊಂಗ್ರೆಸ ಪಕ್ಷದ ಸಭೆ ಕೂಡಿತು ಪಕ್ಷದ ಹತ್ತೊಂಭತ್ತೂ ಸದಸ್ಯರು ಬಂದಿದ್ದರು ಸಿವ್ಹಿಕ್ ಬೋರ್ಡಿನ ಸುಬ್ಬರಾಜ ರಾ|| ತಿಮ್ಮಪ್ಪ ನಾಯಕ ಮತ್ತು ರಮಾಬಾಕ ರೆಟ್ಟಿ ಇವರಬ್ಬರು ಬಂದಿದ್ದರು ಹೊಗಿನವರಿಗೆ ಸಭೆಯಲ್ಲಿ ಪ್ರವೇಶವಿದ್ದಿಲ್ಲಿ ಬಾಗಿಲ್ಲಲ್ಲಿ ಧಣ್ಣವಾದ ಕಾವಲಿ ಡಲಾಗಿತ್ತು ನಾನು ಕೊಗಲೆಜೆಯ ನಿಂತು ಬರುಹಗಳೊಳ ಗಂದಿಂಗಲಿ ಕಟಿಕ ಳಿಗಿಂದಾಲಿ ಕೇಳಿಬಂದ ಸವಾಚಾರವನ್ನಷ್ಟೇ ಬರೆಹಾಕಿದ್ದೇನೆ ಅದನ್ನೇ ಇಲ್ಲಿ ಸಂಕ್ಷೇಪವಾಗಿ ಕೊಡುತ್ತೇನೆ

ಸಭಾಪತಿಸ್ಥಾನವನ್ನು ಪಕ್ಷ ಪ್ರಮುಖರಾದ ರಾ|| ಹರಿ ಪೈರು ಅಲಂಕರಿಸುತ್ತಲೆ ಆಧಿಕ ರಸ್ಥರ ಆಯ್ಕೆಯಾಯಿತು ರಾ|| ಹರಿ ಪೈರು ಅಧ್ಯಕ್ಷರಾಗಿಯೂ ರಾ|| ಸೂಪೂರೆಕರರು ಕಾರ್ಯದರ್ಶಿಗಳಾಗಿಯೂ, ಸಿ|| ಮುರುಮದಾರರು ಕೋಶಾಧ್ಯಕ್ಷರಾಗಿಯೂ, ರಾ ರಾಮನಾಯ್ಕರು ಪಕ್ಷದ ಪ್ರತಿನಿಧಿಗಳಾಗಿಯೂ ಆರಿಸಲ್ಪಟ್ಟರು ಸಿವ್ಹಿಕ್ ಬೋರ್ಡಿನ ಅಧ್ಯಕ್ಷೆಗೆ ವಿರೋಧವಾಗಿ ರಾ ದೇವ ಗೋಪಾಲಯ್ಯರು ಶಾಲಾ ಬೋರ್ಡಿನ ಚುನಾವಣೆಗೆ ಹುರಿಯಾಳಾಗಿ ನಿಂತಿದ್ದರು ಅವರು ತಮ್ಮ ಹುರಿಯಾಳುತನ ತಿರುಗಿ ತಕ್ಕೊಳ್ಳಲಕ್ಕೆಂದೂ ಗೊತ್ತಾಯಿತು

ಇಷ್ಟಾಗುತ್ತಲೇ ರಾ ಹೆಗಡೆಯವರು ಒಂದು ಪ್ರಶ್ನೆಯನ್ನೆತ್ತಿದರು ರಾ|| ಹರಿ ಪೈರು ಅಧ್ಯಕ್ಷರಾದ ಬಗ್ಗೆ ಅವರ ನ್ಯಕ್ತಿಯಾಕ್ಷೇಪವಿಲ್ಲವೆಂದೂ ಆದರೆ ಸಿವ್ಹಿಕ್ ಬೋರ್ಡಿನ ಸೂಚನೆಗಳನ್ನು ಪಾಲಿಸಲಾರೆನೆಂಬ ಸತ್ಯಾಗ್ರಹಿಯಂತೆ ಅಂಕೋಲೆಯಲ್ಲಿ ಅವರ ಗೆಳೆಯರು ಒಂದು ಸತ್ಯಾಗ್ರಹ ಸಮಾರಂಭ ಜರುಗಿಸಿದ್ದರು ಆ ಸಭೆಯಲ್ಲಿ ರಾ|| ಸುಬ್ರಾವ ಹಳದೀಪುರಕರರೊಡನೆ ಭಾಷಣಮಾಡಿತ್ತು ಮಾತಿನ ಭರದಲ್ಲಿ ರಾ|| ಹಳದೀಪುರಕರರು ಹಸ್ತಕ್ಷ ಪಾಂಧ್ಯವರ ಜಾತೀಯತೆಯನ್ನುದ್ದೇಶಿಸಿ ಕೆಲವು ಶಬ್ದಗಳನ್ನು ಆಡಿದ್ದರಂತೆ ಈ ಶಬ್ದಗಳನ್ನು ರಾ| ಹರಿಪೈರು ಯಾಕೆ ನಿವೇದಿಸಿಲ್ಲ? ರಾ ಹರಿಪೈರೆ ಮತವಾದರೂ ರಾ ಹಳದೀಪುರಕರರ ಮತದಂತೆಯೇ ಇರುತ್ತದೇನು? ಎಂದು ರಾ| ಹೆಗಡೆಯವರ ಪ್ರಶ್ನೆ! " ಆ ಸಭೆಯಲ್ಲಿ ನಾನೂ ಒಬ್ಬ ನಿಮಂತ್ರಿತನಾಗಿ ಹೋಗಿದ್ದೆ ರಾ| ಹಳದೀಪುರಕರರ ಮಾತನ್ನು ಅವರ ಪಿಂದಿಂದೆ ಮಾತಾಡಿದ ರಾ| ಶ್ರೀನಿವಾಸ ಹರಿ ಪೈರು ಖಂಡಿಸಿದ್ದುಂಟು ನಾನೂ ಕ್ಷಮೆ ಬೇಡಿದ್ದೆನೆ ರಾ| ಹಳದೀಪುರಕರರ ಮಾತುಗಳ ಬಗ್ಗೆ ಸತ್ಯಶೋಧಿಸಿ ಪ್ರಕಟಿಸಿದ ಸಂಗತಿಗಳು ಬಹಳ ವಿಮರ್ಶಸ್ಪದವಿವೆ " ಎಂದು ಅಧ್ಯಕ್ಷರು ಬುದ್ಧಿ ಹೇಳಿದರು ಇಂಥ ಪಿಲುಕಿಯನ್ನು ೦ ಹಂಪೈರು ಪತ್ರಿಕೆಗಳಲ್ಲಿ ಏಕೆ ಪ್ರಕಟಿಸಿಲಿಲ್ಲೆಂದು ರಾ| ದೇವರು ಕೇಳಿದರು! ಈ ಬಗ್ಗೆ ಮುಂದೆ ತುಸು ಚರ್ಚೆ ನಡೆದು ರಾ| ಹರಿಪೈರು ಕೊಂಗ್ರೆಸ ಪಕ್ಷದ ಅಧ್ಯಕ್ಷನಾತೆ ಯಿಂದಪತ್ರಿಕೆಗಳಮುಖಾಂತರರಾ|ಹಳದೀಪುರಕರರಭಾಷಣ ವನ್ನು ಬಲವಾಗಿ ನಿವೇದಿಸಬೇಕೆಂದು ನಿರ್ಣಯವಾಯಿತು! ಮುಂದಾಗುವ ಕೆಲಸಕ್ಕೆ ಇದೊಂದು ಪೂರ್ವಪೀಠಿಕೆಯಂತ ಲೂ ಈ ಚರ್ಚೆಯಿಂದ ಕಛಿಕರೊಳಗೆ ರಾ| ಹೆಗಡೆ ಮತ್ತು ದೇವರವರು ಜಾತಿ ವಿದ್ವೇಷದ ಬೀಜಗಳನ್ನು ಬಿತ್ತುವ ಪ್ರಯತ್ನ ಮಾಡುತ್ತಿದ್ದಾರಾಗಿಯೂ ದೀರ್ಘದರ್ಶಿಗಳಿಗೆ ಅಂಗಲೇ ಮನವರಿಕೆಯಾಯಿತು ಇಲ್ಲವಾದರೆ ಯಾವ ದೋ ಹೀನ ಸಮರೂಢಭಾವಲ್ಲಾದ ರಾ| ಹಳದೀಪುರಕರರ ಭಾಷಣದ ಚರ್ಚೆ ಕೊಂಗ್ರೆಸ ಪಕ್ಷದ ಸಭೆಯಲ್ಲಿ ಏತಕ್ಕೆ ಬೇಕಾಗಿತ್ತು ?

ಇಷ್ಟಾದ ಮೇಲೆ ರಾ| ತಿಮ್ಮಪ್ಪ ನಾಯಕರೆದ್ದು ಸಭಿಕರಿಗೆ ಸಿವ್ಹಿಕ್ ಬೋರ್ಡಿನ ಕೆಲವು ಸೂಚನೆಗಳನ್ನು ಅರುಹಿದರು ಆ ಸೂಚನೆಗಳು ಈ ಕೆಳಗಿನಂತಿದ್ದವು — (೧) ಯಾವದೇ ಕೊಂಗ್ರೆಸ ಕಮಿಟಿಯ ಕಾರ್ಯಕರ್ತರು ಶಾಲಾ ಬೋರ್ಡಿಗೆ ಆರಿಸಲ್ಪಡಬಾರದು (೨) ಹಿಂದುಳಿದ ಜಾತಿ ಯವರಿಗಾಗಿ ಕಂದಿಟ್ಟ ಆಸನಕ್ಕೆ ಯಾವುದೇ ಹಿಂದುಳಿದ ವ್ಯಕ್ತಿಯನ್ನೆ ನಿಲ್ಲಿಸಬೇಕು (೩) ಶಿಕ್ಷಣ ತಜ್ಞರ ಬಗ್ಗೆ ಕಾದಿಟ್ಟ ೨ ಆಸನಗಳಲ್ಲಿ ಒಂದು ಆಸನವನ್ನು ರಾ|| ಸೂಪೂರೇಕರರಿಗೆ ಕೊಡಬೇಕು (ಜಿಲ್ಲಾಧ್ಯಕ್ಷರೂ ಹೀಗೆಯೇ ಪತ್ರ ಬರೆದಿದ್ದರಂತೆ) (೪) ಕೊಂಗ್ರೆಸ ಪಕ್ಷದ ಕುರಿಯಾಳುಗಳು ಏಪಿಥಿರಿಗಳೂ, ಕೊಂಗ್ರೆಸಿನ್ಯ ಕೊಂಗ್ರೆಸ ಸಭಾಸದರೂ ಇರಬೇಕು (೫) ಜಿ ಲೋ ಬೋರ್ಡ ಚುನಾವಣೆಯಲ್ಲಿ ನೀತ ಕೊಂಗ್ರೆಸ ಹುರಿಯಾಳುಗಳಿಗೆ ಶಾಲಾ ಬೋರ್ಡಿಗೆ ಆರಿತರಬೇಕು " ಆನಂದಾಶ್ರಮ"ದಲ್ಲಿ ಸಭೆ ನೀರಿದ ಕೂಟದವರಿಗೆ ಈ ಸೂಚನೆಗಳು ಮಾನ್ಯವಾಗಿಲಿಲ್ಲ ಮಾನ್ಯನಾಗುವಂತಿದ್ದಿಲ್ಲ! ಆದ್ದರಿಂದ ಆವಶ್ಯಕತೆಯೂ ಹೋಲಾ ಹಲವನ್ನೆಳ್ಳಿಸಿದರು! "ಈ ಸೂಚನೆಗಳನ್ನು ಈ ಮುಂಚೆ ಯೇ ಯಾಕೆ ಜಾರೀಕರಿಸಿಲ್ಲ?", 'ಶಾಲಾ ಬೋರ್ಡಿನ ಚುನಾವಣೆಯಲ್ಲಿ ಸಿವ್ಹಿಕ್ ಬೋರ್ಡಿನವರು ಕೈಹಾಕಲಾರ ರೆಂದು ಹೇಳಿ, ಈಗ ಈ ಸೂಚನೆಗಳನ್ನು ಏಕೆ ಮಾಡು ವರು ?" 'ಹೀಗಿದ್ದರೆ ಸಿವ್ಹಿಕ್ ಬೋರ್ಡಿನವೇ ಶಾಲಾ ಬೋರ್ಡಿನ ಸದಸ್ಯರನ್ನು ಆರಿಸಬಹುದಿತ್ತಲ್ಲ?" ಹೀಗೆ ಒಂದಷ್ಟು, ಎರಡಷ್ಟು, ನೂರಂಶ ಆಕ್ಷೇಪಗಳು ಮುಂದೆ ಬಂದವು! ಸಿವ್ಹಿಕ್ ಬೋರ್ಡಿಗೆ ಬಡಿಕೊಟ್ಟ ಪ್ರಜಾಪ್ರತ್ರ ನಿನೆಯಿರಿ ಎಂದು ಆಧ್ಯಕ್ಷರ' ಬಹಳ ಹೇಳಿದರೂ ಸದಸ್ಯರು ಕಿವಿಗೊಡಲಿಲ್ಲ! (ನಡುವೆ ೯ ಘಂಟೆಗೆ ಸಭೆಕರು ಊಟ ಮಾಡಿ ಬಂದರು) "ಜಗತ್ತಿನಲ್ಲಿ ಪ್ರತಿಯೆಬ್ಬನೂ ಸ್ವತಂತ್ರನಾದ್ದಾನೆ ಒಬ್ಬರು ಚೀಲಿಬ್ಬರ ಮೇಲೆ ಅಧಿಕಾರ ನಡಿಸಲಿತ್ತಿಸುವದು ಉಚಿತವಲ್ಲ! ನಾನು ಸಿವ್ಹಿಕ್ ಬೋರ್ಡಿನ ಸೂಚನೆಗಳನ್ನು ಪಾಲಿಸಲಾರೆನು" ಎಂದು ಬಾಯ್ದೋ ದರ ರುಮಾ ನಾಯ್ಕರು "ಜಗನೆ ಮಾಡಿದರು' ಕೊನೆಗೆ ಸಿವ್ಹಿಕ್ ಬೋರ್ಡಿನ ಮಾತು ಕೇಳತಕ್ಕದ್ದಿಲ್ಲವೆ ? ಬಾಲು ಮಂತ್ರ ಅಭಿಪ್ರಾಯವಾಯಿತು! ಈ ಎಲ್ಲ ಚರ್ಚೆ ಕೇಳಿ ರಾ|| ತಿಮ್ಮಪ್ಪ ನಾಯಕರಿಗೆ ಬಹಳ ಕೆಡಕೆನಿಸಿತು "ನಾನು ಸ್ವತಃ ಈ ಸೂಚನೆಗಳನ್ನು ಮಾಡಿದ್ದೇನೆಂದು ಕಳಿಯಬೇಡಿ ಬೋರ್ಡಿನ ಸೂಚನೆಗಳನ್ನು ತಮಗೆ ಕಿರಿಸಿದ್ದೇನೆ ಮನ್ನಿಸುವದಾದರೆ ಮನ್ನಿಸಿರಿ ಇಲ್ಲದಿದ್ದರೆ ಬಿಡಿರಿ ನಾನೀಗ ಇಷ್ಟೆ ಕೂಡ್ತುಲಂಗೆ!" ಎಂದು ಅವರು ಸಭೆಪೆ ಂದ ಹೊರಟರು "ನಮ್ಮ ಅಂಬೋಣ ನಾವು ಕೇಳಿದೆವ್ತೆ ಈಗ

(ಪುರವಣಿ ನೋಡಿರಿ)

ವಾರ್ತೆಗಳು.

(ಗಂತೇ ಮುನ್ನಾಂದ ಮುಂದರಿಸ್ದು)

ಗದ್ದರಿಸ್ದವ್ದಂದ ಸರಕಾರದಿಂದ ನೇಮಿಸಲ್ಪಟ್ಟಿ ಸಭಾ ಸದರು ಡಿ|| ಕಮಿಶನರರ ಅಂಬೋಣದಂತೆಯೇ ಮತ ಕೊಡಲು ಬದ್ಧರೆಂದು ಡಿ|| ಕಮಿಶನರರ ಅಂಬೋಣ ಹಾಗೆ ಅವರು ಬದ್ಧರಲ್ಲವಾಗಿಯೂ, ಲೋಕಕ್ರತ್ತಿನಿಧಿಗಳೆಂದು ಸರಕಾರವು ಅವರನ್ನು ನೇಮಿಸಿರುಕ್ಕಾಗಿಯೂ, ಇಷ್ಟ ಕಂಡಂತೆ ಅವರು ಮತ ಕೊಡಬಹುದಾಗಿಯೂ, ಲೋಕಶಿನೆಯ ಎಕ್ಕ ಸಭಾಸದರೂ ಸರಕಾರನಿಯುಕ್ತ ಸಭಾಸದರೂ ಪಾದಿ ಸುತ್ತಾರೆ. ಡಿ|| ಕಮಿಶನರರ ಅಂಬೋಣದಂತೆ ಮೈನಿಸಿಪಾಲಿಟಿಯಲ್ಲಿ ತೀರ್ಮಾನವಾಗುವದಿದ್ದರೆ, ೧೩ ಸಭಾಸದರಲ್ಲಿ ೯ ಮಂದಿ ಸಭಾಸದರು ಸ್ವತಂತ್ರ ವಿಚಾರ ಮಾಡದೆ ಡಿ|| ಕಮಿಶನರರ ಅಂಬೋಣ ದಂತೆ ಕಣ್ಮುಚ್ಚಿ ಮತತೆಗೊಡುವದಿದ್ದರೆ ಮ್ಯುನಿಸಿಪಾಲಿಟಿಯಲ್ಲಿ ಸಭೆಸೇರಿ ಚರ್ಚಿಸುವ ಕೆಲಸವೇಕೆಂದು ಲೋಕನಿಯುಕ್ತ ಸಭಾಸದರು ದೃಷ್ಟಿಸುತ್ತಾರೆ ನಿಸ್ಸಾ[illegible]ಣ ಪಂಜಾಬ ಪ್ರಾಂತದಲ್ಲಿ ಸೌರುತ್ತದೆ ಆದರಿಂದ ಪಂಜಾಬ ಸರಕಾರವು ಈ ಪ್ರಕರಣವನ್ನು ಸನುಾಲೋಚಿಸ ತ್ತಿದೆ

— ಹಿಂದುಧರ್ಮ ಮೇಲಿನ ಸಂಕಟವನ್ನು ನಿವಾರಿಸುವ ದಕ್ಕಾಗಿ ಪುಣೆಯೊಳಗೆ ಶ್ರೀ|| ಮಾರುತಿ ಮಂದಿರದಲ್ಲಿ 'ಶ್ರೀ ರಾಮ ಜಯ ರಾಮ ಜಯ ಜಯ್ಯರಾಮ' ಮಹಾ ಮಂತ್ರದ ಜಪಾನುಷ್ಠಾನ ನಡೆದಿದೆ ಅಧಿಕ ಶ್ರಾವಣ ೩೦ಸೆ೦ಬ್ರುಗೆ ೧೩ ಕೋಟಿ ಜಪವಾಗಬೇಕೆಂದು ಸಂಕಲ್ಪ ಮಾಡಲಾಗಿದ್ದು ಭಾ.ವಿಕರು ತಮ್ಮ ತಮ್ಮ ಮನೆಯಲ್ಲಿ ಕೂಡುಕೊಂಡು ಧರ್ಮಸಂಕಟನಿವಾರ ಣದ ಸಂಕಲ್ಪಮಾಡಿ ಯ ದಾಕಡ್ಡೆ ಜಪ ಮಾಡಬೇಕು ಮತ್ತು ಜಪಸಂಖ್ಯೆಯನ್ನು ಪೂರ್ಣಗೆ ಶ್ರೀ ನೋವರ್ಧನ ಸಂಸ್ಥೆಗೆ ಕಳಿಸಬೇಕೆಂದು ಶ್ರೀ ಚಿಂಬೆಂಡೇ ಮಹಾರಾಜರು ಪ್ರಕಟಿಸಿ ಹೊರಡಿಸಿದ್ದಾರೆ ಅಲ್ಲಲ್ಲಿಯ ಛಾವಿ ಕರು ಈ ಸತ್ಕಾರ್ಯದಲ್ಲಿ ನೆರವಾಗಬೇಕು

— ಸಿಮ್ಲಾದೊಳಗೆ ಬಿಹಾರ ಪ್ರಾಂತದ ಮುಖ್ಯ ಪ್ರಧಾನರ ದ ಶ್ರಾ|| ಸಯ್ಯದ ಮಹಮ್ಮದರವರ ಅಧ್ಯಕ್ಷತೆಯ ಲ್ಲಿ ಹಿಂದುಸ್ಥಾನ ಸರಕಾರವು ನೇಮಿಸಿದ ಪ್ರೌಢಶಿಕ್ಷಣ ಸಲಹೆಗಾರ ಮಂಡಳವು, ಪ್ರೌಢಶಿಕ್ಷಣ ಪ್ರಸಾರಕ್ಕಾಗಿ ಪ್ರತಿ ವರ್ಷ ಹಿಂದುಸ್ಥಾನ ಸರಕಾರವು ೯ ಕೋಟಿ ರೂಪಾಯಿಗಳನ್ನು ಎಲ್ಲ ಪ್ರಾಂತಿಕ ಸರಕಾರಗಳಿಗೆ ಪ್ರವ್ಯಸಹಾಯ ಮಾಡಬೇಕಂದು ಶಿಫಾರಸು ಮಾಡಿರುತ್ತದೆ ಇದಲ್ಲದೆ ವಿಶ್ವವಿದ್ಯಾಲ ಯದ ಶಿಕ್ಷಣಕ್ರಮವನುದಲ್ಲಿ ಸವಾಜಸೇವೆಯ ವಿಷಯ ವನ್ನೊಂದು ಸೇರಿಸಿ ವಿದ್ಯಾರ್ಥಿಗಳಿಗೆ ಅದನ್ನು ಕಲಿ ಸುವಂತೆ ಏರ್ಪಾಟು ಮಾಡಬೇಕಾಗಿಯೂ ಸಲಹೆಗಾ ರ ಮಂಡಳವು ಶಿಫಾರಸು ಮಾಡಿದೆ ಈ ಮಂಡಳ ದಲ್ಲಿ ಬೇರೆ ಬೇರೆ ಪ್ರಾಂತಗಳೊಳಗಿನ ವಿದ್ಯಾಧಿಕಾರಿ ಗಳೂ ವಿದ್ಯಾ ಇಲಾಖೆಯ ಪ್ರಥ ನೆರೂ ಹಿಂದುಸ್ಥಾನ ಸರಕಾರದ ವಿದ್ಯಾ ಇಲಾಖೆಯ ಕಮಿಶನರರೂ ಇರುತ್ತಾರೆ ಆದರಿಂದ ಈ ವಿಷಯದ ಶಿಫಾರಸು ನಂತೆ ಹಿಂದುಸ್ಥಾನ ಸರಕಾರವು ಪ್ರಾಂತಿಕ ಸರ ಕಾರಗಳಿಗೆ ದ್ರವ್ಯಸಹಾಯ ಮಾಡುವದಾಗಿ ನಿರೀ ಕ್ಷಿಸಲಾಗಿದೆ

— ಸಿಂಧ ಪ್ರಾಂತದ ಹೈದ್ರಾಬಾದದೊಳಗಿನ ಮೆಂ ಸ್ಟೇಟ್ ಕೋರ್ಟಿನಲ್ಲಿ ಒಂದು ಖಟ್ಲೆ ನಡೆದಿತ್ತು ಆ ಖಟ್ಲೆಯಲ್ಲಿ ಅಲ್ಲಿಯ ಒಬ್ಬ ಪತ್ರಕರ್ತರಿಗೆ ಸಾಕ್ಷಿಗೆ ಕರೆದಿತ್ತು ಸಕ್ಷದಲ್ಲಿ ಪ್ರಕಟವಾದ ಸುದ್ದಿಯನ್ನು ಕೊಟ್ಟವರ್ಯಾರೆಂದು ವಕೀಲರು ೨೯೦ ಪ್ರಶ್ನೆಗೆ ಪತ್ರ ಕರ್ತರು ಉತ್ತರ ಕೊಡಲೊಪ್ಪಲಿಲ್ಲ ಹಾಗೆ ತಮ್ಮ ಸುದ್ದಿಗಾರರ ಹೆಸರನ್ನು ಹೊರಗೆಡಹಲು ಕಾಯಿದೆ ಯಂತೆ ತಾವು ಬದ್ಧರಲ್ಲವಾಗಿ ಅವರು ನುಡಿದರು. ಮೆಜಿಸ್ಟ್ರೇಟರು ಈ ಅಪ್ಪೀಸವನ್ನು ಮನ್ನಿಸಿ, ಆ ಪ್ರಶ್ನೆ ಯನ್ನು ತಿರಸ್ಕರಿಸಿದ್ದಾರೆ

— ಮಧುರೆಯ ಶ್ರೀ ವಿಾನಾಕ್ಷಿ ದೇವಸ್ಥಾನದೊಳಗೆ ಹರಿಜನರು ಪ್ರವೇಶಿಸಬಹುದಾಗಿ ನಿರ್ಣಯವಾಗಿದೆ ದಕ್ಷಿಣ ಹಿಂದುಸ್ಥಾನದಲ್ಲಿ ಶ್ರೀ ವಿಾನಾಕ್ಷಿ ದೇವಸ್ಥಾ ನದಷ್ಟು ಪ್ರಚಂಡ ದೇವಮಂದಿರ ಬೇರೊಂದಿಲ್ಲ ಇಷ್ಟಿದ್ದರೂ ದೇವಸ್ಥಾನದ ಆಡಳ ತೆದಾರರು ಪೂರ್ವಪರಂಪರೆಗೂ ಸಂಪ್ರದಾಯಕ್ಕೂ ವಿರುದ್ಧವಾಗಿ ಹರಿಜನ ಪ್ರವೇಶವನ್ನು ಆಜ್ಞಾಪಿಸದ ಬಗ್ಗೆ ಕೆಲವು ಸಜ್ಜನರಿಗೆ ಪ್ರಕ್ಷೋಭೆಗೊಂಡು ಮಧುರೆಯ ಸಬಜಜ್ಜ ಕೋರ್ಟಿನಲ್ಲಿ ಆ ಆಜ್ಞೆಯ ನ್ನು ಪಾಲಿಸಿ ಆಗುವ ಹರಿಜನ ಪ್ರವೇಶವನ್ನು ಪ್ರತಿ ಬಂಧಿಸಬೇಕೆಂದು ನಿರ್ಬಂಧಕ ಹುಕುಮನ್ನು ಬೇಡಿ ದಾವೆ ದಾಖಲಕಡಿಸಿದರು ಅದನ್ನು ಸಬಜಜ್ಜರು ತಿರಸ್ಕರಿಸಿದ್ದಾರೆ ಸಬಜಜ್ಜರ ಹುಕುಮಿನ ವಿರುದ್ಧ ಮಧುರೆಯ ಡಿಸ್ಟ್ರಿಕ್ಟ ಕೋರ್ಟಿನಲ್ಲಿ ಅಪೀಲು ದಾಖಲು ಆಗಿದೆ ಹರಿಜನ ಪ್ರವೇಶಕ್ಕೆ ವಿರುದ್ಧವಾಗಿರುವ ಸಂಪ್ರದಾಯ, ರೂಢಿ, ಶಾಸ್ತ್ರ, ಪರಂಪರೆಗಳನ್ನು ಉಲ್ಲಾಸಿಸಿ ಹರಿಜನ ಪ್ರವೇಶಕ್ಕೆ ಅನುಜ್ಞೆ ಕೊಡುವ ' ದೇವಸ್ಥಾನದ ಆಡಳತೆದಾರರ ಮೇಲೆ ಯಾವದೇ ಪ್ರಕಾರ ಸ್ಕಂಕ ಹೊಣೆಗಾರಿಕೆ ಇಲ್ಲವಾಗಿಯೂ, ಹರಿಜನ ಪ್ರವೇಶದ ಉಪಕ್ರಮ ದಿಂದುಂಟಾದ ಯಾವತ್ತೂ ನಷ್ಟಕ್ಕೆ ಆಯಾ ಶ್ರೀ ದೇವರ ದಂಪಾರಿಗಳೇ ಹೊಣೆಗಾರರೆಂದೂ ಮದ್ರಾ ಸದ ಗವ್ವರ್ನರರು ರಾಜಾಧಿಕಾರದಿಂದ ರಾಜಾಜ್ಞೆ ಯನ್ನು ಹೊರಡಿಸಿ ದೇವಸ್ಥಾನದ ಆಡಳತೆದಾರರಿಗೆ ಕಾಪಾಡಿದ್ದಾರೆ ವಿಾನಾಕ್ಷಿ ದೇವ ಲಯದಲ್ಲಿ ಹರಿ ಜನರಿಗೆ ಪ್ರವೇಶ ಕೊಟ್ಟ ಬಗ್ಗೆ ಮೇಹಾತ್ಮರು ಆನಂದ ಭರತರಾಗಿದ್ದಾರೆ. ಇದರಂತೆಯೇ ದಕ್ಷಿಣ ಹಿಂದು ಸ್ಥಾನದೊಳಗಿನ ಇತರ ದೇವಾಲಯದವರೂ ಹರಿಜನ ರಿಗೆ ಪ್ರವೇಶ ಕೊಡುವ ಏರ್ಪಾಟು ಮಾಡುವರಾಗಿ ನಂಬಿದ್ದಾರೆ. ಆಡಳತೆದಾರರು ಗಾಬರಿ ಮಾಡಬರ ದಾಗಿಯೂ ದೇವದರ್ಶನ ಪಡೆಯುವವರ ಮನ ಪೊಲಿಸಿ ಹರಿಜನರಿಗೆ ಪ್ರವೇಶ ಸಿಗುವ ಏರ್ಪಾಟ್ಟು ಮಾಡಬೇಕಾಗಿಯೂ ಮಹಾತ್ಮರು ಸಲಹೆ ಕೊಡು ತ್ತಾರೆ ಹರಿಜನ ಪ್ರವೇಶ-ಉತ್ತಾಹಿಗಳು ಧ್ಯಾನದಲ್ಲಿ ಡಕಕ್ಕಿಯ ವಿಷಯ

—ಮಧ್ಯಪ್ರಾಂತದ ಬ ಲಾಘಾಟದೊಳಗಿನ ಸರಕಾರಿ ಹೈಸ್ಕೂಲಿನಲ್ಲಿ ಒಂದು ವಿಶೇಷ್ಟ ಪ್ರಕಾರ ನೆಡೆದಿದೆ ಊಗಿನ ಕಾಲದಲ್ಲಿ ಹಿಂದು ಹುಡುಗರು ಚಂಡಿಕೆ ಇಡುವದು ಯಾಗುವಲೂ ಆಕರೂಪ ಸಂಗತಿ ! ಆದರೆ ಬಾಲಘಾಟದೊಳಗಿನ ಸರಕಾರಿ ಹೈಸ್ಕೂಲಿ ನಲ್ಲಿ ಹಿಂದು ವಿದ್ಯಾರ್ಥಿಗಳಿಲ್ಲ ಚಂಡಿಕೆಗಳವೆ ಅಲ್ಲಿ ಮುಸಲ್ಮಾನ ಮಾಸ್ತ್ತರರ ದರಬಾರು ! ಒಂದು ದಿವಸ ಏನ ಯಿತೋ ಏನೋ ! ಒಬ್ಬ ಮುಸಲ್ಮಾನ ಮಾಸ್ತ್ತರರು ಹುಡುಗಿನಿಗೆ ಹಿಡಿಯುವದು, ಮತ್ತೊ ಬ್ಬ ಮಾಸ್ತ್ತರರು ಚಂಡಿಕೆ ಕೊಯ್ಯುವದು, ಈ ಪ್ರಕಾ ರ ಎಲ್ಲ ಹಿಂದು ವಿದ್ಯಾರ್ಥಿಗಳು ಚಂಡಿಕೆಗಳು ಕೊಯ್ದು ಹೋದವು ಕಾಪು ಇಡಲಿಕ್ಕೆ ಅನುಕೂಲವಾಯಿತು.

— ಪಂಜಾಬ ಸರಕಾರವ್ದ ಸ್ತ್ರೀಯರ ಉದ್ಧಾರಕ್ಕಾಗಿ ೬ ವರ್ಷದ ಕಾರ್ಯಕ್ರಮವನ್ನು ಕೈಕೊಂಡಿದ್ದ ಗೃಹ ಕೈಕ್ಕಿ, ಕೃಷಿಕರ್ಮ, ಗಾನೋದ್ಯೋಗದಲ್ಲಿ ಶಿಕ್ಷಣ ಪಡೆದ ೩೦ ಮಂದಿ ಸ್ತ್ರೀಯರಿಗೆ ಗ್ರಾಮಗಳಲ್ಲಿ ಶಿಕ್ಷಣ ಕೊಡುವದಕ್ಕಾಗಿ ನೇಮಿಸಿಕೆಯಲಿದೆ ಅವರು ಗ್ರಾಮ-ನಿವಾಸಿ ಸ್ತ್ರೀಯರಿಗೆ ಶಿಕ್ಷಣ ಕೊಟ್ಟು ಗ್ರಾಮದ ಆರೋಗ್ಯವನ್ನೂ ಸಂಪತ್ತನ್ನೂ ಬೆಳಸಿಕೊಳ್ಳಬೋಧಿ ಸುವರು ಇದಲ್ಲದೆ ಇಡೀ ಪ್ರಾಂತದೊಳಗೆ ಸ್ತ್ರೀಯರ ಉತ್ಕರ್ಷಕ್ಕಾಗಿ ಸಲಹೆ ಕೊಡಲು ಪಂಜಾಬ ಸರಕಾ ವು ಲಂಡೋರದಲ್ಲಿ ಮುಖ್ಯ ಮುಖ್ಯ ಸ್ತ್ರೀಯರ ಸಲಹೆ ಮಂಡಳವನ್ನೊಂದು ನೇವು ನಿರೀಕ್ಷಿಸಿದೆ

ಚಕ್ರಬಿಂದು

ಮಕ್ಕಳ ಮರಣವನ್ನು ತಪ್ಪಿಸುವುದು.

(ರಜಿಸ್ಟರ್ಡ್) (ಲಿವರ ಕ್ಯೂರ್)

ಬಿಜಪ್ಪಿ, ಕಲಕತ್ತಾ, ಮುಂಬಯಿ, ಮದ್ರಾಸ, ಬೆಂಗಳೂರು, ಮಂಗಳೂರು.

Spleen and Liver Enlargement for Children.

ಮಕ್ಕಳ ಯಕೃತ್, ಪ್ಲೀಹ, ಹೊಟ್ಟೆ ದೊಡ್ಡದಾಗುವಿಕೆ, ಹಸುರು ನಂಗಳು, ಕಾಮಿಲೆ, ಗಡ್ಡೆರೋಗ, ಕೋವೆರೋಗ, ಮೈ-ಕೈ ಬಾವುಗಳಿಗೆ ದಿವ್ಯೌಷಧ !

1 ತಿಂಗಳಿಗೆ ಸಾಕಾಗುವ ಔಷಧದ ಬೆಲೆ ರೂ 3

ಏತಕ್ಕೆ ಚಿಂತಿಸುವಿರಿ?

ಆಸ್ಪೆಶುಮಾಜಲದ ವರೆಗೂ 43 ವರುಷಗಳಿಂದ ಕೇರ್ಚ ಪಡೆದಿರುವ ಮಕ್ಕಳ ಸ್ಪ್ಲೀನ ಮತ್ತು ಲಿವ್ವರ್ ವ್ಯಾಧಿಗಳಿಗೆ ಇದೊಂದೇ ರಾಜಔಷಧವಾಗಿದೆ

ಡಾ| ಏ ಎನ್ ಶ್ರೀನಿವಾಸರಾವ್ ಲಿಮ್ಟೆಡ್ ಸ್ಥಳಲಿಸ್ಟ್,
ಎಂ ವಿ ಪ್ರಾಸಂಕ ಔಷಧಾಲಯ,
ಶಿವಮೊಗ್ಗಾ

ಇವರಲ್ಲಿ ವಿಚಾರಿಸಿರಿ

ಶಿರ್ ಏಜಂಟ್—
ಸುಬ್ಬಾರಾಯ ಸೀತಾರಾಮ ಹೆಗಡೆ
ಕಮಟಿಯ ಸಜಂಟ
ದೇವಪ್ಪಾ ಆಯ್ಯಾ ನಾಯ್ಕ

ಕಾನಡಾ ವೃತ್ತ

ಕನ್ನಡ ನಾಡಿನ ಪ್ರಮುಖ

ರಾಷ್ಟ್ರೀಯ ವಾರಪತ್ರಿಕೆ

ಜಾಹೀರಾತುದಾರರಿಗೆ ಅನುಕೂಲ ಸಾಧನ

ರಾಷ್ಟ್ರಪ್ರೇಮಿ ಕನ್ನಡಿಗರು ಚಂದಾದಾರರಾಗಿ

ಪ್ರೊ ಕ್ಯಾ ಹಿ ಸ ಬೀ ಕು

ಮುಂಬಯಿಯಲ್ಲಿ

ಉತ್ಕೃಷ್ಟ ನಿವಾಸ ವ್ಯವಸ್ಥೆ

ಪ್ರವಾಸಿಗಳಿಗೂ ವಿದ್ಯಾರ್ಥಿಗಳಿಗೂ

ಬಹಳ ಅನುಕೂಲ!

ವೆಲ್‌ಕಮ್

ಹಿಂದೂ ಹೊಟೆಲ್

ತಾರಾ ಪ್ಯಾಸ್, ಗಿರಗಾಂವ

ಮುಂಬಯಿ.

ಮಧ್ಯವರ್ತಿ ಸ್ಥಳ ಉತ್ಕೃಷ್ಟ ಊಟ!

ಉತ್ತಮ ಹವೆಯ ಕೋಣೆಗಳು!

ಊಟ-ಉಳಿಕೊಳ್ಳುವ ಅನುಕೂಲತೆ!!

ವಿದ್ಯಾರ್ಥಿಗಳಿಗೆ

ಪ್ರತ್ಯೇಕ ರಿಯಾಯತಿ ದರಗಳಿವೆ.

"ಸ್ವಾರ ಆಫ್ ಕೆನರಾ ಪ್ರೆಸ್",

ಕುಮಟಾ.

ನಮ್ಮಲ್ಲಿ ಕನ್ನಡ, ಮರಾಠಿ, ಇಂಗ್ಲಿಷ ಗುಜರಾಥಿ ಭಾಷೆಯಿಂದ ಬೇರಾದ ನಮೂನೆಯ ಕಲರ ಪ್ರಿಂಟಿಂಗ ಪಗೈರೆ ಸಣ್ಣ ದೊಡ್ಡ ಛಾಪಾ ಕೆಲಸಗಳು, ಪುಸ್ತಕ ಮುದ್ರಣವೂ, ರೂಲಿಂಗ-ಬೈಂಡಿಂಗ ಕೆಲಸವೂ ಉತ್ತಮವಾಗಿ ಸುಲಭ ದರದಲ್ಲಿ ತಕ್ಕ ಕಾಲಕ್ಕೆ ತಯಾರಿಸಿ ಕೊಡಲಾಗುವದು! ನಿಮ್ಮ ಕೆಲಸಗಳನ್ನು ನಮ್ಮಲ್ಲಿಗೇ ಕಳಿಸಿರಿ ಒಮ್ಮೆ ಅನುಭವ ತಕ್ಕೊಂಡು ನೋಡಿರಿ!

ದಕ್ಷಿಣ ಭಾರತ ಹಿಂದೀ ಪ್ರಚಾರ ಸಭಾ,

ಮದ್ರಾಸ ಇವರ

ಹಿಂದೀ ಪುಸ್ತಕಗಳು.

ಡಿ। ಸ್ಕೂಲ ಬೋರ್ಡಿನಿಂದ ಹೊಸದಾಗಿ ಮಂಜೂರಾದ

ಉರ್ದು ಪುಸ್ತಕಗಳು

ಎಲ್ಲ ತರದ ಶಾಲೋಪಯೋಗಿ

ಕನ್ನಡ ಪುಸ್ತಕಗಳು

ರಕಂ ಅಗುಮಾ ಚಟ್ಟರ ಅಗಿಯೂ ನಮ್ಮಲ್ಲಿ ಸಿಗುತ್ತವೆ

ಬುಕ್ ಸೆಲ್ಲರಿಂಗೂ ಶಿಕ್ಷಕರಿಗೂ

ಯೋಗ್ಯ ಕಮಿಶನ್ ಕೊಡಲಾಗುವದು

ದಿ ನ್ಯೂ ಸರಸ್ವತಿ ಪುಬಜಿಸ್ಟಿ ಕುಮಟಾ

ಶ್ರೀಧನ್ವಂತರಿ ಕೆಮಿಕಲ್ ವರ್ಕ್ಸ ಕಾರ್ಯಾಲಯ

TRADE MARK

ಪನವೇಲ ಕುಲಾಬಾ

— ಈ ಸಂಸ್ಥೆಯ —

ಬಾಣಂತಿತನದಲ್ಲಿ ಮತ್ತು ಅಶಕ್ತತೆಯಮೇಲೆ ಉಪಯುಕ್ತ

ವಿಷಧವು

ಅಭ್ರಯೋಹ

ABHRALOHA

ದೊರೆಯುವ ಸ್ಥಳ—

ಕಾರವಾರ ಮುಸಸರ್ಮುಸುಮುದಾರ-ಕಸವೇಳರಬ್ಬದಸರ್

ಅಂಕೋಲಾ ದಿ ಸ್ಟೇಶನರಿ ಡಿಪೋ ॥ಕುಮಟಾ ದೇವಕ್ಕಾ

ಆಯ್ಯಾನಯ್ಯ ॥ ಹೊನ್ನಾವರ - ಕಲ್ಯಾಣಪುರ ಪ್ರದರ್ಸ

ದಿ ಬೋಂಬೆ ಲ್ಯೈಫ್ ಎಶ್ಯೂರನ್ಸ ಕಂಪೆನಿ, ಲಿಮಿಟಿಡ್

ಸ್ಥಾಪನೆ 1908.

ಈ ಕಂಪನಿಯು ಪೂರ್ಣ ಹಿಂದೀ ಇಷ್ಟು, ಇದರ ಕಂತಿನ ದರಗಳೂ, ಶರುಗಳೂ ಬಹಳ ಸಾಯಿಹವ್ವ ಇವೆ, ಕಂಪೆನಿಯ ಹಣವು ಸರಕಾರಿ ಪ್ರೊ ನೋಟುಗಳಲ್ಲಿಯೂ, ಇಂಡಿಯನ್ ಪ್ರಸಿ ಎಕ್ಟಿಸ ನಿಯಮಗಳಂತೆ ಜವಾಬ್ದಾರಿಯ ಸೆಕ್ಯೂರಿಟಿಗಳಲ್ಲಿಯೂ ಇಡಲ್ಪಟ್ಟಿದೆ

ಮುಲ್ಟಿಪಲ್ ಬೆನಿಫಿಟ್ ಎಂಬ ಕಲಮು ವಿಮೆದಾರರಿಗೆ ಅತಿಶಯ ಅಧಿಕರವಾಗಿದೆ.

ಸವಿಸ್ತರ ಮಾಹಿತಿ ಸ್ಥಳಿಕ ಏಜಂಟರ ಕಡೆಗೆ ಅಥವಾ ಪತ್ರದ್ವಾರದಿಂದ ಕೇಳಿಗೆ ವಿಳಾಸಕ್ಕೆ ಬರೆದಲ್ಲಿ ಸಿಗುವದು.

Kumta Agents

D K Nayak Bros
K. N Nayak
Honavar Agent
R V. Prabhu

K. PadmanabhaRao & Sons.

BELGAUM

Chief Agents for

Karnatak Districts & S M States

ಸುಲಭ ಕ್ರಯ! ಡಾಕ್ಟರ ಜೀ. ಬೀ ಯವರ ಸುಗಂಧಿ ನಕ್ಷತ್ರದ ಪುಡಿ. ಸುಲಭ ಕ್ರಯ ಲೋಕಪ್ರಸಿದ್ಧವಾದ ಈ ಸುಗಂಧ ನಕ್ಷತ್ರದ ಪುಡಿಯು ಕಂದು ಹಿಡಿಯುಳ್ಳ ಟಿನ್ ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಬೆಳ್ಳಗ್ಯಕಾಪತ್ರಗಳನ್ನು ಕೊಟ್ಟಿರುವರು ಪ್ರಸಿದ್ಧವಾದ ಈ ನಕ್ಷತ್ರದ ಪುಡಿಯಿಂದ ಸ್ವಲ್ಪ ಪಾಗುವ ವ್ಯಾಧಿಗಳು ಯಾವುವೆಂದರೆ— ಪಿತ್ತ, ಒಂಟಿಕಲೆನೋವು ಕಲೆಯಲ್ಲಿಯು ರೋಗಗಳು, ಕಣ್ಣುಗಳಲ್ಲಿ ಕಾಂಟಾಗಳಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೀಲ್ಪರ್ಟ್ಟ ವ್ಯಾಧಿಗಳನ್ನೂ ಸ್ವಸ್ಥ ಪಡಿಸಿ ಜ್ವಾಲಕ ಕಕ್ತಿಯನ್ನು ಹೆಚ್ಚಿಸುವುದಲ್ಲದೆ ಮೂರು ಬೆಟ್ಟಿನ ಸಾಧಾರಣ ನಕ್ಷತ್ರದ ಸಂಗಡ ಈ ಸುಗಂಧ ನಕ್ಷತ್ರದ ಪುಡಿಯಲ್ಲಿ ಬಂದು ಚಿಟಕೆಯನ್ನು ವಿಶ್ವಯಿಸಿದರೆ ಎಲ್ಲವೂ ಪರಿವಾಳವಾಗುವದು ಇದನ್ನು ಅನೇಕ ಪ್ರಭುಗಳು ಕವಗೃಹದಲ್ಲಿ ಕ.ಟ ಎಂಬ ವಿಶಧವಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸೆ ಪುಕ್ಕಟೆ ಕಳಿಸಲಾಗಿದೆ ಒಂದ್ಕೆ ಕ್ರಯವೂ ೦೪೦.೦ಹಿ ಪಿ ೪೪೫ ಡಜನ್ ೧೯೬ ಕ್ಕೆ ರೂ ೨-೮-೦ ವಿ ಪಿ ಯಂ ದಯವಾಡಿ ನಿಮ್ಮ ಹೆಸರನ್ನೂ, ಅತ್ಯಾವಶ್ಯಕ ಸರಿಯಾಗಿ ತಿಳಿಯುವಂತೆ ಬರೆಯಿರಿ

ಪತ್ರ— ಗುರುಬಸವ ೨೦೫ ಕಂಪನಿ ಲಿಮಿಟಿಡ್ ಪೋ ಬಾ ಸಗಂ ಮಾರ್ಕಟ್ ಕೊನ್ನ,ಮದರ ಸ

Reg. No. B 1270. Monday, 31st July, 1939

ವರ್ಷ ೨೨

ಪತ್ರದ ವರ್ಗಣೆ.

ಉಮೇದಿಯಲ್ಲಿ ಆಗಾವು ರೂಪಾಯಿ 2-4-0.
ಮುನಿಯಾರ್ಡರಿನಿಂದ ರೂ. 3-1-0.
ವಿ. ಪಿ. ಅಂಚೆಪೆಟ್ಟಿ ಸೇರಿ ರೂಪಾಯಿ 3-4-0.
ದಿವಿ ಸಂಚಿಕೆಗೆ 0-1-0
ಹಳೇ ಸಂಚಿಕೆಗೆ 0 2-0

ಕನಡಾವೃತ್ತ.

THE KANARA NEWS.

ನರಪತಿಹಿತಕರ್ತಾ ದ್ವೇಷ್ಟತಾ ಯಾತಿ ಲೋಕೇ ಜನಪದಹಿತಕರ್ತಾ ಸ್ವಾಗತೇ ಯಾತಿಯೇವಂ:।
ಇತಿ ಮಹತಿ ವಿರೋಧೇ ವರ್ತಮಾನೇ ಸಮಾನೇ ನೃಪತಿಜನಪದಾನಾಂ ದುರ್ಲಭಃ ಕಾರ್ಯಕರ್ತಾ ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಸಂಚಿಕೆ ೫

ಜಾಹೀರಾತುಗಳ ದರ.

ಶಾಶ್ವತ, ಇಂಗ್ಲಿಷ ಬ್ಯಾಕ್ ಟ್ಯಾಬಿನ (೧೫ ಎಮ್ ಬಾಜ್) ಆ ಸಾಲುಗಳಿಗೆ ರೂ.1-0-0 ಆ ನಂತ್ರ ಪ್ರತಿಸಾಲಿಗೆ 0-2-0.

ಹೆಚ್ಚಿಂಗದ ಸಾಲು ಎಷ್ಟು ಹೊಕ್ಕಿರುವದೋ ಆ ಮಾತಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು.

ಇತರೆ ಜಾಹೀರಾತುಗಳ ಬಗ್ಗೆ ಪತ್ರವ್ಯವಹಾರ ಮಾಡಲ್ಪಡುವದು.

-*(ಕುಮಟಾ— ಕಾವಡಾವೃತ್ತ, ಸೋಮವಾರ, ತಾರೀಖು ೩೧ ಮಾಹೆ ಜುಲ್ಯಾ ಸನ್ ೧೯೩೯ನೇ ಇಸವಿ.)*-

TO BE FREE -- SLAVE.

Are you able to do what you want to, or are you hampered in your freedom of action? If so, knock the "L" out of slave. — SAVE. This bank will help you. Let us open a Savings Account for you to-day.

RESOURCES OF A CRORE

Estd 1906
CANARA BANK, LIMITED.

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ್, ಲಿಮಿಟೆಡ್,

(ಬ್ರಿಟಿಷ ಹಿಂದುಸ್ಥಾನದಲ್ಲಿ ಸಂಘಟಿತವಾದದ್ದು)

ರಿಜಿಸ್ಟರ್ಡ ಆಫೀಸು:— "ಲಕ್ಷ್ಮೀ ನಿವಾಸ" ಬಿಲ್ಡಿಂಗ್ಸ್-- ಕುಂದಾಪುರ. ದ. ಕ.

ಫಿಕ್ಸೆಡ್, ಸೇವಿಂಗ್ಸ ಬೇಂಕ್, ಕರೆಂಟ್ ವಗೈರೆ ಡಿಪೋಜಿಟುಗಳು ಸ್ವೀಕರಿಸಲ್ಪಡುವವು.

ಕಾಯಂ ರೇವಣಾತಿಗಳ ಬಡ್ಡಿ ದರಗಳು- 6 ತಿಂಗಳು ಮುದ್ದತ್ತಿಗೆ 3½%, 1 ವರ್ಷದ ಮುದ್ದತ್ತಿಗೆ 4%, 2 ವರ್ಷ ಯಾ ಹೆಚ್ಚಿನ ಅವಧಿಗೆ 4½%

ಅಲ್ಪ ಮುದ್ದತ್ತಿನ ರೇವುಗಳು (Short term deposits) ಸಹ ಅಂಗೀಕರಿಸಲ್ಪಡುವವು.

ಎಲ್ಲಾ ವಿಧದ ಬೇಂಕಿಂಗ್ ವ್ಯವಹಾರಗಳು ಒಳ್ಳೇ ಸವಲತ್ತಿನಿಂದ ನಡಿಸಲ್ಪಡುವವು.

ಕುಂದಾಪುರ,
1—1—1939

The Agricultural & Industrial Bank, Ltd.

ವಾರ್ತೆಗಳು.

— ಬಂಗಾಲದೊಳಗಿನ ರಾಜಕೀಯ ಕೈದಿಗಳ ಉಪವಾಸ ಇನ್ನೂ ನಡೆದಿದೆ. ಇಬ್ಬರು ರಾಜಬಂದಿಗಳ ಪ್ರಕೃತಿ ತೀರ ಕೆಟ್ಟಿದೆ. ಒಬ್ಬರಿಗೆ ೧೦೩ ಡಿಗ್ರಿ ತನಕ ಜ್ವರವಿತ್ತಂತೆ. ಆವರಿಗೆ ಬಲಾತ್ಕಾರದಿಂದ ಆಹಾರ ಹಾಕಲು ಪ್ರಯತ್ನ ಮಾಡಿತು, ಆದರೆ ಕೈದಿಗಳು ಬಹಳ ವಿರೋಧ ಮಾಡಿದ್ದರಿಂದ ಅದು ಸಾಧ್ಯವಾ ಗಲಿಲ್ಲ. ಇನ್ನೂ ಬಲಾತ್ಕಾರ ಮಾಡಿದರೆ ಕೈದಿಗಳ ಸ್ಥಿತಿ ಇನ್ನೂ ಚಿಂತಾಜನಕವಾಗುವದೆಂದು ಆ ಪ್ರಯತ್ನ ತ್ಯಜಿಸಿರಬಹುದೆಂದು ಸಾರ್ವಜನಿಕರು ಭಾವಿಸಿದ್ದಾರೆ. ರಾಷ್ಟ್ರೀಯ ಸಭೆಯ ಅಧ್ಯಕ್ಷರಾದ ಶ್ರೀ ಕೊಂಗ್ರೆಸ ಕಾರ್ಯಕಾರಿ ಮಂಡಳಿಯ ಸಭಾಸದರಾದ ಶ್ರೀ॥ ಪ್ರಫುಲ್ಲಚಂದ್ರ ಘೋಷರವರೂ, ಮುಂಬಾಗಿ ಪಕ್ಷದ ಜಾಲಕರಾದ ಶ್ರೀ॥ ಸುಭಾಷಚಂದ್ರ ಬೋಸರವರೂ ಸೆರೆಮನೆಗಳಿಗೆ ಹೋಗಿ ಉಪೋಷಣ ಮಾಡುವ ಕೈದಿಗಳನ್ನು ಕಂಡು ಮಾತನಾಡಿದರು. ಉಪೋಷಣ ಮಾಡುವದನ್ನು ಬಿಡಬೇಕಾಗಿಯೂ, ಅವರ ಬಿಡುಗಡೆ ಮಾಡುವದಕ್ಕಾಗಿ ಸಕಲ ಪ್ರಯತ್ನ ಪಡಿಸಲ್ಪಡುವದಾಗಿ ಮಹಾತ್ಮರು ಆಶ್ವಾಸನ ಕೊಟ್ಟಿರುವ ಸ್ಯೂ ಕೈದಿಗಳು ಆಹಾರ ತೊಳ್ಳಲು ಸರಯಾಳುಗಳು ಒಪ್ಪಲಿಲ್ಲ. ಉಪೋಷಣ ಬಿಟ್ಟನಕ ಬಿಡುಗಡೆಯ ವಿಚಾರವನ್ನು ಆಲೋಚಿಸಲಿಕ್ಕಿಲ್ಲವೆಂದು ಮುಖ್ಯ ಪ್ರಧಾನರಾದ ನ॥ ಫಜಲುಲ್ ಹಕ್ಕರವರು ರಾಷ್ಟ್ರಪತಿ ಬಾಬು ರಾಜೇಂದ್ರ ಪ್ರಸಾದರವರಿಗೆ ಉತ್ತರ ಕೊಟ್ಟಿದ್ದಾರೆ. ಗುರುವಾರ ಶುದ್ಧ ನವಮಿಯ ದಿವಸ ಸಭೆಯಾಗಿ ನಾ॥ ಫಜಲುಲ್ ಹಕ್ಕರು ಧೋರಣೆ ಯೋಗ್ಯವೆಂದು ಪ್ರಧಾನ ಮಂತ್ರಿಗಳ ಅಭಿಪ್ರಾಯವಾಗಿದೆ. ಸ್ವತಃ ಬಿಡುಗಡೆಗಾಗಿ ಉಪೋಷಣ ಮಾಡುವದು ಯುಕ್ತವಲ್ಲೆಂದು ಮಹಾತ್ಮರು ಸರಯಾಳುಗಳಿಗೆ ತಿಳಿಸಿ, ಉಪೋಷಣ ಮಾಡುವದನ್ನು ಕೂಡಲೇ ನಿಲ್ಲಿಸಲೆಂತಾಗಿಯೂ ಬಿಡುಗಡೆಯ ಬಗ್ಗೆ ಸರ್ವ ಪ್ರಯತ್ನ ಮಾಡುತ್ತೇವೆಂಬಿಯೂ ಆಶ್ವಾಸನೆ ಕೊಟ್ಟಿದ್ದಾರೆ. ಸರ್ವಾಧಿಪತಿಗಳಿಗೆ ವಹಾತ್ಮರು ಶತ್ರ ಒರೆದು ರಾಜಬಂದಿಗಳ ಬಿಡುಗಡೆಯ ಬಗ್ಗೆ ಒಂಗಾಲ ಸರಕಾರಕ್ಕೆ ಬುದ್ಧಿ ಹೇಳಲು ಕೇಳಿಕೊಂಡಿದ್ದಾರಾಗಿ ವಾರ್ತೆಯಿದೆ. ಪಂ॥ ಜವಾಹರಲಾಲರು ಬಂಗಾಲ ಸರಕಾರಕ್ಕೆ ವಿಶಾಲ ವಿಚಾರ ಹಿಡಿದು ವರ್ತಿಸಲು ಸಲಹೆ ಮಾಡಿದ್ದಾರೆ ಸ್ವಂತ ಪ್ರತಿಜ್ಞೆಯನ್ನು ವಿಚಾರ ಮಾಡದೆ ಸರಿಯಾಳುಗಳ ಭಾವನೆಗಳ ವಿಚಾರ ಮಾಡಬೇಕೆಂಬಿಯೂ, ರಾಜಬಂದಿಗಳ ವರ್ತನೆಯನ್ನು ವಿಚಾರ ಮಾಡಬೇಕಾಗಿಯೂ ಅನುಧರ್ವನ್ನು ಪರಿಹರಿಸಿದೆ. ಕಾಗಿಯೂ ಸೂಚಿಸಿದ್ದಾರೆ ' ಸ್ವಂತ ಬಿಡುಗಡೆಗಾಗಿ ಉಪೋಷಣ ಮಾಡುವದು ಯಾವಾಗಲೂ ಅನುಚಿತವೆಂದು ನಾನು ಒಪ್ಪುತ್ತೇನೆ ಆದರೆ ಈ ವಿಷಯದಲ್ಲಿ ಹುಡುಗರು ಈ ಮೂರು ವರ್ಷಗಳಲ್ಲಿ ಅನುಭವಿಸಿದ ಯಾತನೆಗಳನ್ನು ನಾನು ಒಬ್ಬ ಈ ವರೆಗೆ ಅವರು ಅದ್ಭುತವಾದ ತತ್ಕ್ಷಹಿಡಿದ್ದಾರೆ ಈಗ ಅವರು ಗಾಂಧಿಗೊಂಡಿಪ್ಪೆ ರಹಸ್ಯತೆಲಾರಾಲೆ ಡಂಬಡಿದ್ದಿರೆ ಆಶ್ಚರ್ಯವಲ್ಲ!" ಹೀಗೆ ಪಂ॥ ಜವಾಹರಲಾಲರು ಉದ್ಗರಿಸಿ ಇನ್ನಾದರೂ ಜವರಿಗೆ ಬಂಗಾಲ ಸರಕಾರವು ಬಿಡುಗಡೆ ಮಾಡಲಿಕ್ಕೆ ಸಿದ್ಧವಿದ್ದಾರೆ ಈ ವಿಷಯವು ಸಂಪೂರ್ಣವಾಗಿ ಬಂಗಾಲ ಮಂತ್ರಿಮಂಡಳದ ಅಧೀನವಿದ್ದರಿಂದ ಆ ಕಾರಣ ಬಂಗಾಲ ಮಂತ್ರಿಮಂಡಳವೇ ಸರಿಯಾಗಿ ಬಿಡುಗಡೆ ಮಾಡಲಿಕ್ಕೆಂಬಷ್ಟರಿಂದ, ಸಾರ್ವಜನಿಕ ಸರಕಾರಕ್ಕೆ ಏನೊಂದೂ ಸಂಬಂಧವಿಲ್ಲದ್ದರಿಂದ ಕೊಂಗ್ರೆಸ ಮಂತ್ರಿಮಂಡಳಗಳು ಈ ಕುರಿತು ಹಿಂದುಸ್ಥಾನ ಸರಕಾರವನ್ನು ಒತ್ತಾಯಮಡಿಸುವದಕ್ಕೊಸ್ಕರ ರಾಜೀನಾಮೆ ಕೊಡುವದವಶ್ಯವಿಲ್ಲವೆಂದು ಪಂ॥ ಜವಾಹರಲಾಲರು ಮುಂಬಯಿಯೊಳಗಿನ ಸಭೆಯಲ್ಲಿ ಹೇಳಿದ್ದಕ್ಕೆ ಶುಕ್ರವಾರ ಮಾಡಿದ ಒಂದು ಭಾಷಣದಲ್ಲಿ ನುಡಿದರು ಮೊನ್ನೆ ಶನಿವಾರ ತಾವೇನೇಗೆ ರಾಷ್ಟ್ರಪತಿ ಬಾಬು ರಾಜೇಂದ್ರ ಪ್ರಸಾದರು ಕಲಕತ್ತೆಗೆ ಹೋಗಿ ಗೃಹಮಂತ್ರಿಗಳಾದ ಸರ್ ವಿನ್ಸೆಂಟರವರಿಗೆ ಭೆಟ್ಟಿಯಾಗಿ ಸೆರೆಯಾಳುಗಳ ಬಿಡುಗಡೆಯ ವಿಷಯ ಮಾತನಾಡುವವರಿದ್ದರು. ಹಾಗೆಯೇ ರಾಜಬಂದಿಗಳಿಗೂ ಸೆರೆಮನೆಗಳಲ್ಲಿ ಕಂಡು ಮಾತನಾಡುವವರಿದ್ದರು ಇನ್ನೆ ಹೋದ ಹಾಗೆ ರಾಜಬಂದಿಗಳ ಸ್ಥಿತಿ ಇಕ್ಕಟ್ಟಿನದಾಗುತ್ತಿದೆ ರಾಜಬಂದಿಗಳು ಹಿಂಸಾಪ್ರವೃತ್ತಿಯನ್ನು ತಾವು ತ್ಯಾಗ ಮಾಡಿರುತ್ತೇವಾಗಿಯೂ ಇನ್ನು ಮುಂದೆ ಅಹಿಂಸೆಯಿಂದಲೇ ದೇಶೋದ್ಧಾರ ಕಾರ್ಯವನ್ನು ಪುರಸ್ಕರಿಸುತ್ತೇವಾಗಿಯೂ ಅವರು ಅಭಿವಚನವನ್ನು ಬಂಗಾಲ ಸರಕಾರವು ಉದಾರವನ್ನಿನಿಂದ ಸ್ವೀಕರಿಸಿ, ಈಗಲಾದರೂ ಅವರನ್ನು ಬಿಡುಗಡೆ ಮಾಡಬಹುದಾಗಿ ಜನಸಾಮಾನ್ಯರ ಅಭಿಪ್ರಾಯ ರಾಜಬಂದಿಗಳ ಉಪೋಷಣ ವ್ರತದಿಂದ ಅವರ ಆಪ್ತೇಷ್ಟರು ತೀರ ವಿಮನಸ್ಕರಾಗಿದ್ದಾರೆ, ಚಿಂತಾವಿಷ್ಟರಾಗಿದ್ದಾರೆ! ಒಬ್ಬ ಕೈದಿಯ

ಕರ್ನಾಟಕ ಪ್ರಾಂತದಲ್ಲಿಯ ಏಜಂಟರ ಮತ್ತು ಗ್ರಾಹಕರ ಅನುಕೂಲತೆಗಾಗಿ

ದತ್ತಾತ್ರಯ ಕೃಷ್ಣ ಸಾಂಡೂ ಬ್ರದರ್ಸ

ಜೆಂಬೂಸ ಸ್ಟ್ರೀಟ ಮುಂಬಯಿ

ಇವರ

ಆಯೌರ್ವೇದೌಷಧಿ ಕಾರಖಾನೆಯ

ಹುಬ್ಬಳ್ಳಿ ಶಾಖೆಯು ಪ್ರಾರಂಭಿಸಲ್ಪಟ್ಟಿದೆ.

ಕಾರಖಾನೆಯ ವೈಶಿಷ್ಟ್ಯ...

೧ ಎಲ್ಲ ಔಷಧಗಳು ಶಾಸ್ತ್ರೋಕ್ತ ಆಯುರ್ವೇದೀಯ ಪದ್ಧತಿಯಿಂದ ತಯಾರ ಮಾಡಲ್ಪಡುವವು
೨ ಎಲ್ಲ ಔಷಧಗಳು ತಜ್ಞರ ನೇತೃತ್ವದಲ್ಲಿ ತಯಾರ ಮಾಡಲ್ಪಡುವವು
೩ ಯಂತ್ರದ ಸಹಾಯ ತೆಗೆದುಕೊಳ್ಳದೆ ಎಲ್ಲ ಔಷಧಗಳನ್ನು ತಯಾರಿಸಲಾಗುವದು
೪ ಎಲ್ಲ ರೋಗಗಳ ಮೇಲೆ ಬಹಳ ದಿನ ತಡೆಯುವಂತೆ ತಯಾರ ಮಾಡಿದ ಕಷಾಯ ಸಿಕ್ಕುವವು
೫ ಎಲ್ಲ ಔಷದಗಳ ಬಗ್ಗೆ ಮೊದಲು ಅನುಭವ ತೆಗೆದುಕೊಂಡ ನಂತರ ಮಾರಾಟಿಕ್ಕೆ ಇಡಲ್ಪಡುವವು
೬ ಎಲ್ಲ ರೋಗಗಳ ಮೇಲೆ ಬೇರೆ ಬೇರೆ ಪ್ರಕಾರದ ಔಷಧಗಳು ಸಿಕ್ಕುವವು

ಶಾಖಾ ವ್ಯವಸ್ಥಾಪಕ—

ವೈದ್ಯ ಗೋಪಾಳ ವೆಂಕಟೇಶ ಭುಜಲೆ, ಆಯುರ್ವೇದತೀರ್ಥ,

ಮರಾಠಾಗಲ್ಲಿ ... ಹುಬ್ಬಳ್ಳಿ.

ಶಾಯಿಯು ತನ್ನ ಕರಕನ್ನು ಬಿಡುಗಡೆ ಮಾಡಿ ಸ್ವತಂತ್ರವಿನಿಂ ಬಾಯಿಯೊಳಗಿಂದ ತಪ್ಪಿಸಬೇಕಾಗಿ ಬಂಗಾಲ ಸರಕಾರಕ್ಕೆ ಬಹು ಕಳವಳಗೊಂಡು ಬಿನ್ನೈಸಿಕೊಂಡಿದ್ದಾಳೆ ಸ್ವತಃಯೊಬ್ಬರೂ ಈ ಪ್ರಕರಣ ಹೇಗೆ ಬಗೆಹರಿಯುವದೆಂದು ತಿಳಿಕೊಳ್ಳಲು ಆತುರ ಗೊಂಡಿದ್ದಾರೆ. ಬಹುತರವಾಗಿ ರಾಷ್ಟ್ರಪತಿಗಳ ಮಧ್ಯಸ್ಥಿಕೆಯಿಂದ ರಾಜಬಂದಿಗಳ ಬಿಡುಗಡೆ ಯಾಗಬಹುದಾಗಿ ಒಂದು ಆಶೆ ರಾಷ್ಟ್ರಪತಿಗಳಿಗೂ ಮಹಾತ್ಮರಿಗೂ ಪತ್ರವ್ಯವಹಾರ ನಡೆದಿರುವದಾಗಿಯೂ ಪ್ರಕಟವಾಗಿದೆ

— ಮಹಾತ್ಮರು ಆಟೋಬಾದದಿಂದ ಮೊನ್ನೆ ಶುಕ್ರವಾರ ವರ್ಧಾಕ್ಕೆ ಬಂದು ಹಾಗೆಯೇ ಶೇಗಾಂವಿಗೆ ತೆರಳಿದರು. ಪುನಃ ಗಡಿನಾಡಿಗೆ ಮಹಾತ್ಮರು ಹೋಗುವವರಿದ್ದಾರೆ ಕೆಲವು ತಿಂಗಳ ತನಕ ಶೇಗಾಂವಿನಲ್ಲಿ ವಿಶ್ರಾಂತಿ ಪಡೆದು ಹಾಗೆಯೇ ತಾವು ಗಡಿನಾಡಿಗೆ ಹೋಗುವೆವೆಂದಾಗಿ ಮಹಾತ್ಮರು ಪತ್ರಿಕಾ ಪ್ರತಿನಿಧಿಗಳ ಒಳ ತಿಳಿಸಿದರು ಗಡಿನಾಡಿನಲ್ಲಿ ತಮಗೆ ಬಹಳ ಕೆಲಸವಿರುವದಾಗಿಯೂ ಮಹಾತ್ಮರು ಉದ್ಗರಿಸಿದರು. ಕಾಶ್ಮೀರ ಸಂಸ್ಥಾನಕ್ಕೆ ಹೋಗಬೇಕೆಂದು ಮಹಾತ್ಮರ ಬಲೋಚನೆಯಿತ್ತು. ಕಾಶ್ಮೀರ ಸಂಸ್ಥಾನಿಕರ ಆತಿಥಿಗಳಾಗಲು ಮಹಾತ್ಮರು ಒಪ್ಪಿದ್ದರು. ಆದರೆ ಸಂಸ್ಥಾನದ ಆತಿಥಿಗಳಾಗಬಾರದೆಂದಾಗಿ ಮಹಾತ್ಮರಿಗೆ ಲೋಕಪ್ರಮುಖರು ಅಬುಧಾಬಿಗೆ ಹೋಗಿ ತಿಳಿಸಿದ್ದರಿಂದ ಮಹಾತ್ಮರು ನಿರುಪಾಯರಾಗಿ ಕಾಶ್ಮೀರ ಸಂಸ್ಥಾನದ ಸಂಚಾರವನ್ನು ರದ್ದುಪಡಿಸಿ ಆಟೋಬಾದಿಂದ ಬುಧವಾರ ಹೊರಟರು ದಿಲ್ಲಿಯಲ್ಲಿ ಇಳಿದು ಹರಿಜನ ವಸಾಹತಿನಲ್ಲಿ ನಡೆಯು ವ ಹರಿಜನ ಯೋಗಶಾಲೆಯ ಮೊದಲನೇ ಪದವಿದಾನ ಸಮಾರಂಭವನ್ನು ನೆರವೇರಿಸಿದರು ಯೋಗಶಾಲೆಯ ವೃತ್ತಾಂತವನ್ನು ಶ್ರೀ|| ವಿಯೋಗಿ ಹರಿಯವರು ಆರ ಹ, ವಿದ್ಯಾರ್ಥಿಗಳಿಗೆ ಪ್ರಶಸ್ತಿಪತ್ರಿಕೆಗಳನ್ನೂ ಫಲದಾನವನ್ನೂ ಕೊಟ್ಟು ಆಶೀರ್ವದಿಸಬೇಕಾಗಿ ಮಹಾತ್ಮರಿಗೆ ಅವರು ಬಿನ್ನೈಸಿಕೊಂಡರು ಮಹಾತ್ಮರು ಕೈಂಟಿಗಳನ್ನೂ, ಕೆಂಗಿನಕಾಯಿಗಳನ್ನೂ, ಪ್ರಶಸ್ತಿ—ಪತ್ರಿಗಳನ್ನೂ ಕೊಟ್ಟು ಈ ಸಮಾರಂಭ ನೆರವೇರಿಸಲು ತಮಗೆ ಅತ್ಯಾನಂದವಾಗುತ್ತದೆಂದರು. "ಈ ಯೋಗಶಾಲೆಯ ಕಂಕುಸ್ಥಾಪನೆ ಮಾಡಿದವನು ನಾನೇ! ಇಲ್ಲಿಯ ಶಿಕ್ಷಣದಿಂದ ಇಲ್ಲಿಯ ಶಿಕ್ಷಣದ ಖರ್ಚು ಹುಟ್ಟಬೇಕೆಂದು ನನ್ನ ಆಪೇಕ್ಷೆಯಿತ್ತು ಆದರೆ ಆ ಆಪೇಕ್ಷೆಗೆ ತಕ್ಕದ್ದಾಗಿ ಯೊಲಿಗೆಯ ವರ್ಗ ನಡೆಯಲಿಲ್ಲವೆಂದು ತಿಳಿದು ನನಗೆ ವ್ಯಸನವಾಗುತ್ತದೆ. ಆಶೀರ್ವದಿಸಬೇಕೆಂದು ನನ್ನ ಕಡೆ ವಿನಂತಿ ಮಾಡಿಕೊಳ್ಳೋಣಾಗಿದೆ ಒಲೇ ಬಾಯಿ-ಮಾತಿನಿಂದ ಆಶೀರ್ವಾದ ಕೊಡುವದಲ್ಲ, ಅಂತಃಕರಣಪೂರ್ವಕ ಆಶೀರ್ವದಿಸಬೇಕು ವಿದ್ಯಾರ್ಥಿಗಳ ಸಾತ್ವಾಪಾತ್ರತೆ ತಿಳಿದು ಆಶೀರ್ವಾದ ಕೊಡುವ ಬಗೆ ಹೇಗೆ? ವಿದ್ಯಾರ್ಥಿಗಳು ಸಂಸ್ಥೆಯನ್ನು ಮಲೆಯಲಾಗದು ಇಗ ಕೊಟ್ಟ ಜನಾಂಗದ ಸೇವೆ ಮಾಡಬೇಕು ' ಹೀಗ ಮಹಾತ್ಮರು ನುಡಿದು ಅದೇ ದಿನ ಉಗುಬಂಡಿ ಹತ್ತಿ ವರ್ಧಾಕ್ಕೆ ತೆರಳಿದರು. ಲಾಹೋರದಲ್ಲಿ ಮಾತ್ರ ಕೆಲವು ಪುಂಡ ಮುಸಲ್ಮಾನರು ಮಹಾತ್ಮರಿಗೆ ಕರೇ ನಿಶಾನೆಗಳನ್ನು ತೋರಿಸಿ 'ಗಾಂಧಿ ಮುರ್ದಾಬಾದ್' 'ಕೊಂಗ್ರೆಸ ಮುರ್ದಾಬಾದ್' ಹೀಗೆ ಆಕ್ರೋಶಗಳನ್ನು ಮಾಡಿದರು ಇವರ ಕೈಯಲ್ಲಿ ದೊಣ್ಣೆಗಳೂ, ಕತ್ತಿಗಳೂ, ಬೆತ್ತಗಳೂ ಇದ್ದವು. ಸ್ಪೇಶಲ್ ಅಧಿಕಾರಿಗಳ ಕೂಡಲೆ ಪೋಲೀಸರನ್ನು ಕರಿಸಿಕೊಂಡಿದ್ದರಿಂದ ಒದಗಲಿದ್ದ ಗೊಂದಲ ಒದಗಲಿಲ್ಲ. ಈ ಜನರು ಸ್ಪೇಶಲ್ ಅಧಿಕಾರಿಗಳ ಕಣ್ಣು ತಪ್ಪಿಸಿಕೊಂಡು ಸ್ಟೇಶನಿನ ಒಳ ಸೇರಿದ್ದರಂತೆ. ಮಹಾತ್ಮರ ಹುಟ್ಟುಹಬ್ಬದ ದಿನ ಅಂದರೆ ಅಕ್ಟೋಬರ ೨ನೇ ತಾರೀಖಿಗೆ ಸರ್ ಸರ್ವಪಲ್ಲಿ ರಾಧಾಕೃಷ್ಣನ್‌ರವರು ಮಹಾತ್ಮರಿಗೆ ಒಂದು ಗ್ರಂಥವನ್ನು ಅರ್ಪಣ ಮಾಡುವವರಿದ್ದಾರೆ ಈ ಗ್ರಂಥದಲ್ಲಿ ಅನೇಕರಿಂದ ಅಭ್ಯರ್ಥಿತವಾದ ಭಾರತೀಯರೂ ನಾಮಾಂಕಿತ ವಿಜ್ಞಾನಶಾಸ್ತ್ರಜ್ಞರಾದ ಡಾ|| ಆನ ಸ್ಟೀನರವರೂ, ಲೋಕಪ್ರಸಿದ್ಧ ಶತ್ರ ಜ್ಞಾನಿಗಳಾದ ರೋಮೇನ್ರ ರೋಲೆಂಡರವರೂ, ಬ್ರಿಟಿಷಿನ ವಿದೇಶ ಸಚವರಾದ ಹೆಲಿಫ್ಯಕ್ಸ ಜೊರಿಗಳೂ, ಭಾರತ ಮಿತ್ರ ಗಣಾದ ಶ್ರೀಟ್ಟಂಡ ಜೊರೆಗಳೂ, ಕವಿಶ್ರೇಷ್ಠ ರವೀಂದ್ರನಾಥ ಠಾಕೂರ ಮೊದಲಾದ ವಿದ್ವಜ್ಜನರು ಲೇಖನಗಳನ್ನು ಬರೆಯುವವರಿದ್ದಾರೆ

— ಅಲ್ಪಾರ ಸಂಸ್ಥಾನದಲ್ಲಿ ಒಂದು ಗಡಿಬಿಡಿಯುಂಟಾಗಿದೆ ಮುನಸೀಫ್ ಕೋರ್ಟಿನಲ್ಲಿ ವ್ಯಾಜ್ಯ ನಡೆಯುವಾಗ ಸಾಕ್ಷಿದಾರನ ಜಬಾನಿ ಕಲಕ್ಕೆ ಮನಸೀಫರಿಗೆ ಸಿಕ್ಕ ಕೆಣಕಿ ವ್ಯಾಜ್ಯದೂಳಾಗಿನ ವಕೀಲರಿಗೆ ಬೈದು ಅವರಿಗೆ ಸೆರೆಹಿಡಿಯಲು ಆಜ್ಞೆ ಮಾಡಿದರು. ಇನ್ನೊಬ್ಬ ವಕೀಲರು ಮಧ್ಯಸ್ಥಿಕೆಯಾಗಿ ಆಜ್ಞೆಯನ್ನು ಅಶ್ಚತ್ಕಕ್ಕಿಡಿಸಿದರು ಆ ಮೇಲೆ ಅಲ್ಪಾರ ವಕೀಲ ಸಂಘದ ಸಭೆಯಾಗಿ ಮುನಸೀಫರಿಗೆ ಕೂಡಲೆ ಪದಚ್ಯುತಿ ಮಾಡಬೇಕೆಂದು ರಂಗಾಗಿದೆ ೩ ದಿನಗಳ ತನಕ ವಕೀಲರು ಕೋರ್ಟಿಗೆ ಹೋಗಬಾರದೆಂದಾಗಿ ರಂಗಾಯಿತು! ವಕೀಲರು ಮುನ್ಸಿಮಂತ್ರಿಗಳಗೂ ನ್ಯಾಯ ಇಲಾಖೆಯ ಮಂತ್ರಿಗಳಗೂ ಫೋನ್ಮುಖಾಂತರ ಮುಷ್ಕರ ಘರನ್ನು ಪದಚ್ಯುತ್ಯ ಮಾಡಬೇಕೆಂದು ತಿಳಿಸಿದರು.

— ಪ್ರಣೆಯಲ್ಲಿ ಆಗಸ್ಟ ೧೪ನೇ ತಾರೀಖಿಗೆ ಎಕೆಂಬ್ಲಿಯ ೨ನೇ ಅಧಿವೇಶನ ಪ್ರಾರಂಭವಾಗುತ್ತದೆ. ಸಾವಕಾರರ ನಿಯಂತ್ರಣಕ್ಕೆ, ಒಕ್ಕಲಿಗರ ಸಂರಕ್ಷಣೆ, ಅಂಗಡಿ, ಉಪಹಾರಗೃಹ, ನಾಟಕ ಮಂದಿರ ಮೊದಲಾದವು ಗಳಲ್ಲಿಯ ಕೆಲಸಗಾರರ ಕೆಲಸದ ಅವಧಿಯ ಮಿತಿ, ಋಣವಿಮೋಚನೆ, ಹರಿಜನ ಪ್ರತಿಬಂಧ ನಿವಾರಣೆ ಮೊದಲಾದ ವಿಷಯಗಳ ಕುರಿತು ಸರಕಾರಿ ಕಾನೂನುಗಳ ಜರ್ಜ ನಡೆಯವುದು. ಇದಲ್ಲದೆ ಶ್ರೀ|| ಲೀಲಾವತಿ ಮುನಶಿ, ರಾ|| ಬ ತಿ. ಲಾಲಾ, ರಾ|| ಬಾಬು ಛಾಯ ಪಟೇಲ ಮೊದಲಾದವರು ಸೂಚಿಸಿದ ಎಕಾದಶ್ಮೀಕೃತ ನಿರ್ಬಂಧ, ಫೆಟಸ್ಟ್ಯಾಟ್, ಜರರ ಕ ಮಾರಿ ವಿವಾಹ ನಿರ್ಬಂಧ, ಶಾರ್ದ್ಧ-ಸಮಾಂಧನೆಯ ನಿರ್ಬಂಧ, ವರದಕ್ಷಿಣೆಯ ನಿರ್ಬಂಧ, ಜಾತಿ-ಬಹಿಷ್ಕಾರ ನಿರ್ಬಂಧ ಮೊದಲಾದ ಸರಕಾರೇತರ ಸಭಾಸದರು ಸೂಚಿಸಿದ ಕಾನೂನುಗಳ ಚರ್ಚೆಯಾಗಬಹುದೆ ಇದಲ್ಲದೆ, ರಾ|| ಮಹಮ್ಮದ ಮಿರಾಕರ ರೂ ರಾ|| ಮಂಡಲೀಕರವರೂ ಮುಂಬಯಿ ಇಲಾಖೆಯೊಳಗೆ ಶೈಕ್ಷಿಕ ಶಿಕ್ಷಣ ಕೊಡಬೇಕೆಂಬ ರಂಗವನ್ನು ಸೂಚಿಸಲಿದ್ದಾರೆ. ರಾ|| ಸಿದ್ದಿಕರವರು ಮುನಸ್ಸಾಫ ಹುದ್ದೆಗೆ-ಜುಡಿಷಿಯರಿಗೆ ಪ್ರಾಥಮಿಕ-ಮಾಧ್ಯಮಿಕ ಶಾಲೆಗಳಲ್ಲಿ ಒತ್ತಾಯದಿಂದ ಕುರಾಣ ಪಠಣ ಮಾಡಿಸಬೇಕಾಗಿ ಒಂದು ಗೊತ್ತುವಳಿ ತರುವವರಿದ್ದಾರೆ.

ಪ್ರಕಟಣೆ.

ಕಾನಡಾ ಜಿಲ್ಲಾ ಸ್ಕೂಲ ಬೋರ್ಡ ಶಿಕ್ಷಕ-ಶಿಕ್ಷಕಿಯರ ಜಾಗೆಗಳ ಬಗ್ಗೆ ಉರ್ದು ಮುಲ್ಕಿ ಪಾಸಾದ ಮತ್ತು ಹೆಣ್ಣು-ಮಕ್ಕಳ ಕನ್ನಡ ಮುಲ್ಕಿ ಪಾಸಾದ ಕೆಲವರನ್ನು ಉಮೇದ್ವಾರಿ ಲಿಸ್ಟಿಗೆ ದಾಖಲು ಮಾಡಿಕೊಳ್ಳಬದಿದೆ ಕಾರಣ ಕಾನಡಾ ಜಿಲ್ಲೆಯ ನಿವಾಸಿಗಳಲ್ಲದ ತಾ. 1—8—1939ರೀಗೆ 16 ವರ್ಷಕ್ಕೆ ಕಡಿಮೆಯಾಗದ ಮತ್ತು 23 ವರ್ಷಕ್ಕೆ ಮೀರದ ಉರ್ದು ಮುಲ್ಕಿ ಪಾಸಾದ ಗಂಡು ಮತ್ತು ಹೆಣ್ಣು ಉಮೇದವಾರರು ಹಾಗೂ ಹೆಣ್ಣು—ಮಕ್ಕಳ ಕನ್ನಡ ಮುಲ್ಕಿ ಪಾಸಾದ ಉಮೇದವಾರರು ಈ ಕೆಳಗೆ ಸಹಿ ಮಾಡಿದವರ ವಿಳಾಸಕ್ಕೆ ತಾ 22—8—1939ನೇದರೊಳಗಾಗಿ ಅರ್ಜಿಯಲ್ಲಿ ಕಳಸಬೇಕು ಅರ್ಜಿ ಈ ಕೆಳಗಿನ ಮಾಹಿತಿಯನ್ನು ಕೂಡಬೇಕು—

(1) ಜಾತಿ
(2) ಮುಲ್ಕಿ ಪರೀಕ್ಷೆ ಪಾಸಾದ ಇಸವಿ
(3) ಮುಲ್ಕಿ ಪರೀಕ್ಷೆಯಲ್ಲಿ ಸಿಕ್ಕ ಗುಣಗಳು ಹಾಗೂ ಒಟ್ಟು ಗುಣಗಳು
(4) ಇನ್ನೂ ತಾರೀಕು.
(5) ಈ ಪೊದಲು ಶಾಲಾ ಪ್ರಾತೆಯಲ್ಲಿ ಕೆಲಸ ಮಾಡಿದ್ದರೆ ಅದರವಿವರ
(6) ವಾಸಸ್ಥಳ ಸತ್ಯ ಪೂರ್ಣ ಪತ್ತೆ.
(7) ಗೊತ್ತಿದ್ದ ಅವಾ ಪಾಸಾದ ಇತರ ಭಾಷೆ ವ ಪರೀಕ್ಷೆ

ತಾ 22 8-1939ನೇರೊಳಗಾಗಿ ನಮಗೆ ತಲಪದಿದ್ದ ಅರ್ಜಿಗಳ ಬಗ್ಗೆ ನಿರ್ಣಾರವಾಗಲಾರದು ಅರ್ಜಿ ಕಳಿಸಿದವರಲ್ಲಿ ನಮಗೆ ಯೋಗ್ಯ ಕಂಡವರನ್ನು ಮಾತ್ರ ಸ್ವತಃ ಭೆಟ್ಟಿಯ ಬಗ್ಗೆ ಕರೆಯಲಾದೀತು ಅವರು ತಮ್ಮ ಮುಲ್ಕಿ ಸರ್ಟಿಫಿಕೇಟು ತಕ್ಕೊಂಡು ಭೆಟ್ಟಿಗೆ ಬರಬೇಕಾಗುವದು ಆ ಬಗ್ಗೆ ಏನೂ ಖರ್ಚು ಸಿಗಲಾರದು ಭೆಟ್ಟಿಯ ಬಗ್ಗೆ ತಾರೀಕನ್ನು ಮತ್ತು ಸ್ಥಳವನ್ನು ಹಿಂದಿನಿಂದ ತಿಳಿಸಲಾದೀತು ಭೆಟ್ಟಿಯ ಬಗ್ಗೆ ಕರೆದ ಉಮೇದವಾರರ ಹೊರತಾಗಿ ಉಳಕೆ ಉಮೇದವಾರರಿಗೆ ಕಾರ್ತರ ಸಿಗಲಾರದು.

ಉಮೇದವಾರಿ ಲಿಸ್ಟಿಗೆ ದಾಖಲು ಮಾಡಿಕೊಳ್ಳಲಿಕ್ಕೆ ಉಮೇದವಾರರು ಯಾರ ವಕೀಲಿಂಬನ್ನು ಹೆಚ್ಚಾರದು ಹಚ್ಚದಲ್ಲಿ ಅಂಥವರ ಅರ್ಜಿ ವಿಚಾರವಾಗಲಾರದು

ಕಾನಡಾ ಜಿಲ್ಲಾ ಸ್ಕೂಲ ಬೋರ್ಡ ಆಫೀಸು,
ಶಾರವಾರ, ತಾ. 29—7—1939

N. S. HERLEKAR,
ADMINISTRATIVE OFFICER,
District School Board, Kanara

ಕೆಲವು ಧರ್ಮ ಸಮಸ್ಯೆಗಳು.

[ನಮ್ಮ ಪ್ರತಿನಿಧಿಗಳಿಂದ]

ಇಲ್ಲಿ ಗೌಡಸಾರಸ್ವತ ಸಮಾಜದ ವೈದಿಕರು ಧರ್ಮ ಸಭೆಯನ್ನೊಂದು ಸೇರಬೇಕೆಂದು ಗೊತ್ತು ಮಾಡಿದ್ದಾರಾಗಿ ತಿಳದು ನನಗೆ ಬಹು ಸಂತೋಷ ವಾಯಿತು. ಈಗಿನ ಧರ್ಮಗ್ಲಾನಿಯ ಕಾಲದಲ್ಲಿ ಸಮಾಜದ ಉತ್ಕರ್ಷಕ್ಕೆ ಸಂಬಂಧಪಟ್ಟು ಮನಸುಗ ಳನ್ನು ವಿಚಾರಿಸಲೋಸುಗ ಪರಿಷತ್ತು ಸೇರಲಿದೆಯಂ ತೆ. ಪರಿಷತ್ತು ಗೌಡಸಾರಸ್ವತ ಸಮಾಜಕ್ಕಷ್ಟೇ ವ್ಯಾಪ್ತಿವಾಗಿದ್ದರೂ ಪರಿಷತ್ತಿನ ವಿಷಯಗಳನ್ನು ಪರಾಂ ಬರಿಸಿದರೆ, ಸಕಲ ಸನಾತನ ಬ್ರಾಹ್ಮಣ ವರ್ಗಕ್ಕೆ ಆವು ವ್ಯಾಪ್ತವಾಗುವದರಿಂದ ಈವಾಗ ಉಂಟಾ ಗಿರುವ ಧರ್ಮ-ಸಮಸ್ಯೆಗಳನ್ನು ನಾನು ಆಲೋಚನೆ ಮಾಡಿಬಯಸಿದ್ದೇನೆ. ಕಾಲಮಾನಕ್ಕನುಚಿತವಾಗಿ ಸಮಾಜದಲ್ಲುಂಟಾಗುವ ಸಮಸ್ಯೆಗಳನ್ನು ಸಮಾಜ ದೊಳಗಿನ ವಿದ್ಯಾವಂತ, ವಿಚಾರವಂತ ಪ್ರಮುಖರು ಆಲೋಚನೆ ಮಾಡಿ ಬಗೆಹರಿಸಿಕೊಳ್ಳದಿದ್ದರೆ ಆ ಸಮಾ ಜವು ಆಪಕರ್ಷಹೊಂದುವದೆಂದು ನಾನಾಗಿ ಹೇಳಬೇ ಕಾಗಿಲ್ಲ. ಬ್ರಾಹ್ಮಣಸಮಾಜದ ಮೇಲೆಇಂದಿಗೆ ಒಳಗೂ ಹೊರಗೂ ಬೇರೆ ಬೇರೆ ಪ್ರಕಾರಗಳಿಂದ ಆಘಾತಗಳುಂ ಟಾಗುತ್ತಿವೆ. ಅವನ್ನುಮುಂದಾಗಿಯೇ ಎಣಿಸಿ ಬ್ರಾಹ್ಮಣ ಸಮಾಜವು ಅವಕ್ಕೆ ಪ್ರತಿಕಾರವನ್ನು ಕೈಕೊಳ್ಳದಿದ್ದರೆ ಬ್ರಾಹ್ಮಣ ಧರ್ಮವು ಬಹುಬೇಗ ಉಳಿಯುವದಸಾಧ್ಯ.

***

ಬ್ರಾಹ್ಮಣರೊಳಗೆ ಈಗ ಉಂಟಾದ ಒಂದು ದೊ ಡ್ಡ ನ್ಯೂನತೆಯೆಂದರೆ ಬ್ರಾಹ್ಮಣ ವಿದ್ಯೆಯ ಅಧ್ಯಾ ಬ್ರಾಹ್ಮಣ ಆಚಾರ-ವಿಚಾರಗಳ ಅಭಾವ. ಗೌ ರಸ್ವತರಿರಲಿ, ಸಾರಸ್ವತರಿರಲಿ, ಹವ್ಯಕರಿರಲಿ, ವೈಷ್ಣ ವರಿರಲಿ, ಯಾವದೇ ಪಂಥ- ಸಂಪ್ರದಾಯದವರಿರಲಿ; ಆವರವರ ಸಂಪ್ರದಾಯಕ್ಕೆ ತಕ್ಕ ವಿದ್ಯೆಯನ್ನವರು ಯರು ! ಇದೊಂದು ಸಾಮಾನ್ಯವಾದ ಸಿದ್ಧಾಂತ. ಪುರಾತನ ಮಹರ್ಷಿಗಳೂ ನಮ್ಮ ಧರ್ಮಶಾಸ್ತ್ರಕಾ ರರೂ ಮಠ-ದೇವಸ್ಥಾನಗಳನ್ನು ಕಲ್ಪಿಸಿ ಬ್ರಾಹ್ಮಣ ವಿದ್ಯಾಪ್ರಚಾರವಾಗುವಂತೆಯೂ ನೋಡಿದ್ದರು. ಧರ್ಮರಕ್ಷಣೆ ಗಾಗಿ, ಧರ್ಮಪ್ರಸಾರಕ್ಕಾಗಿ, ಧಾರ್ಮಿಕ ಆಚಾರ-ವಿಚಾರಗಳ ಪರಿಪಾಲನಕ್ಕಾಗಿ ಧರ್ಮಗುರುಗಳನ್ನು ನೇಮಿಸಿದ್ದಾರೆ. ಧರ್ಮೋಲ್ಲಂಘನ ಮಾಡುವವರಿಗೆ ಶಾಸನ ಮಾಡಿ ಧರ್ಮರಕ್ಷಣವಾಗುವಂತೆ ಕಾಲೋ ಚಿತ ಉಪಾಯಗಳನ್ನು ಕೈಕೊಳ್ಳಲು ಧರ್ಮಗುರು ಗಳಿಗೆ ನೇಮಿಸೋಣಾಗಿತ್ತು. ಧರ್ಮಗುರುಗಳು ಈ ಕಾರ್ಯವನ್ನು ಎಷ್ಟರ ಮಟ್ಟಿಗೆ ನಡಿಸುತ್ತಾರೆಂದು ನಾ ಹೇಳುವದನವಶ್ಯಕ. ಧರ್ಮಗುರುಗಳೂ ಧರ್ಮ ಶಿಷ್ಯರೂ ವಿಚಾರ ಮಾಡಿದರೆ ಆವರಿಗೇ ಎಲ್ಲ ಪರಿಸ್ಥಿ ತಿ ಹೊಳೆಯುವಂತಿವೆ. ಮಠಗಳೂ ದೇವಾಲಯಗಳೂ ಧರ್ಮವಿದ್ಯೆಯ ಸ್ಥಾನಗಳಾಗುವ ಬದಲು ದೇವಸ್ಥ- ಅಪಚಾರಕರ ಬೀಡುಗಳಾಗಿ, ಕಲಹಕಾರಣಗಳಾಗಿ ಪರಿಣಮಿಸಿವೆ. ಮಠ-ದೇವಸ್ಥಾನಗಳೊಳಗಿನ ಕಲಹ ದಿಂದ ಇದ್ದ ಧರ್ಮಬುದ್ಧಿಯೂ ಲೋಪವಾಗುತ್ತಿದೆ. ಈ ಸ್ಥಿತಿ ಇಷ್ಟನೇ ಹೇಗೆ ? ಎಂಬ ವಿಚಾರವನ್ನು ನಮ್ಮವ್ಯಷ್ಟಿಯ ವೈದಿಕ ಪರಿಷತ್ತು ಆಲೋಚಿಸಿ ಸ್ವಸಮಾ ಜದಲ್ಲಿ ಧರ್ಮವಿದ್ಯೆಯ ಪ್ರಸಾರ ಮಾಡಲು ವ.ಠ ಗಳೂ ದೇವಾಲಯಗಳೂ ಧರ್ಮಗುರುಗಳೂ ಕೈಕೊ ಳ್ಳಬೇಕಾದ ಉಪಾಯಗಳನ್ನು ಸೂಚಿಸಕಕ್ಕದ್ದು. ವಿದ್ಯಾಪ್ರಸಾರವೇ ಧರ್ಮರಕ್ಷಣೆಯು, ಧರ್ಮ ಪ್ರಸಾ ರದ ತಕ್ಕದಿದಿಯೆಂದು ಎಲ್ಲರೂ ಬಲ್ಲಾದ ವಿಷಯ. ಕ್ರಿಸ್ತಿಯನೊಂಗಲಿ ಮುಸಲ್ಮಾನರಾಗಲಿ ಬೃಬಲ್-ಕುರಾಣ ಗ್ರಂಥ ಪಠಣಕ್ಕಾಗಿ ಪತತ ಪರಿಶ್ರಮ ಮಾಡುತ್ತಿದ್ದಾರೆ. ಧರ್ಮಲಂಡರರಲಿ, ಧರ್ಮಪ್ರಸ್ಥ ರರಲಿ ಪ್ರತಿ ರವಿ-ಶುಕ್ರವಾರ ಇಗ್ಜರ್ಜಿ-ಮಶೀದಿಗಳಿಗೆ ಹೋಗದ ಕ್ರಿಶ್ತಿಯನ್ನನಾಗಲೀ ಮುಸಲ್ಮಾನನಾಗಲೀ ಸಿಗುವದು ಅಪರೂಪ ! ಆದರೆ ನಮ್ಮ ಹಿಂದು ಧರ್ಮ ದಲ್ಲಿ ಮಠ ದೇವಾಲಯಗಳಿಗೆ ಹೋಗುವದು ದೊಡ್ಡ ಅಪಮಾನಾಸ್ಪದ ಸಂಗತಿ. ಯಾಕಂದರೆ ದೊಡ್ಡವ ರೆನಿಸಿಕೊಳ್ಳುವವರು ದೇವಸ್ಥಾನಗಳಲ್ಲಿ ಹೋಗಲು ಬಹು ಅಸಹ್ಯ ಪಡುತ್ತಾರೆ!

***

ಈ ಸ್ಥಿತಿ ತೀರ ಅನಿಷ್ಟವಾದುದು. ಅದುಕಾರಣ ಧರ್ಮಗುರುಗಳು ಮಠ-ದೇವಸ್ಥಾನಗಳ ಅಲ್ಲಲ್ಲಿಯ ಸ್ವಸಮಾಜಗಳ ಸಂಬಂಧಗಳನ್ನು ಸರಿಪಡಿಸಿಕೊಳ್ಳ ಬೇಕು. ಈಗೀನೇ ಪರಂಪರೆಯಿಂದ ಒಂದೊಂದು ಕಡೆ ಒಂದೊಂದು ವಿಧದಿಂದ ನಡೆಯುತ್ತಲಿದೆ. ಸಮಾಜಕ್ಕೂ ಮಠಕ್ಕೂ ಯಾವ ಸಂಬಂಧವಿರ ಬೇಕು ? ಮಠಕ್ಕೂ ಧರ್ಮಗುರುಗಳಿಗೂ ಯಾವ ಸಂಬಂಧವಿರಬೇಕು ? ಎಂಬ ಯಾವದೇ ಸಂಗತಿ ನಿರ್ಣಯವಿಲ್ಲ. ಧರ್ಮಗುರುಗಳು ಒಬ್ಬರೇ ಇದ್ದರೂ ಸಹಾವಳಿ ಭಿನ್ನ ಭಿನ್ನವಾದದ್ದುಂಟು. ವಿಕಾಸದಿಯಂಥ ಚಿಕ್ಕ ವಿಷಯಗಳಲ್ಲಿ ಬೇರೆ ಬೇರೆ ನಿರ್ಣಯಗಳಾಗು ತ್ತವೆ. ಒಂದು ಧರ್ಮಘಟನೆಯಿಲ್ಲಿ ಆದರಿಂದ ಧರ್ಮ ಘಟನೆಯ ವಿಚಾರವನ್ನು ವೈದಿಕ ಪರಿಷತ್ತು ಆಲಾ ಗಿ ಆಲೋಚಿಸಬೇಕೆಂದು ನನ್ನ ಸೂಚನೆ. ಧರ್ಮ ಗುರುಗಳ ಕರ್ತವ್ಯವೇನು ? ಧರ್ಮ-ಮಠಗಳ ಕರ್ತ ವ್ಯವೇನು ? ಧರ್ಮ-ಶಿಷ್ಯರ ನಡಾವಳಿ ಹೇಗೆ ? ಎಂ ಬೀ ವಿಷಯಗಳು ವಿದಿವ್ಯವಾಗಿ ಆವರ್ಕ್ಕೊಂದು ಘಟ ನೆಯ ರೂಪನಿರಬೇಕು. ನಿಯಮ, ನಿಯಮೋಪಾವಳಿ ಗಳಾಗಿ ಅವಗಳಂತೆ ಸಮಸ್ತ ಧರ್ಮಾನುಯಾಯಿ ಗಳು ನಡಕೊಳ್ಳಲು ಧರ್ಮಗುರುಗಳು ಧರ್ಮಾಜ್ಞೆ ಯನ್ನು ಹೊರಡಿಸಬೇಕು. ಧರ್ಮಗುರುಗಳ ಅಧಿಕಾರವ್ಯಾಪ್ತಿ ಸಮಸ್ತ ಧರ್ಮಶಿಷ್ಯರ ಮೇಲೆ ಇರುವದರಿಂದ ಅಂಥ ಧರ್ಮಶಿಷ್ಯರ ಆಚಾರ-ವಿಚಾರಗಳಿಗೆ ಧರ್ಮಗುರುಗಳೇ ಹೊಣೆಗಾ ರರಿದ್ದಾರೆ. "ಶಿಷ್ಯರು ಬೇಕಾದ ಹಾಗೆ ನಡಕೊಳ್ಳಲಿ; ನಮ್ಮ ಪಾವಿತ್ರ್ಯ ನಾವು ಕಾದುಕೊಂಡರಾಯಿತು," ಎಂಬ ಕಾರ್ಯಶೂನ್ಯ ವಿಚಾರ ಧರ್ಮೂಧೀತಾರಿಗಳಿಗೆ ಹೇಳ್ಬಟ್ಟಿಲ್ಲ. 'ರಾಜಾ ರಾಷ್ಟ್ರಕೃತಂ ಪಾಪಂ' ಎಂಬ ಉಕ್ತಿ ಧರ್ಮಗುರುಗಳು ಬಲ್ಲಾದ ವಿಷಯ. ಧರ್ಮಪ್ರಜೆಗಳು ಧರ್ಮವಿಧಿಯಂತೆ ನಡಕೊಳ್ಳದೆ ಪಾಪ ಮಾಡಿದರೆ ಆ ಪಾಪಕ್ಕೆಲ್ಲ ಧರ್ಮ-ರಾಜನಂತ ಧರ್ಮಗುರುಗಳೇ ಹೊಣೆಗಾರರಾಗುವದು ಸಹಜ. ಧರ್ಮಪರಿಪಾಲನೆಗಾಗಿ ಧರ್ಮಾಧಿಕಾರದ ದೀಕ್ಷೆ ಕೊಂಡು ಧರ್ಮಗುರುಗಳಾದವರು ಕಾರ್ಯಶೂನ್ಯ ರಾದ ಬಳಿಕ ಧರ್ಮಗ್ಲಾನಿಯೂಡುದು ಕ್ರಮಪ್ರಾಪ್ತ ವಾದುದು. ವಾಕ್ಚಾತುರ್ಯರು ಧರ್ಮಲಂಡರೆಂದು ಹೇಯಾ ಳಿಸಲು ನಾವು ಧನ್ಯತೆ ಪಡೆಯುತ್ತೇವೆ. ಆದರೆ ಅವರು ಧರ್ಮಘಟನೆಯನ್ನು ರಚಿಸಿ ಅದರಂತೆ ಧರ್ಮಾಧಿ ಕಾರಿಗಳನ್ನು ನೇಮಿಸಿ ಧರ್ಮ-ಪ್ರಜೆಗಳಿಂದ ಧರ್ಮ ವಿಧಿಯನ್ನು ತಪ್ಪದೇ ಪಾಲಿಸಿಕೊಳ್ಳುತ್ತಾರೆ. ಧರ್ಮ ಬುದ್ಧಿ ಇರಲಿ, ಇರದಿರಲಿ; ಪ್ರತಿಯೊಬ್ಬನೂ ಬಾಹ್ಯ ಧಾರ್ಮಿಕ ಆಚಾರ-ವಿಚಾರಗಳನ್ನು ಮನ್ನಿಸಿಯೇ ತೀರುತ್ತಾನೆ. ಅದೇ ನಮ್ಮ ವೈದಿಕ ಸಮಾಜದಲ್ಲಿ ಅಂಥ ವಿಷಯಗಳಿಲ್ಲ. ಅದರಿಂದಲೇ ಧಾರ್ಮಿಕ ಆಚಾರ-ವಿಚಾರಗಳಿಗೆ ನ್ಯೂನತೆಯುಂಟಾಗಿದೆ; ಒಂದು ಪ್ರಕಾ ರದಿಂದ ಅರಾಜಕತೆಯುಂಟಾಗಿದೆ. ಯಾರಿಗೂ ಯಾ ರೂ ಯಾವುದಕ್ಕೂ ಹೇಳ-ಕೇಳುವವರೇ ಇಲ್ಲ.

***

ಮಠ-ದೇವಸ್ಥಾನಗಳು ಕಲ್ಪನೆಯಂತೆ ವೇದವಿದ್ಯಾ ಮಂದಿರಗಳಾಗಬೇಕು. ನಮ್ಮಲ್ಲಿಯ ವೇದಗಳಿಗೆ ಪಾಶ್ಚಾತ್ಯರಲ್ಲಿ ಸಹ ಒಳ್ಳೇ ಮಾನ್ಯತೆಯುಂಟು. ಅವುಗಳ ವರ್ಣನೆಯನ್ನು ಅವರು ಒಳ್ಳೇ ಪ್ರೀತಿ ಯಿಂದಲೂ ಭಕ್ತಿಯಿಂದಲೂ ಮಾಡುತ್ತಾರೆ. ವೇದ ಗಳಲ್ಲಿ ಜ್ಞಾನಭಂಡಾರ ತುಂಬಿ ತುಳುಕುತ್ತಿದೆಂದು ಪಾಶ್ಚಾತ್ಯವಿದ್ಯಾವಂತರು ನೆನೆಸಿ ಹಿಂದು ಧರ್ಮದ ಜೋಗಳಿಕೆ ಮಾಡುತ್ತಾರೆ. ಇವು ನಮ್ಮ ಧರ್ಮದ ಮೂಲ ಗ್ರಂಥಗಳು. ಆದರೆ ನಮ್ಮಲ್ಲಿಯ ಬ್ರಾಹ್ಮಣ ವರ್ಗದಲ್ಲಿ ಅವನ್ನು ಬಲ್ಲವರಿಗೆ ಹುಡುಕಹೋದರೆ ಪಕ್ಕ ಇವಿರದಲ್ಲೊಬ್ಬನಾದರೂ ಸಿಗುವನೋ ಏನೊ ಬದು ಸಂಶಯಾಸ್ಪದ. ಅದೇ ಮುಸಲ್ಮಾನರಲ್ಲಾ ಗಲಿ, ಕ್ರಿಸ್ತಿಯನ್ನರಲ್ಲಾಗಲಿ ಕುರಾನ ಇಲ್ಲವೆ ಬೃಬಲ್ ಗ್ರಂಥ ಓದದವನು ಸಿಗಬಲ್ಲನೇ? ಸದ್ಯಕ್ಕೆ ಲಾಹೋರದೊಗಲೆ ಕಾಶ್ಮೀರ ವಜ್ರರಾಯಪ್ಪ ಮ.ಸಲ್ಮಾನರ ಗ್ರಂಥಾಲಯಕ್ಕೆ ಬೆಂಕಿ ಬಿತ್ತು. ಗ್ರಂಥಾಲಯದಲ್ಲಿ ಕುರಾನಗಳಿದ್ದವು. ಆವುಗಳನ್ನು ಶುದ್ಧ ಬೆಂಕಿನಂದಿಸುವ ಪ್ರಸಂಗವಿದ್ದದರಿಂದ ಮೊಸ ಲ್ಮಾನರು ಬೆಂಕಿ ನಂದಿಸಲಿಕ್ಕೆ ಅತಂಕ ಮಾಡಿದರಾಗಿ ಪ್ರಕಟವಾಗಿದೆ. ಇದರ ಮೇಲಿಂದ ಹಿಂದು ಜನರು ಬೋಧ ಪಡೆಯಬೇಕು. ಹಿಂದು-ಧರ್ಮಕ್ಕೊಸ್ಕರ ಮಠ-ದೇವಸ್ಥಾನಗಳಲ್ಲಿ ವೇದಪಾಠಗಳನ್ನು ಕಲಿ ಸುವ ಏರ್ಪಾಟುಗಳಾಗಬೇಕು. ವೈದಿಕಶಾಲೆ, ಗೃಹಕೃತ್ಯಶಾಲೆ, ಯಾವನೇ ಇರಲಿ; ಅವರು ತಮ್ಮ ತಮ್ಮ ಸಂಸ್ಕಾರಯೋಗ್ಯಕ್ಕೆ ವೇದಗಳನ್ನು ಒಮ್ಮೆಯಾದರೂ ಪಠಣ ಮಾಡಬೇಕೆಂಬ ಒತ್ತಾಯ ಏರಬೇಕು. ಶೈವರೂ, ವೈಷ್ಣವರೂ, ಸ್ಮಾರ್ತರೂ, ಭಾಗವತರೂ ಏನಾದ ಮಾಡುವದನ್ನೂ ಸರ್ಕಾರ ಹೇಳಿಯುವದನ್ನೂ ನಾವು ಕಾಣಬಹುದು. ಆದರೆ ಪ್ರತಿಯೊಬ್ಬರಿಗೂ ತಮ್ಮ ಧರ್ಮವೇನೆಂಬುದು ಈಳ ದರೆ ಅದಕ್ಕೆ ಉತ್ತರ ದೊರೆಯುವದು ಕಠಿಣ. ಈ ಸ್ಥಿತಿ ತೀರ ವಿಶಾಜನಕವಾದುದು. ಮೂಲಾಧಾರ ದ ಅಭಾವದಲ್ಲಿ ಧರ್ಮದ ನಾಶವಾಗದೆ ಧರ್ಮಗ್ಲಾ ನಿಯ ಮೇಲೆಯೇ ತಡೆದು ನಿಂತಿದ್ದು ಸನಾತನ ಧರ್ಮದ ಪ್ರಾಚೀನ ಋಷಿಗಳ ಪುಣ್ಯಪ್ರಭಾವವೆಂ ದೇ ಎನೆಸಬೇಕು. ಪರಿಷತ್ತು ಈ ವಿಷಯ ವನ್ನು ಗಾಂಭೀರ್ಯದಿಂದ ಆಲೋಚಿಸಿ ತಕ್ಕ ಉಪಾಯ ಕೈಕೊಳ್ಳಬೇಕೆಂದು ನನ್ನ ಸೂಚನೆ. ಈ ವಿಷಯ ದಲ್ಲಿ ಯೋಜಕರದೇ ಅಭಾವವೆಂದು ನನ್ನ ಎಳವ

ಕೆ. ಸಾಹಿತ್ಯ-ಸಿದ್ಧತೆಗಳು ಆಗಲೂ ತಮ್ಮ. ಯಾಕೆಂದರೆ ಮತಗಳಿವೆ; ಅವಶ್ಯಕ್ಕಿರುವ ಸಮಾಜಗಳಿವೆ; ಆ ಸಮಾಜಗಳಿಗೊಪ್ಪಿದ ನಿಧಿಯುಂಟು. ಅಂದ ಬಳಿಕ ಧರ್ಮಗುರುಗಳಾ ಧರ್ಮ-ಪ್ರಜೆಗಳಾ ಒಕ್ಕಟ್ಟಾಗಿ ಯೋಜನೆ ಮಾಡಿದರೆ ಈ ಕೆಲಸ ಸುಲಭಸಾಧ್ಯವಾಗುವಂತಿದೆ.

***

ಇದಲ್ಲದೆ ಪಾಠಶಾಲೆಗಳನ್ನು ಸ್ಥಾಪನೆ ಮಾಡುವ ವಿಚಾರವನ್ನೂ ನಡಿಸುವದುತ್ತಮ. ಒಂದೇ ಮಠಗಳ ಮೇರೆಯೇ ಅಮಲಂಬಿಸಿಕೊಂಡಿದ್ದರೆ ಕೆಲಸ ಸಾಗುವಂತಿಲ್ಲ. ಮತಗಳಲ್ಲವ ಸ್ಥಳಗಳೂ ಉಂಟು; ಅಲ್ಲಿಯೂ ಸ್ವಸಮಾಜ ಉಂಟು. ಅಂಥ ಸ್ಥಳಗಳಲ್ಲಿ ಪಾಠಶಾಲೆಗಳನ್ನು ಸ್ಥಾಪಿಸಿ ಧರ್ಮವಿದ್ಯೆಯನ್ನು ಕೊಡುವ ವಿಚಾರವಾಗಬೇಕು. ಈ ಕಾರ್ಯದಲ್ಲಿ ಧರ್ಮಗುರುಗಳೇ ಮುಂದಾಗತಕ್ಕದ್ದಿದೆ. ಯಾಕಂದರೆ, ಇಂಥ ಸ್ಥಳಗಳಲ್ಲಿ ಪಾಠಶಾಲೆಗಳಿಗೆ ದ್ರವ್ಯಸಹಾಯದ ಅವಶ್ಯಕತೆಯುಂಟು. ಆದನ್ನು ಪ್ರಾರಂಭ ಕಾಲದಲ್ಲಿ ಧರ್ಮಗುರುಗಳೇ ಪೂರೈಸಬೇಕಾದೀತು. ಸ್ಥಳಿಕಮಹಾ ಒಸರು ಕೆಲವು ಸಹಾಯ ಮಾಡಬಹುದು. ಆದರೆ ಈಗಿನ ದಿನಮಾನದಲ್ಲಿ ಅವಶ್ಯವುಳ್ಳ ಯಾವತ್ತು ಸಹಾಯ ಸಿಗುವ ಸಂಭವವಿಲ್ಲ. ಐಕ್ಯತ್ವಿನ ಆಧಾವವಂತು ಇದ್ದೇ ಇದೆ. ಮನಸ್ಸಿನ ಅಧಾವವೂ ಉಂಟು. ಪಾಠಶಾಲೆಗಳ ವಿದ್ಯಮಾನ ಧರ್ಮವಿದ್ಯೆಯನ್ನು ಪ್ರಸಾರ ಮಾಡಿದನಕ ಧರ್ಮದ ಅಭಿವೃದ್ಧಿಹುಟ್ಟುವದಿಲ್ಲ. ಈ ಪಾಠಶಾಲೆಗಳಲ್ಲಿ ಪ್ರಾಮುಖ್ಯವಾಗಿ ಧರ್ಮದ ವ್ಯವಹಾರ, ಆಚಾರ-ವಿಚಾರಗಳ ಸದ್ವೃತ್ತಿಗಳೆ ನೋಟ್ಟು ಮೊದಲು ನೆಡೆದು ಅವುಗಳ ಪಾಲನೆಯಿಂದುಂಟಾಗುವ ಶಾರೀರಿಕ, ಮಾನಸಿಕ ಉನ್ನತಿಯನ್ನು ಮನಗಾಣಿಸಬೇಕು; ಅಂದರೆ ಪ್ರಾಮುಖ್ಯವಾಗಿ ನೋಟ್ಟುವೊದಲು ಐಹಿಕ ಉಕ್ಕರ್ಷಗಳ ಮೇಲೆಯೇ ವಿದ್ಯಾದಾನದ ಕಟ್ಟಾಜ್ಞೆವಿರಬೇಕು. ತಾತ್ಪಿಕ ವಿಚಾರ ತ್ಯಾಜ್ಯವೆಂದು ಹೇಳುವದಲ್ಲ; ತಾತ್ಪಿಕ ಜ್ಞಾನ ಬೇಕು. ತತ್ವಜ್ಞಾನವೇ ಸರ್ವಜ್ಞಾನಗಳಲ್ಲಿ ಶ್ರೇಷ್ಠವಾದ ದ್ದೆಂಬದು ನಿಜ. ಆದರೆ ಸಾಮಾನ್ಯರಿಗೆ ತತ್ವಜ್ಞಾನದ ಅಕಲನವಾಗುವದಿಲ್ಲ; ಆ ಜ್ಞಾನದಿಂದ ಸಿಗುವ ಏಹಿಕ, ಪಾರಮಾರ್ಥಿಕ ಪ್ರಯೋಜನದ ಗ್ರಹಿಕೆಯೂ ಆಗುವದಿಲ್ಲ. ಐಹಿಕ ಉನ್ನತಿಯ ವಿಚಾರದ ನೇರಿಂದ ತಾತ್ಪಿಕ ವಿಚಾರಗಳಿಗೂ ಅಲ್ಲಿಂದ ಪಾರಮಾರ್ಥಿಕ ವಿಚಾರಗಳಿಗೂ ಜನಸಾಮಾನ್ಯರ ಬುದ್ಧಿಯು ಮಾರ್ಗಕ್ರಮಣ ಮಾಡಬಲ್ಲದು. ಧಾರ್ಮಿಕ ಆಚಾರ-ವಿಚಾರಗಳ ಪಾಲನೆಯಿಂದ ಪ್ರತಿಯೊಬ್ಬರಿಗೂ ಐಹಿಕ ಲಾಭವಿರುವದಾಗಿ ನುನಗಾಣಿಸಿದರೆ ಪಾಠಶಾಲೆಗಳು ಲೋಕಪ್ರಿಯವಾಗುವವಲ್ಲದೆ ಧರ್ಮ ಪ್ರಚಾರ ಕಾರ್ಯದಲ್ಲಿ ಅವುಗಳಿಂದ ಒಳ್ಳೇ ಸಹಾಯ ದೊರೆತೀತು. ಕ್ರಮವಾಗಿ ಪಾಠಶಾಲೆಗಳಿಗೆ ತಗಲುವ ಖರ್ಚು ಸಹ ಹುಟ್ಟು ಅವು ಸ್ವಾವಲಂಬಿಯಾಗಳಾಗುವವು. ಪರಿಪತ್ಯನ ಚಾಲಕರು ಅಯಾಸ್ಥಳಗಳಲ್ಲಿ ವಾಸ ಮಾಡುವ ಸ್ವಸಮಾಜದ ಜನಸಂಖೆಯನ್ನು ಎಡೆಸಿ ಅಲ್ಲಲ್ಲಿಯ ಸ್ಥಿತಿ-ಗತಿಗೆ ತಕ್ಕದ್ದಾಗಿ ಒಂದೊಂದು ಪಾಠಶಾಲೆಯನ್ನು ಸ್ಥಾಪಿಸಬೇಕು. ಪಾಠಶಾಲೆಗಳಲ್ಲಿ ವ್ಯವಹಾರಿಕ ಧರ್ಮ-ಶಿಕ್ಷಕರನ್ನು ನೇವಿಸಬೇಕು.

***

ಪಾಠಶಾಲೆಗಳ ಶಿಕ್ಷಕರು ಸ್ವತಃ ಧರ್ಮಾನವೆದೆಸ ವನ್ನು ಮಾಡಬೇಕು. ಪ್ರತಿಯೊಬ್ಬರಿಗೂ ನೈತ್ಯ-ನೈಮಿತ್ತಿಕ ಕರ್ಮಗಳನ್ನೆ. ಅವುಗಳ ಪ್ರಯೋಜನವನ್ನು ಜನಸಾಮಾನ್ಯರಿಗೆ ತಿಳಿಸಿಕೊಳ್ಳಬೇಕು. ಪ್ರಾಣಾಯಾಮವು ಮೆದಿನು ಯನ್ನು ಪಾಶ್ಚಾತ್ಯರು ಕೊಂಡಾಡುತ್ತಾರೆ. ಕ್ರಿಶ್ಚಾಲ ಸಂಧ್ಯೆಯಲ್ಲಿ ನಮಗೆ ಪ್ರಾಣಾಯಾಮ ವಿಧಿಸಲ್ಪಟ್ಟಿದೆ. ಆದರೆ ಪ್ರತ್ಯಕ್ಷ ಪ್ರಾಣಾಯಾಮ ಮಾಡುವವರು ವಿರಳರು. ಪ್ರಾಣಾಯಮದಿಂದ ಆರೋಗ್ಯಶಾಲಿನೆಗೂ ಒಟ್ಟಿದಿಕಾಸಕ್ಕೂ ಒಹ ಸಹಾಯವಾಗತ್ತದೆಂದು ಎಲ್ಲರೂ ಒಪ್ಪುತ್ತಾರೆ. ಯೋಗಸ-ಧನೆಯು ಪ್ರಭಾ ಸೋಪಾನವದು. ಯೋಗಾಭ್ಯಾಸದಿಂದ ಅದ್ಭುತ ಕಾರ್ಯಗಳು ಲೋಕದಲ್ಲಿ ಜರಗಿವೆ. ಮುಂಬಯಿಯೆಳಗೆ ಸ್ವಾಪನೆಯಾದ ಯೋಗಶಾಲೆಯಿಂದ ಸ್ವಾಮಿ ಕುವಲಯಾನಂದರವರು ಮಾಡುತ್ತಿರುವ ಲೋಕಕಾರ್ಯವನ್ನು ನಾವು ಕಣ್ಣಾರೆ ಕಾಣುತ್ತೇವೆ. ಈ ಶಾಲೆಯಲ್ಲಿ ಶಿಕ್ಷಣ ಪಡೆಯಲು ಅನೇಕ ವಿದ್ಯಾರ್ಥಿಗಳು ಬರುತ್ತಿದ್ದಾರೆ. ಅಡಾಗ್ಗೂ ಬ್ರಾಹ್ಮಣರು ಪ್ರಾಣಾಯಾಮವನ್ನು ಕಲಿಯಲಬೇಪ್ಪಿಸುವದಿಲ್ಲ. ಪಾಠಶಾಲೆಗಳ ಶಿಕ್ಷಕರು ಅಲ್ಲಲ್ಲಿಯ ಜನರಲ್ಲಿ ಪ್ರಾಣಾಯಾಮದ ಪ್ರಯೋಜನವನ್ನು ತಿಳಿಹೇಳಿ ಅದನ್ನು ಪ್ರಚುರಗೊಳಿಸಬೇಕು. ಸಕಲ ಬ್ರಾಹ್ಮಣರಿಗೂ ಸಮಾನವಾದ ಇನ್ನೊಂದು ಸಂಗತಿಯೆಂದರೆ ಗಾಯತ್ರಿ ಜಪ. ಈ ಜಪವನ್ನು ಸರಿಯಾಗಿ ಜಪಿಸಿದರೆ ಚಿತ್ತಶುದ್ಧಿಯಾಗಿ ಮನ-ಸ್ಯನು ಉತ್ಕರ್ಷ ಹೊಂದುತ್ತಾನೆ. ಪ್ರಪಂಚವನ್ನು ಸೂಸೂತ್ರ ನಡಿಸಲು ಅವಶ್ಯವುಳ್ಳ ಧೈರ್ಯವೂ, ಸಮಯಸೂಚಕತೆಯೂ, ತೇಜಸ್ಸೂ ಸ್ವಾಸ್ಥ್ಯವಾಗುತ್ತವೆಂದು ಅನುಭವಿಕರು ಅನುಭವ ಹೇಳುತ್ತಿದ್ದಾರೆ. ಬ್ರಾಹ್ಮಣ ಸಮಾಜದವರಿಗೆ ಆದರಿಂದ ಮನನರಿಕೆಯಾಗಬೇಪ್ಪಿಲ್ಲ. ಉಪನಯನ ಕಾಲವಲ್ಲಿ ಮಗನಿಗೆ ಗಾಯತ್ರಿಜಪ ಉಪದೇಶ ಮಾಡುವಾಗ ಪುರೋಹಿತನು ತಂದೆಗೆ ಪ್ರಥಮತಃ ಉಪದೇಶ ಮಾಡುವ ಪ್ರಸಂಗಗಳು ಇಂದಿಗೆ ಕತ್ತೀಚಿಗೆ ಜರಿಹತ್ತಿವೆಯಂತೆ! ಈ ಸ್ಥಿತಿ ಬಹಳ ಕೊಚಿನಿಯ! ಈಗಿನ ಸ್ಥಿತಿಯಿಂದ ಉಪನಯನವೆಂದರೆ ಸಂಸ್ಕಾರವಾಗುವ ಒದಲು ಸಮಾರಂಭವಾಗಿದೆ. ಉಪನಯನ ಸಂಸ್ಕಾರದ ಮಹತ್ವವೇ ಯಾರಿಗೂ ಅನಿಸುವದಿಲ್ಲ ಗಾಯತ್ರಿ ಜಪದ ಉಪದೇಶ ಕ್ಕಾಗಿ ಉಪನಯನಗಳು ಜರಗುತ್ತಿವೆ. ಅದೇ ಪರಿ ಸ್ಕಾರ್ಹವಾದ ಬಳಿಕ, ಆ ಸಂಸ್ಕಾರದಿಂದ ತಕ್ಕ ಪ್ರಯೋಜನ ಸಿಗದಿದ್ದರೆ ಆಶ್ಚರ್ಯವಿಲ್ಲ. ಉಪನಯನ ಸಂಸ್ಕಾರ ಭಾವಿ ಪ್ರಪಂಚದ ತಳಹದಿಯೆಂದನಿಸಲ್ಪಡುತ್ತಿದೆ. ಉಪನಯನವಾದಂದಿನಿಂದ ಮನುಷ್ಯನು ವೈಷ್ಯತ್ವತ್ತಾಗದೆಯೆ; ನಿಗ್ರಹಿಯಾಗಬೇಕು. ಆಹಾರ ವಿಹಾರಗಳಲ್ಲಿ ಆಚಾರ-ವಿಚಾರಗಳಲ್ಲಿ ಲಿಚಿ ಭೂ ರ್ಣ ತನಾಗ ಬೇ ಕು. ಕಾರಕಮ್ಯ ವಿಚಾರ ಮಾಡಬೇಕು. ಆ ಸಂಸ್ಕಾರದ ಮಹತ್ವ ಆಗ ಉಳದಿಲ್ಲ. ಮಹತ್ವವನ್ನೆಡೆಸುವವರು ತೀರ ಕಡಿಮೆ. ನಡಾವಳಿಯ ಕರಿಕು ಉಪದೇಶ ಮಾಡುವ ಪುರೋಹಿತನ ಪರಿಪಾಸ್ಯ ಮಾಡುವವರೇ ಹೆಚ್ಚು. ಪಾಠಶಾಲೆಗಳಿಗೂನಿನ ಶಿಕ್ಷಕರು ಸಂಸ್ಕಾರದ ಅರ್ಥವನ್ನು ಜನಸಾಮಾನ್ಯರಲ್ಲಿ ಬೋಧಿಸಿ ಆ ಸಂಸ್ಕಾರಕ್ಕೆ ತಕ್ಕಂತೆ ವರ್ತಿಸಲು ಪ್ರೇರೇಪಿಸಬೇಕು. ವಿವಾಹ ವಾದರೂ ಒಂದು ಸಂಸ್ಕಾರವೇ ಸೈ. ಆ ಸಂಸ್ಕಾರ ಕ್ರಮದಲ್ಲಿ ವಿಧಿಸಿರುವ ಮಂತ್ರಗಳಲ್ಲಿ ಪತಿ-ಪತ್ನಿಯರು ನಡಕೊಳ್ಳಬೇಕಾದ ಕ್ರಮಗಳೆಲ್ಲ ಸಮೂಧಿಸಲ್ಪಟ್ಟಿವೆ. ಭಾವೀ ಪತಿ-ಪತ್ನಿಯರ ಪ್ರಸಂಚಿಕ-ಪಾರಮಾರ್ಥಿಕ ಸುಖದ ವಿಚಾರದಿಂದ ಈ ಆಚಾರ-ವಿಚಾರಗಳು ಯೋಜಿಸಲ್ಪಟ್ಟಿವೆ. ಅವುಗಳಂತೆ ನಡೆದರೆ ಸಂಸಾರ ಸುಖವಾದೀತೆಂಬ ನಂಕಯವಿಲ್ಲ. ಅದರೆ ಈಗಾಗಿ ಕಲಿತವರಿಪ್ಪಿಸಿಕೊಳ್ಳುವವರು ಅವುಗಳ ಆರ್ಥಗಾಂಭೀರ್ಯ ತಿಳಕೊಳ್ಳದೆ, ಅವನ್ನೆಲ್ಲ ಧಿಕ್ಕರಿಸಿ ವಿವಾಹ ಸಮಾರಂಭದ ಆಡಂಬರವನ್ನು ಹೆಚ್ಚಾಳಿಸಿ ಬಿಜ್ಜಿ ವಿವಾಹಗೆಳನ್ನು ಮಾಡಿಕೊಳ್ಳುವ ಪ್ರಘಾತವುಂಟಾಗಿದೆ. ಇದೊಂದು ಸುಧಾರಣೆಯೆಂದು ತಿಳಕೊಳ್ಳಲ್ಪಡುತ್ತಿದೆ. ಇಂಥ ಕಲ್ಪನೆಯುಂಟಾಗುವದು ಸಮಾಜ ಘಾತಕವಾದುದು. ಅದರಿಂದ ವಿವಾಹ ಸಂಸ್ಕಾರದ ಕ್ರಮನಿಯನ್ನೂ ಗಾಂಭೀರ್ಯವನ್ನೂ ಜನಸಾಮಾನ್ಯರಿಗೆ ತಿಳಿಹೇಳಿ ಧರ್ಮರಕ್ಷಣೆ ಮಾಡಲು ಪರಿಷತ್ತು ಯೋಜಿಸತಕ್ಕದ್ದು.

***

ಸನ್ಯಸ್ಥೆ ಧರ್ಮವಿದ್ಯಾಪ್ರಸಾರಕ್ಕಾಗಿ ಧರ್ಮಗುರುಗಳು ಒಂದು ಯೋಜನೆ ಮಾಡಬಹುದಾಗಿನ್ನ ಸೂಚನೆ: ಬಡೋದೆಯ ಸರಕಾರವು 'ಹಿಂದು ಪುರೋಹಿತ ಎಕ್ಸ್' ಎಂಬ ಹಿಂದು ಪುರೋಹಿತರ ಕಾಸೂನನ್ನು ಏರ್ಪಡಿಸಿದೆ. ಈ ಕಾನೂನಿನಂತೆ ಧರ್ಮವಿಧಿಗಳನ್ನು ಬಲ್ಲವರು ಮಾತ್ರ ಧರ್ಮಕಾರ್ಯಗಳನ್ನು ನಡಿಸತಕ್ಕದ್ದೆಂದು ವಿಧಿನೋಡಾಗಿದೆ. ಈ ಕಾಯಿದೆಯಂತೆ ಪೌರೋಹಿತ್ಯ ಮಾಡಬಯಸುವವರು ಧರ್ಮವಿಧಿಗಳ ಶಿಕ್ಷಣ ಪಡೆಯಬೇಕು. ಮತ್ತು ಆ ಬಗ್ಗೆ ಸರಕಾರದಿಂದ ಪ್ರಮಿಪತ್ರಿಕೆ ಪಡೆಯಬೇಕು. ಸರಕಾರವು ಈ ಕುರಿತು ಪುರೋಹಿತ ವರ್ಗಗಳನ್ನು ಸ್ಥಾಪಿಸಿ ಶಿಕ್ಷಣಕ್ರಮವನ್ನು ನಿರ್ಧರಿಸಿದೆ. ಒ ತಿಂಗಳು ಈ ಶಿಕ್ಷಣ ಪಡೆಯಬೇಕು. ಇದೇ ಪ್ರಕಾರ ಧರ್ಮಗುರುಗಳು ಪೌರೋಹಿತ್ಯ ಮಾಡಬಯಸುವವರಿಗಾ ಒಂದು ಶಿಕ್ಷಣಕ್ರಮವು ತಯಾರಾಗಬೇಕು. ಈ ಶಿಕ್ಷಣ ಕ್ರಮವು ಕಲಿತು ತೀರ್ಗಡೆ ಹೊಂದಿದವರಿಗೆ ಮಾತ್ರ ಪೌರೋಹಿತ್ಯನಡಿಸಬೇಕಾಗಿ ಧರ್ಮಗುರುಗಳು ಆಜ್ಞಾರಾಯಸ್ಪ ಹೊರಡಿಸಬೇಕು. ಇತರರ ಕಡೆಯಿಂದ ಧರ್ಮಕಾರ್ಯಗಳನ್ನು ಮಾಡಿಸಬಾರದಾಗಿ ವಿಧಿಸಬೇಕು. ಈ ಕ್ರಮ ಶೀಘ್ರವೇ ಕೈಕೊಳ್ಳೋಣಾಗಬೇಕು. ಪರಿಷತ್ತು ಇದೇ ಪ್ರಥಮ ವಿಧಾಯಕ ಕಾರ್ಯಕ್ರಮವೆಂದಿಡೆನಿಸಿ ನಡಕೊಳ್ಳುವೆಕ. ವಿದ್ಯಾವಿಚಾರದ ಧರ್ಮ ಕೆಲಸಗಳನ್ನು ಮಂತ್ರಗಳಿಗಂತ ತಂತ್ರಗಳಿಂದಲೇ ಸಾಗಿಸಿ ಧರ್ಮಶ್ರದ್ಧೆಗಳ ನೇರಿನ ಅನಾದರವನ್ನು ವ್ಯಕ್ತಗೊಳಿಸಿದ್ದಾರೆಂದು ನನ್ನ ಅಭಿಪ್ರಾಯ. ಪುರೋಹಿತರು ತಿರಸ್ಕಾರಕ್ಕೆ ಗಾಗಲು ತಕ್ಕ ಶಿಕ್ಷಣದ ಅಭಾವವೇ ಕಾರಣ.

***

ಪ್ರೌಢ ವಿವಾಹ ಮತ್ತು ವರದಕ್ಷಿಣೆಯ ವಿಷಯ ಯಾವದೊಂದು ವ್ಯವಸ್ಥೆಯಾಗುವದು ತೀರ ಅವಶ್ಯವಾದ ಸಂಗತಿ. ಇವೆರಡೂ ವಿಷಯಗಳು ಪರಸ್ಪರ ಸಂಬಂಧಪಟ್ಟಿವೆ. ಬಾಲವಿವಾಹ-ಪ್ರತಿಬಂಧ ಕಾನೂನಿನಿಂದ ಪ್ರೌಢ-ವಿವಾಹದ ಅರಿಸ್ಪವುಂಟಾಗಿದೆ. ಮೊದಲು ವಿವಾಹ-ವಯೋಮಾನಕ್ಕೆ ಒಂದು ಸೀಮೆ ರೂಢವಾಗಿತ್ತು. ಕುಮಾರಿಯರು ಪ್ರಾಯಕ್ಕೆ ಬರುವ ಪೂರ್ವದಲ್ಲಿ ವಿವಾಹವಾಗಬೇಕೆಂಬ ದೊಂದು ಮನೋನಿಬ್ಬಂಧವಿತ್ತು. ಪ್ರೌಢ-ವಿವಾಹದ

(ಐನೇ ಪುಟಕ್ಕೆ ನೋಡಿರಿ.)

ಕಾನಡಾವೃತ್ತ.

ಮತ ಪ್ರಮಾಥಿ ಸಂವತ್ಸರ ಆಧಿಕ ಶ್ರಾವಣ ಬ|| ೧೫ನು ಸೋಮವಾರ

ರಾಜಬಂದಿಗಳಿಗೆ ಕೂಡಲೇ ಬಿಡುಗಡೆಯಾಗಲಿ!

